ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 27 ಸಂಚಿಕೆ 40 ಅಕ್ಟೋಬರ್ 02, 2005 ಬೆಲೆ ರೂ. 3.00



ಸೆಪ್ಟೆಂಬರ್ 29
ಇಮ್ಮಡಿಗೊಂಡ ಹೋರಾಟದ ಹುರುಪು

ಮಾನವ ಅಭಿವೃದ್ಧಿ ವರದಿ
ಭಾರತದ ಅಧೋಗತಿ





ದಿಕ್ಕು ಕಾಣದ ಬಿಜೆಪಿ



ಗುತ್ತಿಗೆ ಕೃಷಿ :
ಆಹಾರ ಸ್ವಾವಲಂಬನೆಗೆ ಮಾರಕ



- ಬಂಡಾಯದ 'ಹಸಿನಾ'
- ಕತ್ರಿನಾ : ದೈತ್ಯ ಅಮೆರಿಕಾದ ವಿಕೃತ ಮುಖ ಬಯಲು
- ರಾಜಸ್ಥಾನ : ರೈತ ಚಳುವಳಿಯ ಅಮೋಘ ಜಯ




1992-93 ರಲ್ಲಿ ಮುಂಬೈ ನಗರದಲ್ಲಿ ಅಲ್ಪಸಂಖ್ಯಾತ ಸಮುದಾಯದ ಮೇಲೆ ನಡೆದ ಹಿಂಸೆ-ಕೇಳುವವರ ಎದೆ ನಡುಗಿಸುವಂತಹ ಭೀಕರ ಹತ್ಯಾಕಾಂಡಗಳ ಹಿನ್ನೆಲೆಯಲ್ಲಿ ಕೋಮುವಾದ ತಲುಪಿರುವ ಘಟ್ಟವನ್ನು-ಅದರ ವಿವಿಧ ಮಗ್ಗಲುಗಳನ್ನು ವಿಶ್ಲೇಷಿಸಿರುವ ಈ ಲೇಖನವನ್ನು 'ಕೋಮುವಾದದ ಕರಾಳ ಮುಖಗಳು' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

ಕೋಮುವಾದದ ಕರಾಳ ಮುಖಗಳು

ಆದರೆ ಭಾರತದ ರಾಜಕಾರಣದ ಈ ದುರಂತ ದೃಶ್ಯಾವಳಿಯ ಅತ್ಯಂತ ಮಾರ್ಮಿಕ ಡಯಲಾಗ್ ಹೇಳಿದ ಕೀರ್ತಿ ಮಾತ್ರ ಶಿವಸೇನೆಯ ಲೋಕಸಭಾ ಸದಸ್ಯ ಮಧುಕರ ಸರ್ ಪೋತದಾರ ಎಂಬುವರಿಗೆ ಸಲ್ಲಬೇಕು.

ಆತ ಮುಂಬಯಿ ಗಲಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಶ್ರೀಕೃಷ್ಣ ಆಯೋಗದ ಎದುರು ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತ ಅವರು ಹೀಗೆ ಹೇಳಿದರು. "ಶಹರದ ಒಂದೆಡೆ ಹಿಂದುಗಳಿಗೆ ಏನಾದರೂ ಅನಾಹುತ ಸಂಭವಿಸಿದರೆ, ಬೇರೆ ಕಡೆ ನಿರಪರಾಧಿ ಮುಸ್ಲಿಮರ ವಿರುದ್ಧ ಪ್ರತೀಕಾರ ಕ್ರಮ ತೆಗೆದುಕೊಳ್ಳುವುದರಲ್ಲಿ ತಪ್ಪಿಲ್ಲ. ಅದು ಶಿವಸೇನೆಯ ಸಿದ್ಧಾಂತವೂ ಆಗಿದೆ". ಶಿವಸೇನೆಯ ಇನ್ನೊಬ್ಬ ನಾಯಕ ಮನೋಹರ ಜೋಷಿ 'ರಚನಾತ್ಮಕ ಪ್ರತೀಕಾರ' ಎಂಬ ಹೊಸ ನುಡಿಗಟ್ಟಿನಲ್ಲಿ ಹಿಂಸೆಯನ್ನು ಸಮರ್ಥಿಸಿದರು. ಪ್ರತೀಕಾರಕ್ಕೆ ಅಪರಾಧಿಗಳೇ ಆಗಬೇಕು ಎಂದಿಲ್ಲ. ಅವರ ಮತದವರು ಯಾರಾದರೂ ಆದೀತು! ಯಾವ ನಾಗರಿಕ ಸಮಾಜವೂ ಒಪ್ಪಿಕೊಳ್ಳದ ಈ ಅಪರಾಧ ಮತ್ತು ಶಿಕ್ಷೆಗಳ ವಿನೂತನ ಸಂಹಿತೆಯನ್ನು ಎತ್ತಿ ಹಿಡಿಯುವವರು ಬಿಜೆಪಿ ಮತ್ತು ಶಿವಸೇನೆಗಳವರು ಮಾತ್ರವಲ್ಲ, ಇಸ್ಲಾಮಿಕ್ ಕೋಮುವಾದಿಗಳದ್ದೂ ಇದೇ ನಿಲುವು. ಮಧುಕರ ಸರ್‌ಪೋತದಾರ, ತನ್ನ ನ್ಯಾಯ ಸಂಹಿತೆಯನ್ನು ಮುಂಬಯಿಗೆ ಮಾತ್ರ ಸೀಮಿತಗೊಳಿಸಿದ್ದರು. ಆದರೆ ಮುಂಬಯಿಯ ಪೊಲೀಸು ಪಡೆಯ ಜಾಯಿಂಟ್ ಕಮಿಷನರ್ ಆರ್.ಡಿ.ತ್ಯಾಗಿಗೆ ಮುಂಬಯಿಯ ಮುಸ್ಲಿಮರು ಕಾಶ್ಮೀರದ ಉಗ್ರಗಾಮಿಗಳ ಹಾಗೆ ಕಂಡರು! ಗಲಭೆಯ ಸಂದರ್ಭದಲ್ಲಿ ಅವರು ಶಹರದ ಸುಲೇಮಾನ್ ಬೇಕರಿ ಎಂಬ ಅಂಗಡಿಯ ಮೇಲೆ ಅನವಶ್ಯಕವಾಗಿ ಗುಂಡು ಹಾಕಿ 9 ಜನ ಮುಸ್ಲಿಮರನ್ನು ಕೊಂದುಹಾಕಿದ್ದ. ಆ ಬಗ್ಗೆ ಆತ ಹೀಗೆ ವಿವರಣೆ ನೀಡಿದ : "ನಾವು ಕಾಶ್ಮೀರಿ ಉಗ್ರಗಾಮಿಗಳನ್ನು ಗುರಿಯಾಗಿಸಿಕೊಂಡಿದ್ದೆವು. ಸುಲೇಮಾನ್ ಬೇಕರಿಯಲ್ಲಿ ಸೇರಿದ್ದ ಮುಸ್ಲಿಮರು ಉಗ್ರಗಾಮಿಗಳು ಎಂದು ಭಾವಿಸಿದೆವು". ಕೋಮುವಾದಿ ಹಿಂಸಾಚಾರವನ್ನು ತಡೆಗಟ್ಟಿ ಕಾನೂನು ವ್ಯವಸ್ಥೆ ಕಾಪಾಡುವ ಹೊಣೆಗಾರಿಕೆ ಇರುವ ಹಿರಿಯ ಪೊಲೀಸ್ ಅಧಿಕಾರಿಯೇ ಹೀಗೆ ಅಪ್ಪಟ ಕೋಮುವಾದಿಯಂತೆ ವರ್ತಿಸಿದರೆ ಇನ್ನು ಸಾಮಾನ್ಯ ಪೊಲೀಸು ಪೇದೆಗಳು ಹೇಗಿರಬಹುದು?

ಇದನ್ನು ಶ್ರೀ ಕೃಷ್ಣ ಆಯೋಗ ಹೀಗೆ ವಿವರಿಸುತ್ತದೆ : 'ಗಲಭೆಗಳಲ್ಲಿ ನೊಂದವರ ದೂರುಗಳನ್ನು ಪೊಲೀಸರು ಸಿನಿಕತನದಿಂದ ತಳ್ಳಿಹಾಕುತ್ತಿದ್ದರು. ದೂರು ಕೊಟ್ಟವರು ಮುಸ್ಲಿಮರಾಗಿದ್ದರಂತೂ ಅವರನ್ನು ಅತ್ಯಂತ ತಿರಸ್ಕಾರದಿಂದ ಕಾಣುತ್ತಿದ್ದರು. ಮುಸ್ಲಿಮರಿಂದ ರಕ್ಷಣೆಗಾಗಿ ಕರೆ ಬಂದರೆ, ಪೊಲೀಸರು ತಾವು ಠಾಣೆಯನ್ನು ಬಿಟ್ಟುಬರುವ ಸ್ಥಿತಿಯಲ್ಲಿ ಇಲ್ಲ ಎಂದು ಹೇಳುತ್ತಿದ್ದರು. ಒಮ್ಮೊಮ್ಮೆ 'ಒಬ್ಬ ಮುಸ್ಲಿಂ ಸತ್ತರೆ ಒಬ್ಬ ಮುಸ್ಲಿಂ ಕಡಿಮೆಯಾದ ಅಷ್ಟೆ". ಎಂದು ಸಹ ಹೇಳುತ್ತಿದ್ದರು. ಪೊಲೀಸ್ ಇಲಾಖೆಯ ಕೆಳ ಹುದ್ದೆಯ ಅಧಿಕಾರಿಗಳು ಮತ್ತು ಕಾನ್‌ಸ್ಟೇಬಲ್‌ಗಳ ವ್ಯಕ್ತಿತ್ವದಲ್ಲೇ ಮುಸ್ಲಿಮರ ಬಗ್ಗೆ ದ್ವೇಷ ಬೆರೆತುಹೋಗಿದೆ. ಮುಸ್ಲಿಂ ಆರೋಪಿಗಳು ಮತ್ತು ಸಂತ್ರಸ್ತರು ಇಬ್ಬರ ಬಗೆಗೂ ಅವರು ಅಮಾನುಷವಾಗಿ ವರ್ತಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಪೊಲೀಸರು ಈ ಗಲಭೆಗಳಲ್ಲಿ ಸ್ವತಃ ತಾವೇ ಭಾಗಿಗಳಾಗುತ್ತಿದ್ದರು. ಅಥವಾ ಅವಕ್ಕೆ ಮೂಕ ಪ್ರೇಕ್ಷಕರಾಗುತ್ತಿದ್ದರು. ಗಲಭೆಕೋರರ ವಿರುದ್ಧ ಮುಸ್ಲಿಮರು ಕೊಟ್ಟ ದೂರುಗಳಲ್ಲಿ, ಆರೋಪಿಗಳನ್ನು ಅವರುಸ್ಪಷ್ಟವಾಗಿ ಗುರುತಿಸಿದ ಸಂದರ್ಭಗಳಲ್ಲಿ ಸಹ ಪೊಲೀಸರು ಅವನ್ನು ದಾಖಲು ಮಾಡಿಕೊಳ್ಳುತ್ತಿರಲಿಲ್ಲ. ದಾಖಲು ಮಾಡಿಕೊಂಡರೂ, ಅದನ್ನು 'ಎ ಸಮ್ಮರಿ ಕೇಸು'ಗಳು ಎಂದು ಬರೆದುಕೊಳ್ಳುತ್ತಿದ್ದರು'. (ಇವು ದೂರಿನಲ್ಲಿ ವಿವರಿಸಲಾದ ಘಟನೆಗಳು ನಡೆದಿರುವುದು



ನಿಜವಾದರೂ ಆರೋಪಿಗಳನ್ನು ಹೆಸರಿಸದೆ ಅವರನ್ನು 'ಗುಂಪು', 'ಅಪರಿಚಿತರು' ಎಂದು ಮುಂತಾಗಿ ನಮೂದಿಸಿಕೊಳ್ಳುವ ಕೇಸುಗಳು, ಕೋಮುಗಲಭೆಗಳಲ್ಲಿ ಪೋಲೀಸರು ದಾಖಲು ಮಾಡಿಕೊಳ್ಳುವ ಹೆಚ್ಚಿನ ದೂರುಗಳು ಈ ನಮೂನೆಯವು)

1992-93 ರ ಮುಂಬಯಿ ಗಲಭೆಗಳು ಇನ್ನೂ ಹಲವಾರು ಕಾರಣಗಳಿಗೆ ವಿಶಿಷ್ಟವಾಗಿವೆ. ಅದುವರೆಗಿನ ಕೋಮು ಹಿಂಸಾಚಾರ, ಪ್ರಮಾಣದಲ್ಲಿ ಎಷ್ಟೇ ದೊಡ್ಡದಾಗಿದ್ದರೂ ಬಿಡಿ ಘಟನೆಗಳ ರೂಪದಲ್ಲಿ ಮಾತ್ರ ಕಾಣಿಸಿಕೊಂಡಿತ್ತು. ಮುಂಬಯಿ ಗಲಭೆಗೆ ಒಂದು ಸರಣಿಯ ಮತ್ತು ಚಳುವಳಿಯ ಸ್ವರೂಪವಿದೆ. ಅದು ರಾಮಜನ್ಮಭೂಮಿಚಳುವಳಿಯ ಉನ್ಮಾದದ ಮುಂದುವರಿಕೆ ಆಗಿತ್ತು. ಜೊತೆಗೆ ದೇಶಾದ್ಯಂತ ಆ ಚಳುವಳಿಯ ಕಾರಣದಿಂದ ನಡೆದ ಹಿಂಸಾಚಾರದ ಅತ್ಯಂತ ಘೋರ ರೂಪವೂ ಆಗಿತ್ತು. ಹೀಗೆ ಒಂದು ಸುದೀರ್ಘ ಧಾರವಾಹಿಯಂತೆ ಸಂಭವಿಸಿದ ಹಿಂಸೆಗೆ 'ಗಲಭೆ', 'ಘರ್ಷಣೆ' ಇತ್ಯಾದಿ ಶಬ್ದಗಳು ಸೂಕ್ತವಲ್ಲ. ಎರಡು ಕೋಮಿನ ಗುಂಪುಗಳು ಏನೋ ನೆವ ಮಾಡಿಕೊಂಡು ಪರಸ್ಪರ ಹೊಡೆದಾಡಿಕೊಳ್ಳುವುದು, ಆಸ್ತಿಪಾಸ್ತಿ ನಾಶ ಮಾಡುವುದು, ಆದರೆ ಎರಡೂ ಕೋಮಿನ ಪ್ರತಿಷ್ಠಿತರು ಮತ್ತು ಸಭ್ಯರು ಈ ದೊಂಬಿಯಿಂದ ದೂರವಿರುವುದು - 'ಗಲಭೆ' ಎಂಬ ಶಬ್ದ ಧ್ವನಿಸುವುದು ಈ ಬಗೆಯ ಘಟನೆಗಳನ್ನು. ಆದರೆ ರಾಮ ಜನ್ಮಭೂಮಿ ಚಳುವಳಿಯ ನಂತರ ದೇಶಾದ್ಯಂತ ತಲೆದೋರಿದ ಹಿಂಸಾಚಾರ ಈ ಬಗೆಯದ್ದಲ್ಲ, ಮುಸ್ಲಿಮರ ವಿರುದ್ಧ ಸತತ ಅಪಪ್ರಚಾರ ಹಾಗೂ ಹಿಂಸೆಗೆ ಪ್ರಚೋದನೆ - ಈ ಬಗೆಯ ನಿರಂತರವೂ ಏಕಪಕ್ಷೀಯವೂ ಆದ ದ್ವೇಷ ಸಾಧನೆಗೆ ಸೂಕ್ತ ಶಬ್ದವೊಂದನ್ನು ನಾವು ಇನ್ನೂ ಕಂಡುಕೊಳ್ಳಬೇಕಾಗಿದೆ. ಮುಂಬಯಿಯ ಭೀಕರ ಘಟನೆಗಳನ್ನು 'ಗಲಭೆ' ಎಂದು ಕರೆಯುವುದೇ ಆ ಘಟನೆಗಳ ಏಕಪಕ್ಷೀಯತೆ, ಪೂರ್ವತಯಾರಿ ಮತ್ತು ಸರ್ಕಾರವೇ ಅದರಲ್ಲಿ ಶಾಮೀಲಾಗಿದ್ದುದನ್ನು ಮರೆಮಾಚುತ್ತದೆ.

ರಾಮಜನ್ಮಭೂಮಿ ಚಳುವಳಿ ಯವರೆಗೆ, ಹಿಂದು ಕೋಮುವಾದಿ ಸಂಘಟನೆಗಳ ನಾಯಕರು, ಕೋಮುಘರ್ಷಣೆಗಳ ಜೊತೆ ನೇರವಾಗಿ ತಮ್ಮನ್ನು ಗುರುತಿಸಿಕೊಳ್ಳಲು ಹಿಂಜರಿಯುತ್ತಿದ್ದರು. ಕೋಮು ಹಿಂಸಾಚಾರದ ಬಗ್ಗೆ ನೇಮಕಗೊಂಡ ಹೆಚ್ಚಿನ ವಿಚಾರಣಾ ಸಮಿತಿಗಳ ವರದಿಗಳು ಬಿಜೆಪಿ, ಆರ್‌ಎಸ್‌ಎಸ್, ಶಿವಸೇನೆ ಮುಂತಾದ ಸಂಘಟನೆಗಳ ಕೈವಾಡವಿರುವುದನ್ನು ಎತ್ತಿ ತೋರಿಸಿದ್ದರೂ 'ಕೋಮು ಹಿಂಸೆಗೂ ತಮಗೂ ಸಂಬಂಧವಿಲ್ಲ. ಅದೆಲ್ಲಾ ಕಾಂಗ್ರೆಸ್ ಪಕ್ಷದ ಚಿತಾವಣೆ' ಎಂಬುದು ಈ ಸಂಘಟನೆಗಳ ಅಧಿಕೃತ ಧೋರಣೆಯಾಗಿತ್ತು. ಅದು ಸೋಗಲಾಡಿತನ ನಿಜ. ಆದರೆ 'ಸೋಗಲಾಡಿತನವನ್ನು ದುಷ್ಟತನ, ಸಜ್ಜನಿಕೆಗೆ ಸಲ್ಲಿಸುವ ಕಾಣಿಕೆ' ಎಂಬ ಆರ್ವೆಲ್‌ನ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಬಿಜೆಪಿ ಮತ್ತು ಇತರ ಸಂಘಟನೆಗಳು ಕೋಮು ಘರ್ಷಣೆಗಳಿಗೂ ತಮಗೂ ಸಂಬಂಧವಿಲ್ಲ ಎಂದು ಹೇಳುವಷ್ಟರ ಮಟ್ಟಿಗಾದರೂ ಹಿಂಸೆ ತರವಲ್ಲ ಎಂಬ ಮೌಲ್ಯವನ್ನು ಎತ್ತಿಹಿಡಿದಿದ್ದವು. ರಾಮಜನ್ಮಭೂಮಿ ಚಳುವಳಿಯ ನಂತರ ಅವು ಸೋಗಲಾಡಿತನದ ಈ ಸಜ್ಜನಿಕೆಯನ್ನೂ ಉಳಿಸಿಕೊಳ್ಳಲಿಲ್ಲ. ಮುಂಬಯಿ ಗಲಭೆಗಳಲ್ಲಿ ಬಾಳಠಾಕ್ರೆ, ಮನೋಹರ ಜೋಷಿ, ಮಧುಕರ ಸರ್‌ಪೋತದಾರ್, ಗೋಪಿನಾಥ ಮುಂಡೆ ಮೊದಲಾದ ಬಿಜೆಪಿ-ಶಿವಸೇನೆ ನಾಯಕರು, ಗಲಭೆಕೋರರ ಜೊತೆ ಎಗ್ಗಿಲ್ಲದೆ ತಮ್ಮನ್ನು ಗುರುತಿಸಿಕೊಂಡರು. ಈ ಪಕ್ಷಗಳ ಸ್ಥಳೀಯ ನಾಯಕರು, ಗುಂಪು ಹಿಂಸಾಚಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಮೊತ್ತಮೊದಲ ಬಾರಿಗೆ ಮಧ್ಯಮ ವರ್ಗದವರು ಮತ್ತು ಮಹಿಳೆಯರು ಕೂಡ ಹಿಂಸೆಯಲ್ಲಿ ಪಾಲ್ಗೊಂಡರು. ಮುಸ್ಲಿಮರು ಮುಸ್ಲಿಮರಾಗಿರುವ ಕಾರಣಕ್ಕೇನೆ ಅಪರಾಧಿಗಳು



ಮಗುವನ್ನು ಚಿವುಟಿ ತೊಟ್ಟಿಲನ್ನೂ ತೂಗುವವರು

ಎಂಬ ಮೌಲ್ಯ - ರಾಮಜನ್ಮಭೂಮಿ ಚಳುವಳಿ ಜನಪ್ರಿಯಗೊಳಿಸಿದ ಮೌಲ್ಯ ಇದು - ಮುಂಬಯಿಯ ಚಾಳು, ಗಲ್ಲಿ, ಮೊಹಲ್ಲಗಳಲ್ಲಿ, ತಾನೇ ತಾನಾಗಿ ಮೆರೆಯಿತು. ನಾಗರಿಕ ಸಮಾಜಗಳಲ್ಲಿ ಅಪರಾಧಿಗಳನ್ನು ಶಿಕ್ಷಿಸುವ ಮತ್ತು ಆಯುಧಗಳನ್ನು ಇಟ್ಟುಕೊಳ್ಳುವ ದಂಡಾಧಿಕಾರ ಪ್ರಭುತ್ವದ ಬಳಿ ಮಾತ್ರ ಇರತಕ್ಕದ್ದು, ಆದರೆ ಮುಂಬಯಿಯ ಬೀದಿಗಳಲ್ಲಿ ಶಸ್ತ್ರಸಜ್ಜಿತರಾದ ಜನರ ಗುಂಪುಗಳು, ತಾವೇ 'ಅಪರಾಧಿ'ಗಳನ್ನು ಅಮಾನುಷ ವಿಧಾನಗಳಲ್ಲಿ ಶಿಕ್ಷಿಸಿದರು. ಇದು ಎಷ್ಟು ವ್ಯವಸ್ಥಿತವಾಗಿ ನಡೆಯಿತು ಎಂದರೆ ಗಲಭೆಕೋರರು ಮತದಾರರ ಪಟ್ಟಿಗಳನ್ನು ಹಿಡಿದುಕೊಂಡು ಮುಸ್ಲಿಂ ಮನೆಗಳನ್ನು ಗುರುತಿಸಿ ಧಾಳಿ ಮಾಡಿದ್ದನ್ನು ಶ್ರೀಕೃಷ್ಣ ಆಯೋಗವೇ ಗುರುತಿಸಿದೆ. ನಾಗರಿಕ ಸಮಾಜ, ಪ್ರಜಾಪ್ರಭುತ್ವ ಮತ್ತು ಕಾನೂನಿನ ಆಳ್ವಿಕೆಗಳ ಸಂವಿಧಾನದ ಹಂದರವೇ ಮುಂಬಯಿಯಲ್ಲಿ ಕುಸಿದುಬಿದ್ದಿತು. ಇದಕ್ಕೆ ನಿದರ್ಶನವಾಗಿ ಶ್ರೀಕೃಷ್ಣ ಆಯೋಗ ದಾಖಲಿಸಿದ ಮುಂಬಯಿ ಗಲಭೆಗಳ ನೂರಾರು ಪ್ರಕರಣಗಳಲ್ಲಿ ಒಂದರ ನಿರೂಪಣೆಯನ್ನು ಅದರ ಮಾತುಗಳಲ್ಲೇ ಇಲ್ಲಿ ಕೊಡುತ್ತಿದ್ದೇವೆ.

'ಪ್ರತೀಕ್ಷನಗರ (ಮುಂಬಯಿಯ ಒಂದು ಬಡಾವಣೆ) ದಲ್ಲಿ ಮಾರುತಿ ಕಾರಿನಲ್ಲಿ ಸಂಚರಿಸುತ್ತಿದ್ದ ಮೂವರನ್ನು ಹೊರಗೆಳೆದು ಅವರನ್ನು ಚೆನ್ನಾಗಿ ಥಳಿಸಿ ಕಾರಿನೊಳಗೆ ನೂಕಿ ಬೆಂಕಿ ಕೊಡಲಾಯಿತು. ಈ ಘಟನೆ ಪ್ರತೀಕ್ಷಾನಗರದ ಮನೋಹರ ಕಿಣಿ ಸ್ಮಾರಕ ಗ್ರಂಥಾಲಯದ ಕಟ್ಟಡದ ಎದುರು, 1993 ಜನವರಿ 14 ರಂದು 14. 30 ಗಂಟೆಗೆ ನಡೆಯಿತು. ಈ ಸ್ಥಳದಿಂದ ಕೇವಲ 150 ಅಡಿ ದೂರದಲ್ಲಿದ್ದ ಶಿವಾಜಿ ಚೌಕದಲ್ಲಿ ಮೂವರು ಸಶಸ್ತ್ರ ಪಿ.ಸಿ.ಗಳು ಖಾಯಂ ಬಂದೋಬಸ್ತ್ ಡ್ಯೂಟಿಮೇಲಿದ್ದರು. ಆದರೆ ಈ ಪ್ರಕರಣವನ್ನು ತಡೆಯಲು ಅವರು ಏನೂ ಮಾಡಿದ ಹಾಗೆ ಕಾಣುವುದಿಲ್ಲ. ಈ ಘಟನೆ ಒಂದು ಗಮನಾರ್ಹ ಬೆಳವಣಿಗೆಗೆ ಕಾರಣವಾಯಿತು. 1993 ಜನವರಿ 15 ರಂದು ಅಂದರೆ ಘಟನೆಯ ಮಾರನೆಯ ದಿನ ಘಟನೆಗೆ ಸಂಬಂಧಿಸಿದ ಇಬ್ಬರನ್ನು ಪೋಲೀಸರು ಸೆರೆ ಹಿಡಿದರು. ಅದೇ ದಿನ ಶಿವಸೇನೆಯ ಶಾಖಾ ಪ್ರಮುಖ್ ಪ್ರಹ್ಲಾದ್ ತೊಂಬ್ರೆ, ಕಾಂಗ್ರೆಸ್ ಶಾಸಕ ಏಕನಾಥ ಗಾಯಕ್‌ವಾಡ್, ಕಾಂಗ್ರೆಸ್ ನಗರ ಪಾಲಿಕಾ ಸದಸ್ಯೆ ಶ್ರೀಮತಿ ಕರುಣಾ ಮಾತ್ರೆ ಮತ್ತು ಇತರರ ನಾಯಕತ್ವದಲ್ಲಿ ಸುಮಾರು 3 ರಿಂದ 4 ಸಾವಿರದಷ್ಟಿದ್ದ ಜನಗಳ ಗುಂಪು ಮೆರವಣಿಗೆಯಲ್ಲಿ ಪೊಲೀಸ್ ಠಾಣೆಗೆ ಬಂದು ಬಂಧಿತನ್ನು ಬಿಡುಗಡೆಗೊಳಿಸಲು ಒತ್ತಾಯಿಸಿತು. ಪ್ರತೀಕ್ಷಾ ನಗರದ ಹಲವು ಮುಸ್ಲಿಂ ಮನೆಗಳ ಮೇಲೆ ವ್ಯವಸ್ಥಿತವಾಗಿ ದಾಳಿಗಳು ನಡೆದಿದ್ದವು. ಈ ದಾಳಿ ನಡೆಸಿದವರೆಲ್ಲರೂ ಅಸುಪಾಸಿನವರೇ ಆಗಿದ್ದರು. ಪೊಲೀಸರಿಗೆ ಈ ಮುಸ್ಲಿಮರು ಕೊಟ್ಟ ದೂರುಗಳಲ್ಲಿ ಇವರ ಹೆಸರು ವಿಳಾಸಗಳನ್ನು ನಮೂದಿಸಲಾಗಿತ್ತು. ಆದರೆ ಈ ಎಲ್ಲಾ ದೂರುಗಳೂ 'ಎ ಸಮ್ಮರಿ ಕೇಸುಗಳು' ಎಂದು ದಾಖಲಾದವು. ಪ್ರತೀಕ್ಷಾ ನಗರದ ಸುಮಾರು 3 ರಿಂದ 4 ಸಾವಿರದಷ್ಟು ಮುಸ್ಲಿಮರು ಭಯಗ್ರಸ್ತರಾಗಿ, ತಮ್ಮ ಮನೆಗಳಿಗೆ ಬೀಗ ಹಾಕಿ ಸುಂದರ್ ವಿಹಾರ್ ಹೋಟೆಲಿನ ಬಳಿ ಒಟ್ಟುಸೇರಿದರು. ಅವರನ್ನು ಸುಮಾರು 40 ರಿಂದ 50 ಸಾವಿರ ಹಿಂದುಗಳು ಸುತ್ತುವರಿದಿದ್ದರು. 1993 ಜನವರಿ 9 ರಿಂದ ಜನವರಿ 12 ರವರೆಗೆ ಮೂರು ದಿನಗಳ ಕಾಲ ಮುಸ್ಲಿಮರು ಯಾವ ಕ್ಷಣದಲ್ಲಿ ತಮ್ಮ ಮೇಲೆ ದಾಳಿ ನಡೆಯುತ್ತದೋ ಎಂಬ ಭಯದಲ್ಲಿ ಕಳೆದರು. ಜನರಿ 13 ರಂದು ಸೈನ್ಯದ ತುಕಡಿಯೊಂದು ಈ ಜನರನ್ನು ಸುರಕ್ಷಿತ ಸ್ಥಳಕ್ಕೆ ತಲುಪಿಸಿತು. ಸಾಮಾನ್ಯ ಪ್ರಜೆಗಳು ಕೂಡಾ ಮೈಗೂಡಿಸಿಕೊಂಡ ಕೋಮುದ್ವೇಷಕ್ಕೆ ಈ ಪ್ರಕರಣ ಒಂದು ಉದಾಹರಣೆ. ಭಾರಿ ಸಂಖ್ಯೆಯಲ್ಲಿ ಅಲ್ಲಿ ಒಟ್ಟುಸೇರಿದ್ದ ಹಿಂದುಗಳು ಆ ಮುಸ್ಲಿಮರಿಗೆ ಪೊಲೀಸರಿಂದ ಯಾವುದೇ ನೆರವು ಸಿಗದಂತೆ ನೋಡಿಕೊಂಡರು. ಸುಂದರ್ ವಿಹಾರ್ ಹೋಟೆಲಿನ ಬಳಿ ಸಿಕ್ಕಿಹಾಕಿಕೊಂಡಿದ್ದ ಮುಸ್ಲಿಮರಿಗೆ ಆಹಾರ ಸರಬರಾಜು ಮಾಡಲು ಬಂದ ವಾಹನಗಳನ್ನೂ ಗಲಭೆಕೋರರು ಓಡಿಸಿಬಿಟ್ಟರು. ಕಡೆಗೆ ಸೈನ್ಯದ ವಾಹನಗಳಲ್ಲಿ ಈ ಮುಸ್ಲಿಮರನ್ನು ಸಾಗಿಸುತ್ತಿದ್ದಾಗ ಆ ವಾಹನಗಳ ಮೇಲೆ ಕೂಡ ಅವರು ಹಲ್ಲೆ ಮಾಡಿದರು. ಸೈನಿಕರು ಗೋಲಿಬಾರ್ ಮಾಡಿ ಅವರನ್ನು ಚದುರಿಸಬೇಕಾಯಿತು.

ಸಂಚಾರ-ಕೆಲಸ-ವ್ಯಾಪಾರಗಳ ಸ್ವಯಂಪ್ರೇರಿತ ನಿಲುಗಡೆಗೆ ವಿವಿಧ ರಾಜಕೀಯ ಪಕ್ಷಗಳ-ಸಂಘಟನೆಗಳ ಬೆಂಬಲ

ಸೆಪ್ಟೆಂಬರ್ 29 ರಂದು ನಡೆಯುತ್ತಿರುವ ಐತಿಹಾಸಿಕ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಿ, ಜನಪರವಾದ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯದ ವಿವಿಧ ರೈತ - ಕಾರ್ಮಿಕ - ದಲಿತ-ವರ್ತಕ ಸಂಘಟನೆಗಳು ಜಂಟಿಯಾಗಿ ರಾಜ್ಯಾದ್ಯಂತ ಸೆಪ್ಟಂಬರ್ 29ರಂದು ಸಂಚಾರ-ಕೆಲಸ-ವ್ಯಾಪಾರಗಳ ನಿಲುಗಡೆಗೆ ಕರೆ ನೀಡಿದ್ದು ರೈತ-ಕೂಲಿಕಾರರು ನಡೆಸುವ ರೈಲು ಮತ್ತು ರಸ್ತಾ ರೋಖೋ ಕಾರ್ಯಕ್ರಮಗಳಿಗೆ ಬೆಂಬಲ ಘೋಷಿಸಿವೆ. ಈ ಸಂಘಟನೆಗಳು ಬೆಂಗಳೂರಿನಲ್ಲಿ ನಡೆಸಿದ ಸುದ್ದಿ ಗೋಷ್ಠಿಯಲ್ಲಿ ನೀಡಿದ ಮಾಹಿತಿ ಇಲ್ಲಿದೆ.

ಸೆಪ್ಟೆಂಬರ್ 29 ರ ಸಾರ್ವತ್ರಿಕ ಮುಷ್ಕರ

ದೇಶದ ದುಡಿಯುವ ಜನತೆಯ ಜ್ವಲಂತ ಸಂಕಷ್ಟಗಳ ಪರಿಹಾರಕ್ಕಾಗಿ ಮತ್ತು ದೇಶವನ್ನುಳಿಸುವ ಬೇಡಿಕೆಗಳಿಗಾಗಿ ಆಗ್ರಹಿಸಿ ಇದೇ ಸೆಪ್ಟಂಬರ್ 29 ರಂದು ರಾಷ್ಟ್ರದಾದ್ಯಂತ ಸಾರ್ವತ್ರಿಕ ಮುಷ್ಕರ - ಹರತಾಳ ನಡೆಸಲು ಕಾರ್ಮಿಕ ವರ್ಗದ ಹಾಗೂ ನೌಕರರ ಸಂಘಟನೆಗಳು ಐತಿಹಾಸಿಕ ಕರೆಯನ್ನು ನೀಡಿವೆ. ಹಾಗೆಯೇ ಭಾರತದ ಹಾಗೂ ಕರ್ನಾಟಕದ ರೈತ - ಕೃಷಿ ಕೂಲಿಕಾರರ ಸಂಘಟನೆಗಳು 'ಕೃಷಿ ರಕ್ಷಿಸಿ ದೇಶ ಉಳಿಸಿ' ಎಂದು ರಸ್ತೆ ತಡೆ, ರೈಲ್ ರೋಖೋ ನಡೆಸಿ ಹಕ್ಕೊತ್ತಾಯ ವನ್ನು ಬೆಂಬಲಿಸಿವೆ.

ಸತತವಾಗಿ ಹೆಚ್ಚಿಸಲಾಗುತ್ತಿರುವ ಡಿಸೇಲ್-ಪೆಟ್ರೋಲ್ ದರಗಳು ಇದನ್ನೇ ನೆಪವಾಗಿಸಿಕೊಂಡು ಬಸ್ ಪ್ರಯಾಣ ದರ ಏರಿಸುವ ಪ್ರಸ್ತಾಪ, ವಿದ್ಯುತ್ ದರಗಳ ಏರಿಕೆ ಪ್ರಸ್ತಾಪ, ಹೆಚ್ಚುತ್ತಿರುವ ನಿರುದ್ಯೋಗ, ಕುಸಿಯುತ್ತಿರುವ ಆದಾಯ, ಪಡಿತರ ವ್ಯವಸ್ಥೆಯಲ್ಲಿ ಸಮಸ್ಯೆಗಳು, ಶಿಕ್ಷಣದ ಖಾಸಗೀಕರಣ, ಸೀಟಿ ಬಿಕ್ಕಟ್ಟು, ಆಹಾರ, ಕೃಷಿ ವ್ಯವಸ್ಥೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸುವ ಹುನ್ನಾರ, ಚಿಲ್ಲರೆ ವ್ಯಾಪಾರ ರಂಗದಲ್ಲಿ ವಿದೇಶಿ ಬಂಡವಾಳಕ್ಕೆ ಆಹ್ವಾನ, ಕೃಷಿ-ಕೈಗಾರಿಕಾ ಬಿಕ್ಕಟ್ಟು, ಕಾರ್ಮಿಕ ವರ್ಗ ವಿರೋದಿ ನೀತಿಗಳು - ಜನತೆಯ ಇಂತಹ ಜ್ವಲಂತ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಹಾಗೂ ಜನ ವಿರೋಧಿ ನೀತಿಗಳನ್ನು ಕೈಬಿಡಲು ಕೇಂದ್ರ-ರಾಜ್ಯ ಸರ್ಕಾರಗಳನ್ನು ಆಗ್ರಹಿಸಿ, ಇದೇ ಸೆಪ್ಟಂಬರ್ 29 ರಂದು ಕರ್ನಾಟಕ ರಾಜ್ಯದಾದ್ಯಂತ ಸ್ವಯಂ ಪ್ರೇರಿತರಾಗಿ "ಕೆಲಸ ನಿಲ್ಲಿಸಿ, ಸಂಚಾರ ನಿಲ್ಲಿಸಿ, ವ್ಯಾಪಾರ-ವಹಿವಾಟು ನಿಲ್ಲಿಸಿ ಪ್ರತಿಭಟಿಸಿ" ಎಂಬ ಕರೆಯನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಸರ್ವೋದಯ ಕರ್ನಾಟಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ(ನಂಜುಂಡಸ್ವಾಮಿ), ಕರ್ನಾಟಕ ರಾಜ್ಯ ರೈತ ಸಂಘ(ಪುಟ್ಟಣ್ಣಯ್ಯ), ಬೆಂಗಳೂರು ಸಗಟು ಆಹಾರ ಧಾನ್ಯ ಮತ್ತು ಬೇಳೆಕಾಳುಗಳ ವರ್ತಕರ ಸಂಘ, ಧಾನ್ಯ ವರ್ತಕರ ಸಂಘ, ಎಪಿಎಂಸಿ ಜಂಟಿ ಕ್ರಿಯಾ ಸಮಿತಿ ಇತ್ಯಾದಿ ಸಂಘಟನೆಗಳು ನೀಡಿವೆ.

ಮೇಲ್ಕಾಣಿಸಿದ ಪಕ್ಷಗಳು ಹಾಗೂ ಸಂಘಟನೆಗಳು ಕಾರ್ಮಿಕ ವರ್ಗದ ಸಾರ್ವತ್ರಿಕ ಮುಷ್ಕರ ಮತ್ತು ರೈತರ ರಸ್ತಾ ರೋಖೋ, ರೈಲ್‌ರೋಖೋ, ಹೋರಾಟಗಳನ್ನು ಸಂಪೂರ್ಣವಾಗಿ ಬೆಂಬಲಿಸಿವೆ.

ಹೀಗೆ ದಲಿತರು, ರೈತರು, ಕಾರ್ಮಿಕರು, ಕೂಲಿಕಾರರು, ವರ್ತಕರು, ವಿದ್ಯಾರ್ಥಿ, ಯುವಜನ-ಮಹಿಳೆಯರು, ನೌಕರರು, "ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ" ಪ್ರತಿಭಟನೆಗೆ ಇಳಿಯುತ್ತಿರುವುದು ಐತಿಹಾಸಿಕವಾಗಿದೆ.

ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಜನಾದೇಶ - ದೇಶವಿರೋಧಿ ನೀತಿಗಳನ್ನು ಅನುಸರಿಸಿದ ಬಿಜೆಪಿ-ನೇತೃತ್ವದ ಕೋಮುವಾದಿ ಕೂಟವನ್ನು ಜನತೆ ತಿರಸ್ಕರಿಸಿದ್ದಾರೆ, ಹಾಗೆಯೇ ಉದಾರೀಕರಣ, ಜಾಗತೀಕರಣಗಳ ಆರಾಧಕರಾಗಿದ್ದ ಕಾಂಗ್ರೆಸ್‌ನ ಎಸ್.ಎಂ.ಕೃಷ್ಣರವರ ಜನವಿರೋಧಿ ಸರ್ಕಾರವನ್ನು ಜನತೆ ಸೋಲಿಸಿದರು. ಆ ಬಳಿಕ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರ ಹಾಗೂ ರಾಜ್ಯದಲ್ಲಿನ ಕಾಂಗ್ರೆಸ್ ಮತ್ತು ಜನತಾ ದಳ(ಎಸ್)ನ ಮೈತ್ರಿ ಕೂಟದ ಸರ್ಕಾರಗಳು ಜನಾದೇಶವನ್ನು ಉಲ್ಲಂಘಿಸಿ ಹಿಂದಿನ ಸರ್ಕಾರಗಳ ಹಾದಿಯನ್ನೆ ತುಳಿದು ಜನತೆಯ ಮೇಲೆ ಸಂಕಷ್ಟಗಳ ಹೊರೆಯನ್ನು ಹೇರುತ್ತಿವೆ. ಯು.ಪಿ.ಎ ಸರ್ಕಾರ ಕೆಲ ಸೀಮಿತ ಪರಿಹಾರಗಳನ್ನು ನೀಡಿದರೂ ದೇಶಿ ಮತ್ತು ವಿದೇಶಿ ಬಂಡವಾಳಗಾರರ ಅವಶ್ಯಕತೆಗಳನ್ನು ಪೂರೈಸಲು ತೋರುತ್ತಿರುವ ಆತುರ, ಹಾಗೂ ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಮಾಡುತ್ತಿರುವ ವಿಳಂಬ ಕಣ್ಣಿಗೆ ಹೊಡೆಯುವಂತಿದೆ.



ಪತ್ರಿಕಾಗೋಷ್ಠಿಯಲ್ಲಿ ವಿವಿಧ ಪಕ್ಷಗಳ, ಸಂಘಟನೆಗಳ ಮುಖಂಡರು

ಇಂತಹ ನೀತಿಗಳೇ ಮುಂದುವರಿದರೆ ಜನತೆ ಇನ್ನೂ ದೊಡ್ಡ ಸಂಕಟಗಳನ್ನು ಎದುರಿಸಬೇಕಾಗುತ್ತದೆ. ದೇಶದ ಮುಖ್ಯ ಜೀವ ನಾಡಿಗಳು ಬಹುರಾಷ್ಟ್ರೀಯ ಕಂಪನಿಗಳ ಕೈ ಸೇರಿ ನಾವು ಒದ್ದಾಡುವಂತಾಗುತ್ತದೆ. ಆದ್ದರಿಂದ ಯು.ಪಿ.ಎ. ಸರ್ಕಾರಕ್ಕೆ ಈಗಲೇ ಎಚ್ಚರಿಕೆ ನೀಡುವುದು, ಅವರ ರೈತ ಕಾರ್ಮಿಕ ವಿರೋಧಿ, ದಲಿತ ವಿರೋಧಿ, ಒಟ್ಟಾರೆ ಜನವಿರೋಧಿ ಕ್ರಮಗಳಿಗೆ ತಡೆಯೊಡ್ಡುವುದು, ಭಾರತದ ಹಾಗೂ ಕರ್ನಾಟಕ ಜನತೆಯ ಆದೇಶವನ್ನು ಪಾಲಿಸುವಂತೆ ಒತ್ತಾಯಿಸುವುದು ನಮ್ಮ ಕರೆಯ ಮುಖ್ಯ ಧ್ವನಿಯಾಗಿದೆ.

ಸೆಪ್ಟಂಬರ್ 29 ರಂದು ಮಹಾ ಪ್ರತಿಭಟ... ಮತ್ತು ಸಾರ್ವತ್ರಿಕ ಮುಷ್ಕರ ಸ್ವಯಂ ಪ್ರೇರಿತವಾಗಿ "ಕೆಲಸ, ಸಂಚಾರ, ವ್ಯಾಪಾ... ನಿಲ್ಲಿಸಿ, ಪ್ರತಿಭಟಿಸಿ".

ಸೆಪ್ಟಂಬರ್ 29 ರಂದು ಕರ್ನಾಟಕದ ಎಲ್ಲಾ ವಿಭಾಗದ ಜನತೆ ಸ್ವಯಂ ಇಚ್ಛೆಯಿಂದ ವಿಶಾ... ರೂಪದ ಪ್ರತಿಭಟನೆ ಮಾಡಲು ಸಿದ್ಧತೆ ನಡೆಸಿದ್ದಾರೆ. ಅಂದು ವರ್ತಕರ ಸಂಘಗಳೂ ಕೂ... ಚಿಲ್ಲರೆ ವ್ಯಾಪಾರದಲ್ಲಿ ವಿದೇ... ಬಂಡವಾಳದ ವಿರುದ್ಧ ಅಂಗ... ಮುಗ್ಗಟ್ಟುಗಳನ್ನು ಮುಚ್ಚುತ್ತಿದ್ದಾರೆ. ಪೆಟ್ರೋಲ್, ಡೀಸೆಲ್ ಬೆಲೆ ಏರಿ... ವಿರುದ್ಧ ಖಾಸಗಿ ಬಸ್ ಗಳ ಮಾಲಿಕರು, ಸಂಘಗ... ಪ್ರತಿಭಟಿಸಿ ವಾಹನ ಸಂಚಾರ ನಿಲ್ಲಿಸಲು ತೀರ್ಮಾನಿಸಿವೆ. ಇತರ ಖಾಸಗಿ ವಾಹನಗಳ ಮಾಲಿಕರು ಕೂಡ ಸ್ವಯಂ ಪ್ರೇರಿತರಾಗಿ ವ್ಯಾಪ... ಪ್ರತಿಭಟನೆಯಲ್ಲಿ ಭಾಗವಹಿಸಲು ರಾಜ್ಯದ ಅನೇಕ ನಗರ, ಪಟ್ಟಣಗಳ... ಸಿದ್ದತೆ ನಡೆಸುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಸೆ.2... ರಂದು ಕರ್ನಾಟಕ ರಾಜ್ಯಾದ್ಯಂತ ಜನ... ಸ್ವಯಂ ಇಚ್ಛೆಯಿಂದ ಕೆಲಸ ಸಂಚಾರ, ವ್ಯಾಪಾರ ನಿಲುಗ... ಕರೆಯನ್ನು ಜಾರಿಮಾಡಲು ಮುಂದಾಗಬೇಕೆಂದು ಎಲ್ಲಾ ವಿಭಾಗಗಳ ಜನತೆಗೆ ಸಿಪಿಐ(ಎಂ) ಕಾರ್ಯದರ್ಶಿ ಜಿ.ಎನ್.ನಾಗರಾಜ್ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಸರ್ವೋದಯ ಕರ್ನಾಟಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಇಂದೂಧರ ಹೊನ್ನಾಪುರ, ಕರ್ನಾಟಕ ರಾಜ್ಯ ರೈ... ಸಂಘ(ನಂಜುಂಡಸ್ವಾಮಿ) ದ ಗೌರವಾಧ್ಯಕ್ಷರಾ... ಶೇಷಾರೆಡ್ಡಿ, ಕರ್ನಾಟಕ ರಾಜ್ಯ ರೈ... ಸಂಘ(ಪುಟ್ಟಣ್ಣಯ್ಯ), ಬೆಂಗಳೂರು ಸಗಟು ಆಹಾ... ಧಾನ್ಯ ಮತ್ತು ಬೇಳೆಕಾಳುಗಳ ವರ್ತಕರ ಸಂಘ... ರಮೇಶ ಲಾವೋಟಿ, ಧಾನ್ಯ ವರ್ತಕರ ಸಂಘ... ಅಧ್ಯಕ್ಷರಾದ ಸುಬ್ಬರಾಜು, ಎಪಿಎಂಸಿ ಜಂಟಿ ಕ್ರಿಯಾ ಸಮಿತಿ ಮತ್ತಿತರ ಸಂಘಟನೆಗಳ ಪರವಾ...

ಪುಟ 8

ಸಮೃದ್ಧ ಭಾರತ ಮತ್ತು ಜನತೆಯ ಕಲ್ಯಾಣಕ್ಕಾಗಿ ಸೆಪ್ಟೆಂಬರ್ 29 ರ ಕಾರ್ಯಾಚರಣೆಯತ್ತ....

ಕೇಂದ್ರ ಕಾರ್ಮಿಕ ಸಂಘಟನೆಗಳ ಸಮಾವೇಶವು ಕರೆ ನೀಡಿರುವ ಸೆಪ್ಟೆಂಬರ್ 29ರ ಕೈಗಾರಿಕಾ ಸಾರ್ವತ್ರಿಕ ಮುಷ್ಕರದ ಸಿದ್ಧತೆಗಳನ್ನು ನೋಡಿದರೆ ಇದು ಭಾರೀ ಯಶಸ್ವಿಯಾಗುವಂತೆ ಕಾಣುತ್ತಿದೆ. ಕಾರ್ಮಿಕರ ಸಂಘಗಳು ಪಟ್ಟಿ ಮಾಡಿರುವ ಹದಿನಾರು ಬೇಡಿಕೆಗಳ ಪಟ್ಟಿಗೆ ವ್ಯಾಪಕ ಬೆಂಬಲ ದೊರೆತಿದೆ. ಬ್ಯಾಂಕ್ ನೌಕರರು, ವಿಮಾ ನೌಕರರು, ಶಾಲಾ ಮತ್ತು ಕಾಲೇಜು ಅಧ್ಯಾಪಕರು ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರ ವಿಭಿನ್ನ ವಿಭಾಗಗಳ ನೌಕರರ ಹಲವು ಸಂಘಟನೆಗಳು ಮುಷ್ಕರದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿವೆ. ವಿಮಾನ ನಿಲ್ದಾಣ ಪ್ರಾಧಿಕಾರ, ದೂರಸಂಪರ್ಕ ವಲಯದ ಸಂಘಗಳು, ವೈದ್ಯಕೀಯ ಪ್ರತಿನಿಧಿಗಳು ಕೂಡಾ ಮುಷ್ಕರದಲ್ಲಿ ಭಾಗವಹಿಸಲು ನಿರ್ಧರಿಸಿದ್ದಾರೆ. ಈ ವ್ಯಾಪಕ ಬೆಂಬಲದಿಂದಾಗಿ ದೇಶದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಚಟುವಟಿಕೆಗಳು ಸ್ತಬ್ಧಗೊಳ್ಳಲಿವೆ.

ಜೊತೆಗೆ ಕಿಸಾನ್ ಸಭಾಗಳು /ರೈತಸಂಘಗಳು, ಕೃಷಿಕೂಲಿಕಾರ ಸಂಘಗಳು, ಯುವಜನ, ವಿದ್ಯಾರ್ಥಿ ಮತ್ತು ಮಹಿಳೆಯರ ಸಂಘಟನೆಗಳು, ಇತರ ದುಡಿಯುವ ಜನಗಳ ಸಂಘಟನೆಗಳು ಕೂಡಾ ಸೆಪ್ಟೆಂಬರ್ 29 ರ ಕೈಗಾರಿಕಾ ಕಾರ್ಯಾಚರಣೆಯ ವೇಳೆಯಲ್ಲೇ ಜನಗಳನ್ನು ಅಣಿನೆರೆಸುವ ಸ್ವತಂತ್ರ ಕಾರ್ಯಕ್ರಮಗಳನ್ನು ನಡೆಸಲಿವೆ. ಇದು ಈ ದಿನದ ಪ್ರತಿಭಟನಾ ಚಳುವಳಿಗೆ ಇನ್ನೂ ವ್ಯಾಪಕ ಆಯಾಮ ನೀಡುತ್ತದೆ.

ಎಡಪಕ್ಷಗಳು ಒಂದೆಡೆ ಯುಪಿಎ ಸರಕಾರವನ್ನು ಬೆಂಬಲಿಸುತ್ತಲೇ ಈ ಕಾರ್ಯಾಚರಣೆಯನ್ನು ಬೆಂಬಲಿಸುತ್ತವೆ ಎಂದು ಬೂರ್ಶ್ವಾ ಮಾಧ್ಯಮ ಮತ್ತು ಆಳುವ ವರ್ಗಗಳ ಕೆಲವು ವಿಭಾಗಗಳು ಕಣ್ಣುಬಿಕ್ಕಿಯಾಗಿವೆ. ಅವರಿಗೆ ಇದು ಒಂದು ವೈರುಧ್ಯವಾಗಿ ಕಾಣುತ್ತದೆ.

ಆದರೆ ಎಡಪಕ್ಷಗಳ ನಿರ್ಣಯದಲ್ಲಿ ವೈರುಧ್ಯವಿಲ್ಲ. ಮಾತ್ರವಲ್ಲ, ವಾಸ್ತವವಾಗಿ ಇದು ಯುಪಿಎ ಸರಕಾರ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಅಂಗೀಕರಿಸಿ, ಅದನ್ನು ಸರಕಾರದ ನೀತಿಯಾಗಿ ಮಾಡಿ ಜನಗಳಿಗೆ ನೀಡಿದ ವಚನಗಳ ಪಾಲನೆಗೆ ಜನಗಳ ಒತ್ತಡವನ್ನು ಬಲಪಡಿಸುವುದಕ್ಕಾಗಿ. ಈ ಚಳುವಳಿಯ ಬೇಡಿಕೆ ಪಟ್ಟಿಯಲ್ಲಿರುವ ಹೆಚ್ಚಿನ ಬೇಡಿಕೆಗಳು ಸರಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿಯೇ ಇವೆ. ಅದರಲ್ಲಿ ಇಲ್ಲದ ಕೆಲವು ಬೇಡಿಕೆಗಳು ದೇಶದ ಆರ್ಥಿಕವನ್ನು ಮತ್ತು ಯುಪಿಎ ಸರಕಾರವನ್ನು ಕೂಡಾ ಬಲಗೊಳಿಸುವಂತವು. ಉದಾಹರಣೆಗೆ, ಕಾರ್ಪೊರೇಟ್ ವಲಯ, ದೊಡ್ಡ ದೊಡ್ಡ ಕಂಪನಿಗಳು ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಮರುಪಾವತಿಯಾಗದೆ ಉಳಿದ ಒಂದು ಲಕ್ಷ ಕೋಟಿ ರೂಪಾಯಿಗಳ ವಸೂಲಿಗೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬೇಡಿಕೆ, ಅದೇ ರೀತಿ ಒಂದು ಲಕ್ಷ ಕೋಟಿ ರೂಗಳಷ್ಟು ಪಾವತಿ ಮಾಡದ ತೆರಿಗೆ ಬಾಕಿಗಳು.

ಯುಪಿಎ ಸರಕಾರ ಅಸ್ತಿತ್ವದಲ್ಲಿರುವ ಈ ತಿಂಗಳುಗಳಲ್ಲಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಜಾರಿಯ ವೇಗದ ಬಗ್ಗೆ ಸರಕಾರದೊಳಗೂ ಸಮ್ಮಿಶ್ರಕೂಟದಲ್ಲೂ ತೀವ್ರ ಚರ್ಚೆಗಳಾಗಿವೆ. ಈ ಕಾರ್ಯಕ್ರಮದಲ್ಲಿನ ಹಲವು ಜನಪರ ಕ್ರಮಗಳನ್ನು ಜಾರಿಗೆ ತರದಂತೆ ಮಾಡುವ ಶಕ್ತಿಗಳಿವೆ ಎಂಬುದು ಗುಟ್ಟಿನ ಸಂಗತಿಯೇನಲ್ಲ. ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಸರಕಾರದ ಘೋಷಿತ ನೀತಿ. ಇದರ ಅಂಶಗಳ ಜಾರಿಯಾಗಲು ಜನತಾ ಒತ್ತಡವನ್ನು ತೀವ್ರಗೊಳಿಸಲೇಬೇಕಾಗುತ್ತಿದೆ.

ಸೆಪ್ಟೆಂಬರ್ 29ರ ಕಾರ್ಯಾಚರಣೆ ಯುಪಿಎ ಸರಕಾರ ತನ್ನ ವಚನಗಳನ್ನು ಪ್ರಾಮಾಣಿಕವಾಗಿ ಈಡೇರಿಸುವಂತೆ ಜನತೆಯ ಒತ್ತಡವನ್ನು ಬಲಗೊಳಿಸಲಿಕ್ಕಾಗಿ ಹಾಗೂ ಅದು ಮತ್ತೆ ಜನವಿರೋಧಿ ನೀತಿಗಳ ದಾರಿ ಹಿಡಿಯದಿರಲಿ ಎಂದು.

ದೇಶದ ಸಮೃದ್ಧಿ ಬಯಸುವ, ಜನತೆಯ ಕಲ್ಯಾಣ ಬಯಸುವ ಎಲ್ಲಾ ಭಾರತೀಯ ದೇಶಪ್ರೇಮಿಗಳು ನಾಳೆ ಒಂದು ಉತ್ತಮ ಭಾರತ ನಿರ್ಮಾಣಕ್ಕಾಗಿ ಈ ಕಾರ್ಯಾಚರಣೆಯನ್ನು ಬೆಂಬಲಿಸಲು ಮುಂದೆ ಬರಬೇಕು.

ಹಮಾಲಿ ಕಾರ್ಮಿಕರ ರಾಜ್ಯ ಸಮ್ಮೇಳನದ ಘೋಷ

'ಹೋರಾಟದಿಂದ ಮಾತ್ರ ಹಮಾಲಿ ಕಾರ್ಮಿಕರ ಬದುಕು ಹಸನಾಗಲು ಸಾಧ್ಯ'

ಅಸಂಘಟಿತ ಕಾರ್ಮಿಕರು ಸಂಘಟಿತರಾಗಿ ಪ್ರಜಾಸತ್ತಾತ್ಮಕ ಹೋರಾಟವನ್ನು ಕೈಗೊಂಡಾಗ ಮಾತ್ರ ಹಮಾಲಿ ಕಾರ್ಮಿಕರ ಬದುಕು ಹಸನಾಗಲು ಸಾಧ್ಯ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿಯಾದ ಕಾಂ. ಎಸ್. ವರಲಕ್ಷ್ಮಿಯವರು ತಿಳಿಸಿದರು. ಬಳ್ಳಾರಿ ನಗರದ ಗಾಂಧಿಭವನದಲ್ಲಿ ಸೆಪ್ಟೆಂಬರ್ 1, 2005ರಂದು ನಡೆದ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಅಸಂಘಟಿತ ಕಾರ್ಮಿಕರಿಗೆ ಸೇವಾ ನಿಯಮಾವಳಿ ಮಸೂದೆಯನ್ನು ಜಾರಿಗೊಳಿಸದೆ ಬೇಜವಾಬ್ದಾರಿ ನೀತಿ ಅನುಸರಿಸುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾರ್ಮಿಕರ ಹಿತಕಾಯಲು ಈ ಕೂಡಲೇ ಸೇವಾ ನಿಯಮಾವಳಿಗಳನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿದ ಅವರು ಹಮಾಲಿ ಕಾರ್ಮಿಕರು ಸಂಘಟಿತರಾಗಿ ತಮ್ಮ ಬೇಡಿಕೆಗಳು ಈಡೇರುವವರೆಗೂ ಹೋರಾಟವನ್ನು ಮುಂದುವರೆಸಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿಯಾದ ಎಂ.ಬಿ.ನಾಡಗೌಡರವರು ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿದ್ದ ಎನ್.ಡಿ.ಎ. ಸರ್ಕಾರ ಕಳೆದ ಚುನಾವಣೆಯಲ್ಲಿ ಹೀನಾಮಾನ ಸೋಲು ಅನುಭವಿಸಿದೆ. ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರ ಕೂಡ ಎನ್.ಡಿ.ಎ. ಸರ್ಕಾರ ಅನುಸರಿಸುತ್ತಿದ್ದ ನೀತಿಯನ್ನೇ ಮುಂದುವರೆಸಿಕೊಂಡು ಹೋಗುತ್ತಿದೆ ಎಂದು ಆರೋಪಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ಅಧ್ಯಕ್ಷರಾದ ಎಸ್.ಪ್ರಸನ್ನ ಕುಮಾರ್ ಮಾತನಾಡಿ ಫೆಡರೇಷನ್‌ನ ಹೋರಾಟಕ್ಕೆ ಮಣಿದು ಪಿಂಚಣಿ ಯೋಜನೆ ಜಾರಿ ಮಾಡುವುದಾಗಿ ರಾಜ್ಯ ಸರ್ಕಾರ ಹಿಂದೆ ಭರವಸೆ ನೀಡಿತ್ತು. ಆದರೆ ಈ ಯೋಜನೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ ಎಂದರು.

ವಿಮಾ ನೌಕರರ ಸಂಘದ ಮುಖಂಡ ಟಿ.ಜಿ. ವಿಠಲ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ವಿ.ಎಸ್.ಶಿವಶಂಕರ್ ಹಾಗೂ ಡಿ.ವೈ.ಎಫ್.ಐ. ಜಿಲ್ಲಾ ಅಧ್ಯಕ್ಷರಾದ ಸತ್ಯಬಾಬು, ಸಮಾರಂಭದಲ್ಲಿ ಹಾಜರಿದ್ದರು. ಫೆಡರೇಷನ್‌ನ ಜಿಲ್ಲಾ ಅಧ್ಯಕ್ಷರಾದ ಜಿ.ವೆಂಕಟರಮಣ ಸ್ವಾಗತಿಸಿದರು. ರಾಜ್ಯ ಖಜಾಂಚಿಯಾದ ಬಿ.ಎಂ. ಮರಿಯಪ್ಪನವರು ವಂದಿಸಿದರು. ಈ ಸಮಾರಂಭ ಮುಗಿದ ನಂತರ ಸಾಯಂಕಾಲ ರಾಘವ ಕಲಾ ಮಂದಿರದಲ್ಲಿ ಪ್ರತಿನಿಧಿಗಳ ಅಧಿವೇಶನ ನಡೆಯಿತು. ಪ್ರಧಾನ ಕಾರ್ಯದರ್ಶಿಯಾದ ಎಂ.ಬಿ.ನಾಡಗೌಡರವರು ಕರಡು ವರದಿಯನ್ನು ಮಂಡಿಸಿದರು. ನಂತರ ಪ್ರತಿನಿಧಿಗಳ ಚರ್ಚೆ ಆದ ನಂತರ ಈ ಕೆಳಕಂಡ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರು : ಎಸ್. ಪ್ರಸನ್ನಕುಮಾರ್
ಪ್ರಧಾನ ಕಾರ್ಯದರ್ಶಿ: ಡಿ.ವೆಂಕಟರಮಣ
ಖಜಾಂಚಿ: ಟಿ.ತಿಪ್ಪೇಸ್ವಾಮಿ
ಉಪಾಧ್ಯಕ್ಷರು: ನಾರಾಯಣ, ಚಿತ್ರದುರ್ಗ; ಬಿ.ನಾಗರಾಜ, ಚಿತ್ರದುರ್ಗ; ಹುಲಿಗಪ್ಪ, ಕೊಪ್ಪಳ; ಹೆಚ್.ತಿಪ್ಪಯ್ಯ, ಬಳ್ಳಾರಿ; ಓಬಳೇಶ, ಬಳ್ಳಾರಿ; ಮಹಮದ್ ಭಾಷಾ, ತುಮಕೂರು; ಶೇಕ್ಷಖಾದ್ರಿ, ರಾಯಚೂರು
ಸಹ ಕಾರ್ಯದರ್ಶಿಗಳು:ಡಿ.ಎಂ. ಮರಿಯಪ್ಪ, ಚಿತ್ರದುರ್ಗ; ಮುದಿಯಪ್ಪ, ಕೊಪ್ಪಳ; ಹನುಮಂತಪ್ಪ ಗುಡಿಮನಿ, ಕೊಪ್ಪಳ; ಆರ್.ಭಾಸ್ಕರರೆಡ್ಡಿ, ಬಳ್ಳಾರಿ; ಗುರುಸ್ವಾಮಿ, ರಾಯಚೂರು

26 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಕೃಷಿ ಮಾರುಕಟ್ಟೆಗಳು, ರೈಲ್ವೇ ನಿಲ್ದಾಣ, ಬಸ್ ನಿಲ್ದಾಣಗಳು ಗೋಡೌನ್‌ಗಳು ಮುಂತಾದ ಕಡೆಗಳಲ್ಲಿ ದುಡಿಯುತ್ತಿರುವ ಹಮಾಲರು ತಮ್ಮ ಬೆನ್ನ ಮೇಲೆ ಕೇವಲ ದವಸ ಧಾನ್ಯಗಳ, ಸಾಮಾನು - ಸರಂಜಾಮುಗಳ ಮೂಟೆಗಳನ್ನು ಮಾತ್ರ ಹೊರುತ್ತಿಲ್ಲ. ನಮ್ಮ ಶೋಷಕ ಸಮಾಜಿಕ ವ್ಯವಸ್ಥೆಯ ಭಾರವೂ ಇವರ ಬೆನ್ನ ಮೇಲೆ ಬಿದ್ದಿದೆ. ಇಂತಹ ಶ್ರಮಿಕ ವರ್ಗದ ಕಠಿಣ ಶ್ರಮದ ಆಧಾರವಿಲ್ಲದಿದ್ದರೆ ಆರ್ಥಿಕ - ಸಾಮಾಜಿಕ ವ್ಯವಸ್ಥೆಯೇ ಕುಸಿದು ಬೀಳುತ್ತದೆ. ಕನಿಷ್ಠ ಜೀವನ ಭದ್ರತೆಯ ಸೌಕರ್ಯಗಳೂ ಸಿಕ್ಕದೆ, ದೈತ್ಯ ಸಾಮಾಜಿಕ ವ್ಯವಸ್ಥೆಯ ಭಾರದ ಕೆಳಗೆ ಸಿಲುಕಿ ನಲುಗುತ್ತಿರುವ ಹಮಾಲರು ಜಾಗೃತರಾಗಿ ಸಂಘಟಿತ ಹೋರಾಟಕ್ಕೆ ಮುಂದಾಗಿದ್ದಾರೆ. ಹಮಾಲರ ಸಂಘಟನೆಯ ರಾಜ್ಯ ಮತ್ತು ಚಿತ್ರದುರ್ಗ ಜಿಲ್ಲಾ ಸಮ್ಮೇಳನಗಳ ವರದಿ ಇಲ್ಲಿದೆ.



ಹಮಾಲರಿಗೆ ಮೂಲಭೂತ ಹಕ್ಕುಗಳನ್ನು ಕಲ್ಪಿಸಲು ಒತ್ತಾಯ

ಎ.ಪಿ.ಎಂ.ಸಿ.ಗಳಲ್ಲಿ ಹಾಗೂ ವಿವಿಧೆಡೆ ಸುಮಾರು ವರ್ಷಗಳಿಂದ ಹಮಾಲಿ ಕೆಲಸದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಮಾಲರಿಗೆ ಮೂಲಭೂತ ಹಕ್ಕುಗಳನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಇದುವರೆಗೂ ಯಾವುದೇ ರೀತಿಯಲ್ಲಿ . ಕ್ರಮ ಕೈಗೊಂಡಿಲ್ಲ. ಇನ್ನು ಮುಂದಾದರೂ ಎ.ಪಿ.ಎಂ.ಸಿ.ಯಲ್ಲಿ ದುಡಿಯುತ್ತಿರುವಂತಹ ಹಮಾಲಿ ಕಾರ್ಮಿಕರಿಗೆ ಮೂಲಭೂತ ಹಕ್ಕುಗಳನ್ನು ಸರ್ಕಾರ ನೀಡಬೇಕೆಂದು ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ರಾಜ್ಯ ಅಧ್ಯಕ್ಷರಾದ ಕಾಂ. ಎಸ್.ಪ್ರಸನ್ನಕುಮಾರ್‌ರವರು ಒತ್ತಾಯಿಸಿದರು.

ದಿನಾಂಕ 23.08.2005 ರಂದು ಚಳ್ಳಕೆರೆ ಪಟ್ಟಣದ ದಲ್ಲಾಲರ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ಚಿತ್ರದುರ್ಗ ಜಿಲ್ಲಾ ಸಮಿತಿಯ 2ನೇ ಸಮ್ಮೇಳನದಲ್ಲಿ ಮಾತನಾಡಿದರು. ಈಗಾಗಲೆ ನಾವು ನಾಲ್ಕು ಬಾರಿ ರಾಜ್ಯ ಸರ್ಕಾರದ ಸಚಿವರುಗಳು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚಿಸಿದ್ದೇವೆ. ನಮ್ಮ ರಾಜ್ಯದ ಮೂಲೆ ಮೂಲೆಗಳಲ್ಲಿ ಸುಮಾರು 5 ಲಕ್ಷ ಹಮಾಲಿ ಕಾರ್ಮಿಕರು ದುಡಿಯುತ್ತಿದ್ದು, ಸರ್ಕಾರದವರು ಪಿಂಚಣಿಯಾಗಲೀ ಪ್ರಾವಿಡೆಂಟ್ ಫಂಡ್ ಯೋಜನೆಯಾಗಲಿ ನೀಡುತ್ತಿಲ್ಲ. ಜೊತೆಯಲ್ಲಿ ಎ.ಪಿ.ಎಂ.ಸಿ.ಗಳಲ್ಲಿ ರೈತರು ತಂದಂತಹ ಮಾಲುಗಳನ್ನು ಸ್ವಚ್ಛಗೊಳಿಸುವುದರಿಂದ ಹಿಡಿದು ನಿಟ್ಟು ಹಾಕುವವರೆಗೂ ಒಂದು ಕಷ್ಟಕರವಾದಂತಹ ಕೆಲಸಗಳನ್ನು ನಿರ್ವಸುತ್ತಿದ್ದಾರೆ. ಎ.ಪಿ.ಎಂ.ಸಿ.ಯಿಂದ ಈ ಹಿಂದೆ ಯಾವುದೇ ತರಹದ ಹಣ ಕಟ್ಟಿಸಿಕೊಳ್ಳದೆ ವಿಮಾ ಯೋಜನೆ ನೀಡುತ್ತಿದ್ದು, ಈಗ ಮೆಟ್ರೊ ಆಫ್ ಇಂಡಿಯಾ ಎಂಬ ಯೋಜನೆ ಜಾರಿ ಮಾಡಿ ಒಬ್ಬ ಹಮಾಲರಿಂದ 70 ರೂಗಳನ್ನು ಜೀವ ವಿಮಾ ಯೋಜನೆಗೆ ಕಟ್ಟಿಸಿಕೊಳ್ಳುತ್ತಿದ್ದಾರೆ. ಇದು ಸರಿಯಾದ ರೀತಿ ಅಲ್ಲ, ತಾವೇ ತಮ್ಮ 70 ರೂಪಾಯಿ ಕಟ್ಟುತ್ತಿದ್ದಾರೆ. ಆದರೆ ಅದರಲ್ಲೂ ಸಹ ಎ.ಪಿ.ಎಂ.ಸಿ.ಯಲ್ಲಿ ಇರುವಂತಹ ಕೆಲವಾರು ಕಾನೂನು ತಿದ್ದುಪಡಿಗಳನ್ನು ಮಾಡಿ, ಹಮಾಲಿ ಕಾರ್ಮಿಕರು ಮೃತಪಟ್ಟಾಗ ಅವರಿಗೆ ಜೀವ ವಿಮೆ ಬರದ ಹಾಗೆ ಇಲ್ಲಸಲ್ಲದ ಪ್ರಶ್ನೆಗಳನ್ನು ಹಾಕಿ ಜೀವ ವಿಮೆಯನ್ನು ರದ್ದುಮಾಡುವ ಕುತಂತ್ರ ಮಾಡುತ್ತಿದ್ದಾರೆ. ಈ ನೀತಿಯ ವಿರುದ್ಧ ಮುಂದಿನ ದಿನದಲ್ಲಿ ಎ.ಪಿ.ಎಂ.ಸಿ. ಕಛೇರಿ ಮುಂಭಾಗದಲ್ಲಿ ಅನಿರ್ದಿಷ್ಟ ಧರಣಿ ಮಾಡುತ್ತೇವೆಂದರು. ಆರಂಭದಲ್ಲಿ ಟಿ.ತಿಪ್ಪೇಸ್ವಾಮಿಯವರು ಸ್ವಾಗತ ಭಾಷಣ ಮಾಡುತ್ತಾ ನಾವು ಸೆಪ್ಟೆಂಬರ್ 2 ರಂದು ಎ.ಪಿ.ಎಂ.ಸಿಯಿಂದ ಬರುವ ಆದಾಯದಲ್ಲಿ ಹಮಾಲಿ ಕಾರ್ಮಿಕರಿಗೆ ಜೀವ ವಿಮೆಯ ಹಣವನ್ನು ತುಂಬಬೇಕೆಂದು ಮಂತ್ರಿಗಳ ಜೊತೆಯಲ್ಲಿ ಚರ್ಚೆ ನಡೆಸಿದಾಗ ಮಂತ್ರಿಗಳು ನೀವು ಕೇಳುತ್ತಿರುವಂತಹದ್ದು ನ್ಯಾಯಯುತವಾಗಿರುತ್ತದೆ. ನಾವು ಮುಂದಿನ ದಿನಗಳಲ್ಲಿ ಆದಷ್ಟು ಬೇಗ ಹಮಾಲಿ ಕಾರ್ಮಿಕರಿಗೆ ಬರಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತೇವೆಂದು ಹೇಳಿದ್ದರು. ಆದರೆ ಅದಾಗಿ ಮೂರು ವರ್ಷ ಕಳೆದರೂ, ಈ ಸಮ್ಮಿಶ್ರ ಸರ್ಕಾರವೂ ಹಮಾಲಿ ಕಾರ್ಮಿಕರಿಗೆ ಯಾವುದೇ ತರಹದ ಮೂಲಭೂತಹಕ್ಕುಗುಳನ್ನು ಕಲ್ಪಿಸಿಕೊಟ್ಟಿಲ್ಲ ಎಂದು ಖಂಡಿಸಿದರು.

ಚಳ್ಳಕೆರೆ ತಾಲ್ಲೂಕಿನ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರಾದಂತಹ ಕೆ.ವಿ. ವೀರಭದ್ರಪ್ಪನವರು ಮಾತನಾಡುತ್ತಾ, ಹಮಾಲಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸದೆ ಮೌನ ವಹಿಸಿರುವಂತಹ ಸರ್ಕಾರದ ವಿರುದ್ಧ ಮುಂದಿನ ದಿನಗಳಲ್ಲಿ ನಾವೆಲ್ಲ ಸಂಘಟಿತವಾಗಿ ಉಗ್ರವಾದ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಚಿತ್ರದುರ್ಗ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಬಿ.ನಾಗರಾಜ್‌ರವರು ಮಾತನಾಡುತ್ತಾ, ಹಮಾಲಿ ಕಾರ್ಮಿಕರು ಈಗಾಗಲೇ ಎ.ಪಿ.ಎಂ.ಸಿ.ಯಲ್ಲಿ ಜೀವ ವಿಮೆಗೆ ಹಮಾಲಿ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ಯೋಜನೆ, ಇ.ಎಸ್.ಐ. ಸೌಲಭ್ಯ ಎ.ಪಿ.ಎಂ.ಸಿ.ಯಲ್ಲಿ ದುಡಿಯುವಂತಹ ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಮತ್ತು ಹಮಾಲಿ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಶಿಕ್ಷಣ ವೇತನಗಳನ್ನು ನೀಡಬೇಕೆಂಬ ಅನೇಕ ಬೇಡಿಕೆಗಳನ್ನು ಇಟ್ಟು ಹಮಾಲಿ ಕಾರ್ಮಿಕರ ಬಗ್ಗೆ ನಾವು ವಿಧಾನಸೌಧದ ಮುಂದೆ ಹೋರಾಟ ನಡೆಸಿದಾಗ ಆ ಸಂದರ್ಭದಲ್ಲಿ ಈಗಿನ ಉಪ ಮುಖ್ಯಮಂತ್ರಿಯಾದ ಎಂ.ಪಿ.ಪ್ರಕಾಶ್‌ರವರು ನಮ್ಮ ಮನವಿಯನ್ನು ತೆಗೆದುಕೊಂಡು ಕಾರ್ಮಿಕರ ಬಗ್ಗೆ ನಾವು ವಿಧಾನಸೌಧದ ಅಧಿವೇಶನದಲ್ಲಿ ಈ ಬೇಡಿಕೆಗಳನ್ನು ಮಂಡಿಸಿ ಚರ್ಚೆ ನಡೆಸುತ್ತೇವೆ ಎಂದು ಹೇಳಿದ್ದರು. ಆದರೂ ಸಹ ಇಲ್ಲಿಯವರೆಗೂ ಹಮಾಲಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸದೆ ಬರೀ ಪೊಳ್ಳು ಆಶ್ವಾಸನೆಯಲ್ಲಿ ಕಾಲ ಕಳೆದಿದ್ದಾರೆ. ಆದ್ದರಿಂದ ನಾವುಗಳು ಮುಂದಿನ ದಿನದಲ್ಲಿ ಸರ್ಕಾರದ ಗಮನ ಸೆಳೆಯುವ ಹಾಗೆ ಹೋರಾಟ ನಡೆಸಬೇಕಾಗುತ್ತದೆ ಎಂದು ಹೇಳಿದರು. ನಂತರ ಸಂಘಕ್ಕೆ ಈ ಕೆಳಕಂಡ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಬಿ.ನಾಗರಾಜ್, ಪ್ರಧಾನ ಕಾರ್ಯದರ್ಶಿ ಆಗಿ ಟಿ.ತಿಪ್ಪೇಸ್ವಾಮಿ, ಖಜಾಂಚಿ ಆಗಿ ನಾರಾಯಣ, ಉಪಾಧ್ಯಕ್ಷರುಗಳಾಗಿ ಟಿ.ನಿಂಗಣ್ಣ, ಕೆ.ಓ.ಚಂದ್ರಣ್ಣ, ಟಿ.ಗಂಗಣ್ಣ, ದುರ್ಗಾವರದ ಬೋರಯ್ಯ, ಎಸ್.ರಾಜಣ್ಣ, (ಟೌನ್ ಅಧ್ಯಕ್ಷರು) ಸಹ ಕಾರ್ಯದರ್ಶಿ ಆಗಿ ಮೊಳಕಾಲ್ಮೂರು ಬಿ.ನಾಗರಾಜ್, ಪಿ.ಬೊಮ್ಮಯ್ಯ, ಹೆಚ್.ಮಂಜುನಾಥ್, ಮಹಂತೇಶ್, ಕೆ.ಓ.ಉಪ್ಪಾರಹಟ್ಟಿ ಸಿ.ಬೋರಯ್ಯ ಉಪಾಧ್ಯಕ್ಷರಾಗಿ (ಬಿ.ಎ.ಎಸ್.ಮಿಲ್ಲಿನ) ನಾಗರಾಜ್ ಮತ್ತು ಉಳಿದ 27 ಜನ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾದರು. ಜಿಲ್ಲಾ ಸಮಿತಿಯ ಖಜಾಂಚಿ ನಾರಾಯಣರವರು, ವಂದನಾರ್ಪಣೆಯನ್ನು ಮಾಡಿದರು.

ಚಳ್ಳಕೆರೆ ನೂತನ ತಾಲ್ಲೂಕು ಸಮಿತಿ ಆಯ್ಕೆ

16.08.2005 ರಂದು ಫೆಡರೇಷನ್ ತಾಲ್ಲೂಕು ಸಮಿತಿಯ ಸಮ್ಮೇಳನವನ್ನು ನಡೆಸಲಾಯಿತು. ತಾಲ್ಲೂಕು ಸಮ್ಮೇಳನದಲ್ಲಿ ಈ ಕೆಳಕಂಡ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರನ್ನಾಗಿ ಈ. ನಾಗರಾಜ್, ಕಾರ್ಯದರ್ಶಿಯನ್ನಾಗಿ ಟಿ.ಬೊಮ್ಮಯ್ಯನವರನ್ನು ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಿ, ಒಟ್ಟು 26 ಜನರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

○ ಟಿ.ತಿಪ್ಪೇಸ್ವಾಮಿ

ತಮ್ಮ ದುಷ್ಟ ಆರ್ಥಿಕ ನೀತಿಗಳು ಹಾಗೂ ನೀಚ ಕೋಮುವಾದಿ ಧೋರಣೆಗಳಿಗೆ ವಿರುದ್ಧವಾಗಿ ದೇಶದ ಜನತೆ ನೀಡಿದ ತಿರುಗೇಟಿನಿಂದ ತತ್ತರಿಸಿರುವ ಬಿಜೆಪಿ ಮತ್ತು ಸಂಘ ಪರಿವಾರಗಳಿಗೆ ಮುಂದೆ ತಮ್ಮ ದಾರಿ ಏನು ಎಂಬ ಬಗ್ಗೆ ದಿಕ್ಕು ತೋಚದಂತಾಗಿರುವುದೇ ಸಂಘ ಪರಿವಾರದ ಇಂದಿನ ಬಿಕ್ಕಟ್ಟಿನ ನಿಜವಾದ ಮೂಲ.



ಬಿಜೆಪಿ ಇಂದು ಒಂದು ಗೊಂದಲಾಪುರ

ಸೀತಾರಾಂ ಯೆಚೂರಿ

ಕೊನೆಗೂ ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿ ರಾಜೀನಾಮೆ ಪ್ರಕಟಿಸಿದ್ದಾರೆ; ತಕ್ಷಣವಲ್ಲ, ಡಿಸೆಂಬರ್‌ನಲ್ಲಿ ಬಿಜೆಪಿಯು ಬೆಳ್ಳಿಹಬ್ಬದ ಅಧಿವೇಶನದ ನಂತರ ಅಧಿಕಾರ ತ್ಯಜಿಸುವುದಾಗಿ ಪ್ರಕಟಿಸಲು ಅವರಿಗೆ ಅವಕಾಶ ನೀಡಲಾಗಿದೆ. ಇದು ಒಂದು ಮುಖವುಳಿಸುವ ತಂತ್ರ.

ಹಿಂದೆ ಎಪ್ರಿಲ್ ತಿಂಗಳಲ್ಲಿ ಆರ್‌ಎಸ್‌ಎಸ್ 'ಸರಸಂಘಚಾಲಕ' ಸುದರ್ಶನ್‌ರವರು ವಾಜಪೇಯಿ ಮತ್ತು ಅಡ್ವಾಣಿ ಇಬ್ಬರೂ ಅಧಿಕಾರ ಬಿಟ್ಟುಕೊಡಬೇಕು ಎಂದು ಬಹಿರಂಗವಾಗಿಯೇ ಹೇಳಿದ್ದರು. ವಾಜಪೇಯಿಯವರಿಗೆ ಬಿಜೆಪಿಯಲ್ಲಿ ಯಾವುದೇ ಅಧಿಕಾರಸ್ಥಾನ ಇಲ್ಲ. ಹೀಗೆ ಅಡ್ವಾಣಿ ಅಧ್ಯಕ್ಷಸ್ಥಾನದಿಂದ ನಿರ್ಗಮಿಸಬೇಕೆಂಬುದು ನಿರೀಕ್ಷಿತವಾಗಿತ್ತು.


"ಹಳೆಯ ಮುಖಂಡತ್ವ ಯುವ ಪೀಳಿಗೆಗೆ ದಾರಿ ಬಿಡಬೇಕು ಎಂದು ಆರ್‌ಎಸ್‌ಎಸ್ ಮುಖ್ಯಸ್ಥರು ಸಾರಿದ್ದಾರೆಂದರೆ ಬದಲಾವಣೆ ಸನ್ನಿಹಿತ, ಇದು ಬೇಗನೆ ಆಗುತ್ತದೆ" ಎಂದು ನಾವು ಜೂನ್ ತಿಂಗಳಲ್ಲಿ ಹೇಳಿದ್ದೆವು (ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ, ಜೂನ್ 12,2005) ಅದೀಗ ನಿಜವಾಗಿದೆ.

ರಾಜಕೀಯ ಅಂಗವಸ್ತ್ರ

ಹೇಗೆ ಇಷ್ಟು ಖಡಾಖಂಡಿತವಾಗಿ ಹೇಳಿದ್ದೆವು ಎಂಬುದಕ್ಕೆ ಕಾರಣಗಳನ್ನು ಹುಡುಕಲು ಬಹಳ ದೂರ ಹೋಗಬೇಕಾಗಿಲ್ಲ. ಬಿಜೆಪಿ ಹಾಗೂ ಅದರ ಹಿಂದಿನ ಅವತಾರ ಜನಸಂಘವೂ ಆರ್‌ಎಸ್‌ಎಸ್‌ನ ರಾಜಕೀಯ ಅಂಗವಾಗಿಯಷ್ಟೇ ಕೆಲಸ ಮಾಡುವಂತಹವು ಎಂದು ನಾವು ಹೇಳುತ್ತಾ ಬಂದಿದ್ದೇವೆ. ಏಕೆಂದರೆ ಅವುಗಳ ಹುಟ್ಟಿನ ಸ್ವರೂಪವೇ ಅದು. 1948ರಲ್ಲಿ ಗಾಂಧೀಜೀಯ ಹತ್ಯೆಯಾದಾಗ ಆರ್‌ಎಸ್‌ಎಸ್ ಮೇಲೆ ನಿಷೇಧ ಹಾಕಲಾಯಿತು. ಆಗಿನ 'ಸರಸಂಘಚಾಲಕ' ಎಂ.ಎಸ್.ಗೋಲ್ವಾಲ್ಕರ್ ಈ ನಿಷೇಧ ತೆಗೆಸಲು ಆಗಿನ ಗೃಹಮಂತ್ರಿ ಸರ್ದಾರ್ ಪಟೇಲ್ ಹಾಗೂ ಭಾರತ ಸರಕಾರದೊಡನೆ ಹಲವು ಮೋಸದ ರಾಜಿಗಳನ್ನು ಮಾಡಿಕೊಂಡರು. ಅವರು ಒಪ್ಪಿದ ಒಂದು ಶರತ್ತೆಂದರೆ ಆರ್.ಎಸ್.ಎಸ್.ಗೆ ಒಂದು ಸಂವಿಧಾನವನ್ನು ತಯಾರಿಸಲಾಗುವುದು, ಅದು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಅದರಲ್ಲಿ ಸ್ಪಷ್ಟವಾಗಿ ನಮೂದಿಸಲಾಗುವುದು ಎಂದು. ಆರ್‌ಎಸ್‌ಎಸ್ ಒಂದು 'ಸಾಂಸತಿಕ ಸಂಘಟನೆ' ಎಂಬ ಮಾತು ಆರಂಭವಾದದ್ದು ಹೀಗೆ. ಆದರೆ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ದುಷ್ಟ ರಾಜಕೀಯ ಯೋಜನೆ ಹೊಂದಿದ್ದ ಆರ್‌ಎಸ್‌ಎಸ್‌ಗೆ ತನ್ನ ಗುರಿಸಾಧನೆಗೆ, ತನ್ನ ಅಭಿಪ್ರಾಯಗಳನ್ನು ಪಸರಿಸುವುದಕ್ಕೆ ಒಂದು ರಾಜಕೀಯ ವೇದಿಕೆ ಬೇಕಾಗಿತ್ತು. 1951ರಲ್ಲಿ ಶ್ಯಾಮ ಪ್ರಸಾದ್ ಮುಖರ್ಜಿಯವರು ನೆಹರೂ ಮಂತ್ರಿಮಂಡಳದಿಂದ ರಾಜೀನಾಮೆ ನೀಡಿ ಹೊರಬಂದು ಒಂದು ಹೊಸ ರಾಜಕೀಯ ಪಕ್ಷವನ್ನು ಕಟ್ಟುವ ಬಗ್ಗೆ ಯೋಜಿಸುತ್ತಿದ್ದಾಗ ಈ ಅವಕಾಶ ಸಿಕ್ಕಿತು. ಈ ಹೊಸ ಪಕ್ಷವನ್ನು ರಚಿಸುವಲ್ಲಿ ನೆರವಾಗಲು ಆರ್‌ಎಸ್‌ಎಸ್ ತನ್ನ ಪ್ರಚಾರಕರನ್ನು ಕಳಿಸಿತು. ಅದರಲ್ಲಿ ಎ.ಬಿ.ವಾಜಪೇಯಿ, ಎಲ್.ಕೆ.ಅಡ್ವಾಣಿ, ಎನ್.ಎಸ್.ಭಂಡಾರಿ ಮತ್ತು ದೀನದಯಾಳ್ ಉಪಾಧ್ಯಾಯರೂ ಸೇರಿದ್ದರು. ಜನಸಂಘ ಹುಟ್ಟಿದ್ದು ಹೀಗೆ. ಅಂದಿನಿಂದ ಹಲವು ಅವತಾರಗಳನ್ನು ಬದಲಿಸಿ ಇಂದಿನ ಬಿಜೆಪಿಯವರೆಗೂ ಅವರು ಆರ್‌ಎಸ್‌ಎಸ್‌ನ ರಾಜಕೀಯ ಅಂಗವಾಗಿಯೇ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಬಿಜೆಪಿಯನ್ನು ನಿಯಂತ್ರಿಸುವವರು ಯಾರು, ಅಷ್ಟೆ ಏಕೆ ಇಡೀ ಆರ್.ಎಸ್‌ಎಸ್ ನೇತೃತ್ವದ ಕೇಸರಿ ಪಡೆಯ ಸಂಘಟನೆಗಳನ್ನು ನಿಯಂತ್ರಿಸುವವರು ಯಾರು ಎಂಬ ಬಗ್ಗೆ ಎಂದೂ ಸಂದೇಹವೇ ಇರಲಿಲ್ಲ.

ವಿಶ್ವಾಸಘಾತ

ಬಿಜೆಪಿಯೂ ಸೇರಿದಂತೆ ಆರ್‌ಎಸ್‌ಎಸ್‌ನ ಕಬಂಧಬಾಹುಗಳಲ್ಲಿ ಮಾತು ನಡೆಯುವುದು ಆರ್‌ಎಸ್‌ಎಸ್‌ನದ್ದೇ ಎಂಬುದನ್ನು ನಮ್ಮ ಓದುಗರು ನೆನಪಿಸಿಕೊಳ್ಳಬಹುದು. ಇದಕ್ಕೆ ಒಂದು ಉದಾಹರಣೆ ಸಾಕು. 1977ರಲ್ಲಿ ತುರ್ತು ಪರಿಸ್ಥಿತಿಯ ಪರಾಭವವಾದಾಗ ಜನಸಂಘವನ್ನು ವಿಸರ್ಜಿಸಲು ಮತ್ತು ಅದನ್ನು ಜನತಾ ಪಕ್ಷದೊಳಗೆ ವಿಲೀನಗೊಳಿಸಲು ಆರ್‌ಎಸ್‌ಎಸ್ ನಿರ್ಧರಿಸಿತು. ಇದರ ಹಿಂದಿನ ಯೋಜನೆ ಈ ದೊಡ್ಡ ರಾಜಕೀಯ ಸಂಘಟನೆಯ ಮೇಲೆ ಹತೋಟಿ ಸಾಧಿಸಿ ತನ್ನ ಪ್ರಭಾವವನ್ನು ವಿಸ್ತರಿಸುವುದು, ವಿಶೇಷವಾಗಿ ಆ ಪಕ್ಷ ಕೇಂದ್ರ ಸರ್ಕಾರವನ್ನು ನಡೆಸುತ್ತಿರುವಾಗ. ಆದರೆ ಇವರೆಲ್ಲಾ ಜನತಾ ಪಕ್ಷದ ಸದಸ್ಯರಾಗಿ ಮುಂದುವರೆಯಬೇಕಾದರೆ ಆರ್‌ಎಸ್‌ಎಸ್ ಸದಸ್ಯತ್ವವನ್ನು ಬಿಡಬೇಕೆಂದು ಆಗ್ರಹ ಬಂದಾಗ ಆಕಾಶವೇ ಕಳಚಿ ಬಿದ್ದಂತಾಯಿತು. ಇದೇ ಜನತಾ ಪಕ್ಷವನ್ನು ನುಚ್ಚುನೂರು ಮಾಡಿ ಸರಕಾರವನ್ನು ಪತನಗೊಳಿಸಿ ಇಂದಿರಾಗಾಂಧಿ ಅಧಿಕಾರಕ್ಕೆ ಮರಳಲು ಹಾದಿ ಮಾಡಿಕೊಟ್ಟ 'ದ್ವಂದ್ವ ಸದಸ್ಯತ್ವ'ದ ಬಿಕ್ಕಟ್ಟು ಹೀಗೆ ಆರ್‌ಎಸ್‌ಎಸ್ ಒಂದೆಡೆ ಜನಗಳಲ್ಲಿ ಪ್ರಜಾಪ್ರಭುತ್ವ ಪ್ರಜ್ಞೆಯ ತ್ವರಿತ ಬೆಳವಣಿಗೆಯನ್ನು ತೋರಿಸಿಕೊಟ್ಟ ತುರ್ತು ಪರಿಸ್ಥಿತಿ ವಿರೋಧಿ ಭಾವನೆ, ಇನ್ನೊಂದೆಡೆ ತನ್ನ ಫ್ಯಾಸಿಸ್ಟ್ ಮಾದರಿಯ ಸಿದ್ಧಾಂತದಲ್ಲಿ ರಾಜಿ ಇವೆರಡರ ನಡುವೆ ಒಂದನ್ನು ಆರಿಸಿಕೊಳ್ಳಬೇಕಾಗಿ ಬಂದಾಗ ಜನಗಳ ತುರ್ತು ಪರಿಸ್ಥಿತಿ ವಿರೋಧಿ ಭಾವನೆಗಳಿಗೆ ವಿಶ್ವಾಸಘಾತ ಬಗೆಯಲು ನಿರ್ಧರಿಸಿತು.



ಆದರೆ ಈ ಬಾರಿ ಅಡ್ವಾಣಿ ನಿರ್ಗಮನವನ್ನು ಜೂನ್‌ನಲ್ಲಿ ಜಿನ್ನಾ ಕುರಿತ ಅವರ ಟಿಪ್ಪಣಿಗಳಿಂದಾಗಿ ಹಾಗೂ 'ಆರ್‌ಎಸ್‌ಎಸ್‌ನ ಮೂಲ ನಂಬಿಕೆಗಳಿಂದ ಸೈದ್ಧಾಂತಿಕ ಮಾರ್ಗಚ್ಯುತಿ'ಯಿಂದಾಗಿ ಎಂದು ಬಿಂಬಿಸಲು ಪ್ರಯತ್ನ ನಡೆದಿದೆ. ಅಡ್ವಾಣಿಯವರ ಪಾಕಿಸ್ತಾನ ಭೇಟಿ ಹಾಗೂ ಅವರ ಟಿಪ್ಪಣಿಗಳು ಕೇವಲ ನೆಪಗಳಷ್ಟೆ.

ನಿಜವಾದ ಕಾರಣ

ಅಡ್ವಾಣಿ ನಿರ್ಗಮನಕ್ಕೆ ಕಾರಣ ಇದಲ್ಲ. ಆರ್‌ಎಸ್‌ಎಸ್/ಬಿಜೆಪಿಯನ್ನು ಹಾಗು ಹಿಂದುತ್ವ ಸಿದ್ಧಾಂತವನ್ನು ಭಾರತೀಯ ರಾಜಕಾರಣದ ರಂಗಸ್ಥಳಕ್ಕೆ ತಂದದ್ದು ಇದೇ ಎಲ್.ಕೆ.ಅಡ್ವಾಣಿ ಹಾಗೂ ಅವರ 'ರಥಯಾತ್ರೆ' ತಾನೆ! ಅಡ್ವಾಣಿಯವರು ಮೂಲ ಆರ್‌ಎಸ್‌ಎಸ್ ನಂಬಿಕೆಗಳಿಂದ ದಾರಿ ತಪ್ಪಿದ್ದಾರೆ ಎಂದು ಸೂಚಿಸುವುದು ಅಪ್ರಾಮಾಣಿಕತೆಯ ಪರಮಾವಧಿ. ಬಿಜೆಪಿಯಲ್ಲಿ ಮುಖಂಡತ್ವ ಬದಲಾವಣೆ ಬೇಕೆಂದು ಆರ್‌ಎಸ್‌ಎಸ್ ಬಯಸಲು ನಿಜವಾದ ಕಾರಣ ಕೇಸರಿ ಪಡೆಗಳನ್ನು ಸದ್ಯ ಆವರಿಸಿರುವ ಬಿಕ್ಕಟ್ಟು. ತನ್ನ ಪರವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಎಬ್ಬಿಸಲು ಅಥವಾ ಜನಗಳನ್ನು ತನ್ನ ಪ್ರಶ್ನೆಗಳ ಮೇಲೆ ಅಣಿನೆರೆಸಲು ಅದು ಹೆಚ್ಚೆಚ್ಚು ಅಸಮರ್ಥವಾಗುತ್ತಿರುವುದರಿಂದಲೇ ಈ ಬಿಕ್ಕಟ್ಟು.

2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ಸೋಲನ್ನನುಭವಿಸಿದಂದಿನಿಂದ ಅದನ್ನು ಅರಗಿಸಿಕೊಳ್ಳಲು ಆರ್‌ಎಸ್‌ಎಸ್/ ಬಿಜೆಪಿಗೆ ಸಾಧ್ಯವಾಗುತ್ತಿಲ್ಲ. ತನ್ನ ಸೋಲಿಗೆ ಒಂದು ಸುಸಂಗತ ವಿವರಣೆ ನೀಡಲು ಅದಕ್ಕಿನ್ನೂ ಸಾಧ್ಯವಾಗಿಲ್ಲ. ಅವರ ಕೆಲವು ಮಿತ್ರರು ದೂರಸರಿದಿದ್ದಾರೆ. ಅವರ ಅನುಯಾಯಿಗಳಂತೂ ಸಂಪೂರ್ಣ ಗೊಂದಲದಲ್ಲಿ ಇರುವಂತೆ, ದಿಕ್ಕುಕಾಣದವರಂತೆ ಕಾಣಬರುತ್ತಿದ್ದಾರೆ. ಸಂಸತ್ತಿನಲ್ಲಿ ಪ್ರತಿಪಕ್ಷವಾಗಿ ಅದರ ಕಾರ್ಯ ನಿರ್ವಹಣೆ ಕೂಡಾ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ. ಈ ಹಿಂದೆ ಕೋಮು ವಿಭಜನೆ ಆಳಗೊಳಿಸಲು ಅದು ಬಳಸುತ್ತಿದ್ದ ಪ್ರಶ್ನೆಗಳ ಮೂಲಕ ಜನಗಳ ಗಮನ ಸೆಳೆಯಲು ಈಗ ಅದಕ್ಕೆ ಆಗುತ್ತಿಲ್ಲ, ಕನಿಷ್ಟ ಕಳೆದ ದಶಕದಲ್ಲಿ ಎಷ್ಟರಮಟ್ಟಿಗೆ ಭಾವೋದ್ರೇಕ ಎಬ್ಬಿಸುತ್ತಿತ್ತೋ ಅಷ್ಟು ಎಬ್ಬಿಸಲು ಅದಕ್ಕೆ ಆಗುತ್ತಿಲ್ಲ. ಇಂತಹ ಒಂದು ಪರಿಸ್ಥಿತಿಯೊಡನೆ ಹೊಂದಿಕೊಳ್ಳಲು ಅದು ಅಸಮರ್ಥವಾಗುತ್ತಿದೆ. ಇದು ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರದ ಆರೋಗ್ಯಕ್ಕೆ ಒಳ್ಳೆಯದೇ. ಬೇರೆಲ್ಲಾ ಪ್ರಶ್ನೆಗಳ ಮೇಲೆ, ಕೋಟ್ಯಾಂತರ ಭಾರತೀಯರನ್ನು ತಟ್ಟುವ ಪ್ರಶ್ನೆಗಳಲ್ಲಿ ಆರ್‌ಎಸ್‌ಎಸ್/ ಬಿಜೆಪಿ ಹೆಚ್ಚೆಚ್ಚು ನೋವುಗಳನ್ನು ಹೇರುವ ಶೋಷಕ ವರ್ಗಗಳ ಪಕ್ಷ ವಹಿಸುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಈ ದೃಷ್ಟಿಯಿಂದಲೂ, ಅವರು ಜನತೆಯ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿಲ್ಲ. ಆದ್ದರಿಂದ ರಾಜಕೀಯವಾಗಿ ಜನರನ್ನು ತಮ್ಮ ಪರವಾಗಿ ಅಣಿನೆರೆಸಲು ಅವರು ಅಸಮರ್ಥರಾಗಿದ್ದಾರೆ. ಹೀಗೆ ಪ್ರಧಾನ ವಿರೋಧ ಪಕ್ಷವಾಗಿ ಸಂಸತ್ತನ್ನು ಜನತೆಯ ಹಿತಾಸಕ್ತಿಗಳನ್ನು ಪ್ರತಿಪಾದಿಸುವ ವೇದಿಕೆಯಾಗಿ ಬಳಸುವ ಹಕ್ಕನ್ನು ಅವರು ಕಳಕೊಂಡಿದ್ದಾರೆ. ಅವರ ಬಳಿ ನಿಜವಾಗಿ ಜನಗಳನ್ನು ಬಾಧಿಸುವ ಯಾವುದೇ ಪ್ರಶ್ನೆಗಳಿಲ್ಲವಾದ್ದರಿಂದ ಅವರು ಸಂಸದೀಯ ಕಲಾಪಗಳಿಗೆ ಅಡ್ಡಿ ಮಾಡುತ್ತಿದ್ದಾರೆ.

ಜಾಗರೂಕರಾಗಿರಬೇಕು

ಇದೇ ಆರ್‌ಎಸ್‌ಎಸ್ ನೇತೃತ್ವದ ಆಕ್ಟೋಪಸ್ ಎದುರಿಸುತ್ತಿರುವ ನಿಜವಾದ ಬಿಕ್ಕಟ್ಟು. ಭಾರತಕ್ಕೆ ಮತ್ತು ಅದರ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರ ಸ್ವರೂಪಕ್ಕೆ ಒಂದು ರೀತಿಯಲ್ಲಿ ಇದು ಒಳ್ಳೆಯದೇ, ಒಂದು ಅವಕಾಶ ಕೂಡಾ. ಕನಿಷ್ಟ ಸದ್ಯಕ್ಕಂತೂ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವಲ್ಲಿ ಆರ್‌ಎಸ್‌ಎಸ್ ಅಸಮರ್ಥವಾಗಿರುವ ಸಂದರ್ಭವನ್ನು ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಕ್ರೋಢೀಕರಿಸಲು, ಬಲಪಡಿಸಲು ಬಳಸಬೇಕು. ಈ ಅವಕಾಶವನ್ನು ಭಾರತೀಯ ಜನತೆಯ ಒಂದು ಉತ್ತಮ ಬದುಕಿನ ಆಕಾಂಕ್ಷೆಯನ್ನು ಹಾಗೂ ಹೋರಾಟವನ್ನು ಬಲಪಡಿಸಲು ಕೂಡಾ ಬಳಸಬೇಕು.

ಬಿಜೆಪಿ ಮುಖಂಡತ್ವದಲ್ಲಿ ಬದಲಾವಣೆಗೆ ಆರ್‌ಎಸ್‌ಎಸ್‌ನ ಒತ್ತಾಯ ಇಂತಹ ಪರಿಸ್ಥಿತಿಯನ್ನು ತನ್ನ ಪರವಾಗಿ ಬದಲಿಸಲು ನಡೆಸಿರುವ ಒಂದು ಯತ್ನ. ಆದರೆ ಒಂದು ಫ್ಯಾಸಿಸ್ಟ್ ಮಾದರಿಯ 'ಹಿಂದುರಾಷ್ಟ್ರ'ದ ದುಷ್ಟ ಸೈದ್ಧಾಂತಿಕ ಯೋಜನೆಯ ಮೇಲೆ ಗಮನ ಕೇಂದ್ರೀಕರಿಸಿ ಭೂತಕಾಲದ ಮಂತ್ರ ಜಪಿಸುವ ಆರ್‌ಎಸ್‌ಎಸ್ ಬಳಿ ಭಾರತದ ಭವಿಷ್ಯದ ಬಗ್ಗೆ ಇರುವ ಅಜೆಂಡಾ ಬರಿ ಶೂನ್ಯ. ಇದರಿಂದಾಗಿ ದೇಶದ ಭವಿಷ್ಯ ಹೇಗಿರಬೇಕು, ಅದರ ಸ್ವರೂಪ ಹೇಗಿರಬೇಕು ಎಂದು ನಿರ್ಧರಿಸುವ ಗಂಭೀರ ಪ್ರಶ್ನೆಗಳಲ್ಲಿ ತೊಡಗಿರುವ ಭಾರತೀಯ ಜನತೆ ಮತ್ತು ಆರ್‌ಎಸ್‌ಎಸ್ ನಡುವಿನ ಹೊಂದಾಣಿಕೆಯ ಅಭಾವ ಇನ್ನೂ ವ್ಯಾಪಕವಾಗುತ್ತದೆಯಷ್ಟೆ.

ಹೀಗೆ ಬಿಜೆಪಿಯ ಮುಖಂಡತ್ವವನ್ನು ಬದಲಿಸಿ ತನ್ನ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಹಾಗೂ ಜನತೆಯ ಬೆಂಬಲ ಗಳಿಸಲು ಕೋಮುವಾದಿ ಧ್ರುವೀಕರಣದ ತನ್ನ ಪ್ರಯತ್ನಗಳನ್ನು ತೀವ್ರಗೊಳಿಸಬಹುದು ಎಂಬ ನಿರೀಕ್ಷೆ ಆರ್‌ಎಸ್‌ಎಸ್‌ನದ್ದು. ಉದ್ರೇಕಕಾರಿ ಕೋಮುವಾದಿ ಸೆಳೆತಗಳನ್ನು ಹಾಗೂ ಕಲಹಗಳನ್ನು ಬಡಿದೆಬ್ಬಿಸಿ, ಭಾರತದ ಪ್ರಭುತ್ವದ ಮೇಲೆ ಹತೋಟಿಯನ್ನು ಮತ್ತೆ ಪಡೆಯುವ ಅವರ ಪ್ರಯತ್ನಗಳು ಹೆಚ್ಚುತ್ತಿರುವುದು ಭಾರತದ ಐಕ್ಯತೆ ಹಾಗೂ ಸಮಗ್ರತೆಗೆ ಅಪಾಯಕಾರಿ. ಆಧುನಿಕ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ತಳಪಾಯವನ್ನು ನೆಮ್ಮಿಕೊಂಡಿರುವ ಭಾರತೀಯರೆಲ್ಲರೂ ಈ ಅಪಾಯಗಳನ್ನು ಎದುರಿಸಲು ಜಾಗರೂಕರಾಗಿರಬೇಕು.



ಖಾಸಗೀಕರಣದ ಬಗ್ಗೆ ಭಾರಿ ಭ್ರಮೆಗಳನ್ನು ಹರಡಿದ ಜನಗಳು ಈಗ ಬೆರಳು ಕಚ್ಚಿಕೊಳ್ಳುವಂತಾಗಿದೆ. ಈ ಹಿಂದೆ ಖಾಸಗೀಕರಣಗೊಂಡ ದೆಹಲಿಯ ವಿದ್ಯುತ್ ಕಂಪನಿಗಳ ಅದಕ್ಷತೆ-ಗಂಭೀರ ಸಮಸ್ಯೆಗಳ ವಿರುದ್ಧ ಜನತೆ ತೀವ್ರವಾಗಿ ಪ್ರತಿಭಟಿಸಿದ್ದಾರೆ. ಜನರ ಅಸಹಕಾರ ಆಂದೋಲನದಿಂದಾಗಿ ವಿದ್ಯುತ್ ದರಗಳಲ್ಲಿ ಆಗಿದ್ದ ಶೇ 10 ರಷ್ಟು ಏರಿಕೆಯ ನಿರ್ಧಾರ ವಾಪಸ್ಸಾಗಿದೆ. ಈ ಹಿಂದೆ ಅಪಾರ ರಿಯಾಯಿತಿಗಳನ್ನು ಪಡೆದುಕೊಂಡಿದ್ದರೂ ಮತ್ತೊಮ್ಮೆ ಸರ್ಕಾರದಿಂದ 'ಸಹಾಯಧನ' ಕೇಳುತ್ತಿರುವ ಈ ಖಾಸಗಿ ವಿದ್ಯುತ್ ಕಂಪನಿಗಳ ಪ್ರವೃತ್ತಿ ಏನನ್ನು ತೋರಿಸುತ್ತಿದೆ?

ದೇಶದ ರಾಜಧಾನಿಯಲ್ಲೇ ವಿದ್ಯುತ್ ಖಾಸಗೀಕರಣ ನೀತಿಯ ದಿವಾಳಿಕೋರತನ ಬಯಲು

ವಿದ್ಯುತ್ ಮಂಡಳಿಗಳು ತಮ್ಮ ಅದಕ್ಷತೆಯಿಂದಾಗಿ ನಷ್ಟ ಮಾಡುತ್ತಲೇ ಇವೆ. ಇನ್ನು ಮುಂದೆಯೂ ಅದಕ್ಕೆ ಸರ್ಕಾರದಿಂದ ಸಬ್ಸಿಡಿ ನೀಡಲು ಸಾಧ್ಯವಿಲ್ಲ, ಆದ್ದರಿಂದ ವಿದ್ಯುತ್ ವಲಯದ ಖಾಸಗೀಕರಣವೇ ಇವಕ್ಕೆಲ್ಲಾ ಮದ್ದು ಎಂದು ಸಾರಿದ ಉದಾರೀಕರಣ ವಾದಿಗಳು ವಿದ್ಯುತ್ ವಲಯವನ್ನು ಉತ್ಪಾದನೆ, ವಿತರಣೆ ಮತ್ತು ಪೂರೈಕೆ ಎಂದು ಪ್ರತ್ಯೇಕಗೊಳಿಸಿ ಖಾಸಗೀಕರಣಕ್ಕೆ ಹೆಜ್ಜೆಯಿಟ್ಟರು. ಈ ಬಗ್ಗೆ ವಿದ್ಯುಚ್ಛಕ್ತಿ ಕಾನೂನು-2003 ನ್ನು ತರಲಾಯಿತು. ಇದರಿಂದ ವಿದ್ಯುತ್ ವಲಯದ ಸುಧಾರಣೆ ಸಾಧ್ಯವಿಲ್ಲ, ಬದಲಾಗಿ ವಿದ್ಯುತ್ ದರಗಳು ಏರುತ್ತವೆಯಷ್ಟೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದರು. ಈಗ ಆ ಎಚ್ಚರಿಕೆ ನಿಜವಾಗಿದೆ. ಒಂದೆಡೆ ಬಳಕೆದಾರರು ಎರಡು ಮೂರುಪಟ್ಟು ದರಗಳನ್ನು ತೆರಬೇಕಾಗಿ ಬಂದರೆ, ಇನ್ನೊಂದೆಡೆ ಖಾಸಗಿ ಕಂಪನಿಗಳ ಲಾಭದ ಗ್ಯಾರಂಟಿಗಾಗಿ , ವಿದ್ಯುತ್ ಮಂಡಳಿಗಳಿಗೆ ಸಬ್ಸಿಡಿ ನೀಡಲು ಸಾಧ್ಯವಿಲ್ಲ ಎಂದ ಅವೇ ಸರ್ಕಾರಗಳು ಈ ಖಾಸಗಿ ಕಂಪನಿಗಳಿಗೆ ಅವರು ತಂದ ಬಂಡವಾಳದ ಹತ್ತುಪಟ್ಟು ಸಬ್ಸಿಡಿ ನೀಡಲು ಮುಂದಾಗಬೇಕಾಗಿ ಬಂದಿದೆ. ದಿಲ್ಲಿ ಇದಕ್ಕೆ ಇತ್ತೀಚಿನ ಉದಾಹರಣೆ.

ಮೂರು ವರ್ಷಗಳ ಹಿಂದೆ ದಿಲ್ಲಿ ವಿದ್ಯುತ್ ಮಂಡಳಿಯನ್ನು ಒಡೆದು ಒಂದು ಉತ್ಪಾದನಾ ಕಂಪನಿ, ಒಂದು ವಿತರಣಾ ಕಂಪನಿ ಹಾಗೂ ಮೂರು ಖಾಸಗಿ ಒಡೆತನದ ಸರಬರಾಜು ಕಂಪನಿಗಳನ್ನು ರಚಿಸಲಾಯಿತು. ಒಂದು ಟಾಟಾ ಗುಂಪಿನ ಎನ್‌ಡಿಪಿಎಲ್ ಹಾಗೂ ಇನ್ನೆರೆಡು ಅಂಬಾನಿ ಗುಂಪಿನ ಬಿಎಸ್‌ಇಎಸ್ ರಾಜಧಾನಿ ಪವರ್ ಲಿಮಿಟೆಡ್ ಮತ್ತು ಬಿಎಸ್‌ಇಎಸ್ ಯಮುನಾ ಪವರ್ ಲಿಮಿಟೆಡ್. ದಿಲ್ಲಿ ವಿದ್ಯುತ್ ನಿಯಂತ್ರಣ ಸಮಿತಿ ಎರಡು ವರ್ಷಗಳಲ್ಲಿ ಎರಡನೇ ಬಾರಿಗೆ ಇದೇ ಜುಲೈ ತಿಂಗಳಲ್ಲಿ ಶೇ 10 ರಷ್ಟು ವಿದ್ಯುತ್ ದರ ಏರಿಕೆಯನ್ನು ಪ್ರಕಟಿಸಿತು. ಇದಕ್ಕೆ ವ್ಯಕ್ತಗೊಂಡ ಅಭೂತಪೂರ್ವ ಪ್ರತಿಭಟನೆ, ಅದೂ ಮುಖ್ಯವಾಗಿ ಮಧ್ಯಮವರ್ಗಗಳ ಜನಗಳಿಂದ ಬಂದ ಪ್ರತಿಭಟನೆಗಳ ಪರಿಣಾಮವಾಗಿ ಕೊನೆಗೂ ಈ ಏರಿಕೆಯನ್ನು ಹಿಂತೆಗೆದುಕೊಳ್ಳಲಾಗಿದೆ. ಆದರೆ ಖಾಸಗಿ ಕಂಪನಿಗಳ ಲಾಭಗಳಿಗೆ ತೊಂದರೆಯಾಗದಿರಲೆಂದು ಅವರಿಗೆ ದಿಲ್ಲಿ ಸರ್ಕಾರ ಈ ಏರಿಕೆಯ ಅರ್ಧದಷ್ಟನ್ನು ಅಂದರೆ 93.5 ಕೋಟಿ ರೂ.ಗಳ ಸಬ್ಸಿಡಿಯನ್ನು ಈ ಅಂಬಾನಿ, ಟಾಟಾ ಕಂಪನಿಗಳಿಗೆ ನೀಡಲು ನಿರ್ಧರಿಸಿದೆ.

ಖಾಸಗೀಕರಣದ ನಿಜ ಸ್ವರೂಪ

ದಿಲ್ಲಿ ವಿದ್ಯುತ್ ಮಂಡಳಿಯ ಖಾಸಗೀಕರಣ ಪ್ರಕ್ರಿಯೆಯನ್ನು ಆರಂಭಿಸಿದಾಗ ಅವರ ಆಸ್ತಿಗಳ ಮೌಲ್ಯ ನಿಜವಾಗಿ ಇದ್ದುದಕ್ಕಿಂತ 3107 ಕೋಟಿ ರೂ.ಗಳಷ್ಟು ಕಡಿಮೆ ತೋರಿಸಲಾಗಿತ್ತು ಎಂದು



ಮಹಾಲೆಕ್ಕ ಪರಿಶೋಧಕರ ವರದಿಯೇ ಹೇಳಿದೆ. ಇಷ್ಟೇ ಅಲ್ಲ, ಇಷ್ಟು ಕಮ್ಮಿ ಹಣದಲ್ಲಿ ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರಿಗೆ ಕೊಟ್ಟಮೇಲೂ 3450 ಕೋಟಿ ರೂ.ಗಳಷ್ಟು ಸಬ್ಸಿಡಿಯನ್ನು ಅವಕ್ಕೆ ಕೊಡಲಾಗಿದೆ. ಇದು ಅವು ತಂದ ಬಂಡವಾಳದ ಹತ್ತು ಪಟ್ಟು. ಇದೂ ಸಾಲದೆಂಬಂತೆ ಈ ಖಾಸಗಿ ಕಂಪನಿಗಳಿಗೆ ಕನಿಷ್ಠ ಶೇ. 16 ರಷ್ಟು ಪ್ರತಿಫಲದ ಗ್ಯಾರಂಟಿಯನ್ನು ದಿಲ್ಲಿ ಸರ್ಕಾರ ನೀಡಿತ್ತು. ಜತೆಗೆ ಸರ್ಕಾರಿ ಒಡೆತನದ ಟ್ರಾನ್ಸ್ ಕೋ ದಿಂದ ವಿದ್ಯುತ್ತನ್ನು ಯುನಿಟ್ಟಿಗೆ ರೂ. 1.32 ಕ್ಕೆ ಖರೀದಿಸಿದರೂ ರೂ. 4.16 ದರದಲ್ಲಿ ಬಳಕೆದಾರರಿಗೆ ಮಾರಲು ಅನುಮತಿ ನೀಡಲಾಗಿತ್ತು. ಇಷ್ಟೆಲ್ಲಾ ಸೌಲಭ್ಯಗಳನ್ನು ತಟ್ಟೆಯಲ್ಲಿಟ್ಟು ಕೊಟ್ಟರೂ ಈ ಖಾಸಗೀ ವಿದ್ಯುತ್ ಕಂಪನಿಗಳಿಗೆ ದಕ್ಷತೆಯಿಂದ ಕೆಲಸ ಮಾಡಲಾಗಲಿಲ್ಲ. ಅಂಬಾನಿ ಗುಂಪಿನ ಕಂಪನಿಗಳು ಮತ್ತೆ ದರ ಏರಿಕೆ ಕೇಳಿದವು(ಇದಕ್ಕಾಗಿ ಆ ಕಂಪನಿಗಳು ಕೊಟ್ಟ ಅಂಕಿ-ಅಂಶ ಬೇಕೆಂದೇ ತಪ್ಪು ದಾರಿಗೆಳೆಯುಂತಹವು ಎಂದು ತಜ್ಞರ ಹೇಳಿಕೆ). ಟಾಟಾ ಗುಂಪಿನ ಕಂಪನಿಯ ಅದಕ್ಷತೆಯೂ ಅಷ್ಟೇ ಮಟ್ಟದಲ್ಲಿದ್ದರೂ ಅದು ದರ ಏರಿಕೆ ಕೇಳಿರಲಿಲ್ಲ. ಆದರೆ ವಿದ್ಯುತ್ ನಿಯಂತ್ರಣ ಸಮಿತಿ ಮೂರು ಕಂಪನಿಗಳಿಗೆ ಶೇ. 10 ರಷ್ಟು ದರ ಏರಿಸಲು ಅನುಮತಿ ನೀಡಿತು. ಜನಗಳು ಈ ಪ್ರಕಟಣೆಯ ವಿರುದ್ಧ ಸಿಡಿದೆದ್ದರು. ಖಾಸಗೀಕರಣದ ನಿಜ ಸ್ವರೂಪ ಈಗ ಅವರ ಸ್ವಂತ ಅನುಭವಕ್ಕೆ ಬಂದಿತ್ತು.

ಅಸಹಕಾರ ಚಳುವಳಿ

ಕಳೆದ ಸುಮಾರು ಎರಡು ತಿಂಗಳಲ್ಲಿ ದೇಶದ ರಾಜಧಾನಿ ವಿದ್ಯುತ್ ಬಳಕೆದಾರರಿಂದ ಭಾರಿ ಪ್ರತಿಭಟನೆಗಳನ್ನು ಕಂಡಿತು. ಶೇ. 10 ರಷ್ಟು ಏರಿಕೆಯನ್ನು ತಾವು ನೀಡುವುದಿಲ್ಲ ಎಂದು ಕಾಲೋನಿಗಳ ಪಾರ್ಕುಗಳಲ್ಲಿ, ಬೀದಿಬದಿಗಳಲ್ಲಿ ನಡೆದ ಪ್ರತಿಭಟನಾ ಸಭೆಗಳಲ್ಲಿ ಸಾರಲಾಯಿತು. ನಿವಾಸಿಗಳ ಕಲ್ಯಾಣ ಸಂಘಗಳು ಈ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವು. ಅವು ಹೋರಾಡುತ್ತಿದ್ದುದು ಕೇವಲ ವಿದ್ಯುತ್ ದರ ಏರಿಕೆಯ ವಿರುದ್ಧ ಮಾತ್ರವೇ ಅಲ್ಲ. ಪೂರೈಕೆಯಲ್ಲಿ ವ್ಯತ್ಯಯಗಳು ಹಾಗೂ ಇಲೆಕ್ಟ್ರಾನಿಕ್ ಮೀಟರುಗಳ ಅಳವಡಿಕೆಯ ವಿರುದ್ಧವೂ ಅವರು ದನಿಯೆತ್ತಿದ್ದರು. ಖಾಸಗೀಕರಣದ ಮೇಲೆ ಮೂರು ಖಾಸಗಿ ಕಂಪನಿಗಳು ಹಳೆಯ ಮೀಟರುಗಳು ಸರಿಯಿಲ್ಲ ಎಂದು ಸಾರಾಸಗಟಾಗಿ ಇಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಿದ ನಂತರ ಬಳಕೆದಾರರಿಗೆ ವಿಪರೀತ ಬಿಲ್‌ಗಳು ಬರಲಾರಂಭಿಸಿದವು. ಅವುಗಳಲ್ಲೊಂದು ಕಂಪನಿ ಬಿಲ್ಲಿಂಗ್‌ನಲ್ಲಿ ದೋಷಗಳಿವೆ ಎಂದೂ ಒಪ್ಪಿಕೊಂಡಿತು. ಆದರೆ ಏನೂ ಮಾಡಲಿಲ್ಲ. ಒಟ್ಟಿನಲ್ಲಿ ಈ ಅಭೂತಪೂರ್ವ ನಾಗರಿಕ ಅಸಹಕಾರ ಚಳುವಳಿ ಇಡೀ ವಿದ್ಯುತ್ ಖಾಸಗೀಕರಣದ ವಿರುದ್ಧವೇ ಆಗಿತ್ತು.

ಹೆಚ್ಚೆಚ್ಚು ನಿವಾಸಿಗಳ ಸಂಘಗಳು ಈ ಚಳುವಳಿಯಲ್ಲಿ ಸೇರಿಕೊಳ್ಳ ಲಾರಂಭಿಸಿದಂತೆ ರಾಜಕಾರಣಿಗಳೂ ಇದಕ್ಕೆ ಬೆಂಬಲ ಸೂಚಿಸಲಾರಂಭಿಸಿದರು. ಆಳುವ ಪಕ್ಷ ಕಾಂಗ್ರೆಸ್‌ನ 28 ಶಾಸಕರು ಹಾಗೂ 70 ಕೌನ್ಸಿಲರುಗಳು ಕೂಡಾ ಈ ಸಾರ್ವಜನಿಕ ಪ್ರತಿಭಟನೆಗೆ ದನಿಗೂಡಿಸಿದರು. ಈ ಒತ್ತಡದಿಂದಾಗಿ ದಿಲ್ಲಿ ಸರ್ಕಾರ ಆಗಸ್ಟ್ 29, 2005 ರಂದು ಎರಡು ಸಮಿತಿಗಳನ್ನು ನೇಮಿಸಿತು. ಮೊದಲನೆಯದು ಸರ್ಕಾರದ ಹಣಕಾಸು ಮಂತ್ರಿಗಳಾದ ಎ.ಕೆ.ವಾಲಿಯಾ ಹಾಗೂ ವಿದ್ಯುತ್ ಮಂತ್ರಿಗಳಿದ್ದ ಸಮಿತಿ. ಇದು ದೇಶದ ರಾಜಧಾನಿಯಲ್ಲಿ ವಿದ್ಯುತ್ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಲು. ಇನ್ನೊಂದು ತಪ್ಪು-ತಪ್ಪಾದ ಮೀಟರುಗಳು ಇತ್ಯಾದಿ ಪ್ರಶ್ನೆಗಳನ್ನು ಪರಿಶೀಲಿಸಲು. ಕೊನೆಗೂ ದಿಲ್ಲಿಯ ನಾಗರಿಕರ ಅಭೂತಪೂರ್ವ ಪ್ರತಿಭಟನೆಗಳಿಂದಾಗಿ ದಿಲ್ಲಿ ಸರ್ಕಾರ ಶೇ. 10 ರಷ್ಟು ಏರಿಕೆಯನ್ನು ಹಿಂತೆಗೆದುಕೊಂಡಿತು. ಆದರೆ ಖಾಸಗಿ ಕಂಪನಿಗಳಿಗೆ ಶೇ. 5 ಕ್ಕೆ ಸಬ್ಸಿಡಿ ನೀಡಲಾಗುವುದೆಂಬ ದಿಲ್ಲಿ ಸರ್ಕಾರದ ಪ್ರಕಟಣೆ ವಿವಾದಕ್ಕೆಡೆ ಮಾಡಿಕೊಟ್ಟಿದೆ. ಖಾಸಗಿ ಕಂಪನಿಗಳು ನೀಡಿದ ತಪ್ಪು ಅಂಕಿ-ಅಂಶಗಳ ತನಿಖೆ ನಡಸದೆ, ಖಾಸಗೀಕರಣದ ವೇಳೆಗೆ ಅವು ನೀಡಿದ ವಚನಗಳ ಪಾಲನೆಯಾಗದ್ದನ್ನು ಪರಿಶೀಲಿಸದೆ ಸರ್ಕಾರ ಸಾರ್ವಜನಿಕ ಖಜಾನೆಯಿಂದ ಅವುಗಳಿಗೆ 93.5 ಕೋಟಿ ರೂ.ಗಳ ಸಬ್ಸಿಡಿ ನೀಡಲು ಮುಂದಾಗಿ ಖಾಸಗಿ ಕಂಪನಿಗಳ ಏಜೆಂಟನಂತೆ ವರ್ತಿಸುತ್ತಿರುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಲಾಗುತ್ತಿದೆ.

ಪರಾಮರ್ಶೆ ಅತ್ಯಗತ್ಯ

ದಿಲ್ಲಿ ನಾಗರಿಕರ ಈ ಅನುಭವ ಇಡೀ ವಿದ್ಯುತ್ 'ಸುಧಾರಣೆ'ಯ ಪ್ರಕ್ರಿಯೆಯ ಮರು ಪರಾಮರ್ಶೆ ನಡೆಸಬೇಕೆಂಬ ಒತ್ತಾಯವನ್ನು ಬಲಪಡಿಸಿದೆ. ಇದಲ್ಲದೆ ಮುಂಬೈಯಲ್ಲಿ ಇತ್ತೀಚೆಗೆ ಪ್ರವಾಹದ ವೇಳೆಯಲ್ಲಿ ಪ್ರದರ್ಶನಗೊಂಡ ರಿಲೆಯನ್ಸ್ ಕಂಪನಿಯ ಅಕ್ಷಮ್ಯ ಅದಕ್ಷತೆ ಹಾಗೂ ಒರಿಸ್ಸಾದಲ್ಲಿನ ಅನುಭವ ಕೂಡಾ ಇದೆ. ಅಷ್ಟೇ ಅಲ್ಲ, ಬ್ರಿಟನ್ನಿನಲ್ಲಿ ಕೂಡಾ ಇದೇ ಅನುಭವವಾಗಿದೆ. ಬ್ರಿಟನ್ನಿನಲ್ಲಿನ ಖಾಸಗೀಕರಣದ ಅಧ್ಯಯನ ಈ ಕೆಳಗಿನ ಅಂಶಗಳನ್ನು ಗಮನಿಸಿದೆ.

1. ವಿದ್ಯುತ್ ಮಾರಕಟ್ಟೆಯಲ್ಲಿ ವಿದ್ಯುತ್ತಿನ ಬೆಲೆಯಿಳಿದಾಗಲೂ ದರ ಪ್ರಯೋಜನವನ್ನು ಚಿಲ್ಲರೆ ಬಳಕೆದಾರರಿಗೆ ವರ್ಗಾಯಿಸಲಿಲ್ಲ. ಅಂದರೆ ಅವರಿಗೆ ಆ ದರ ಇಳಿಸಲಿಲ್ಲ.
2. ದೂರುಗಳ ಸಂಖ್ಯೆಯಲ್ಲಿ ಹೆಚ್ಚಳ - ಹೊಸ ರೀತಿಯ ದೂರುಗಳು
3. ಸ್ಪರ್ಧೆ ಬೆಳೆಯುತ್ತದೆಂಬ ವಾದ ಟೊಳ್ಳು ಎಂದು ಕಂಡುಬಂತು.
4. ಕಡಿಮೆ ಆದಾಯದ ಬಳಕೆದಾರರಿಗೆ ಹೆಚ್ಚಿನ ವಿದ್ಯುತ್ ದರ.

ಈ ಹಿನ್ನೆಲೆಯಲ್ಲಿ ವಿದ್ಯುಚ್ಛಕ್ತಿ ನೌಕರರು ಮತ್ತು ಇಂಜಿನಿಯರುಗಳ ಒಕ್ಕೂಟ ಪ್ರಧಾನಮಂತ್ರಿಗಳು ಹಾಗೂ ವಿದ್ಯುತ್ ಮಂತ್ರಿಗಳೊಂದಿಗೆ ದೀರ್ಘ ಚರ್ಚೆ ನಡೆಸಿವೆ. ಆರು ತಿಂಗಳೊಳಗೆ ದಿಲ್ಲಿ, ಒರಿಸ್ಸಾ, ಮುಂತಾದವುಗಳ ಅನುಭವಗಳ ಪರಾಮರ್ಶೆ ನಡೆಸಲಾಗುವುದು ಎಂಬ ವಚನವನ್ನು ಸರ್ಕಾರ ಅವರಿಗೆ ನೀಡಿದೆ.

ಖಾಸಗೀಕರಣ ವಿದ್ಯುತ್ ಬಿಕ್ಕಟ್ಟಿಗೆ ಖಂಡಿತಾ ಪರಿಹಾರವಲ್ಲ ಎಂಬ ಅರಿವು ಈಗ ವ್ಯಾಪಕವಾಗುತ್ತಿದೆ. ಆದ್ದರಿಂದ ವಿದ್ಯುಚ್ಛಕ್ತಿ ಕಾನೂನು - 2003 ರ ಪರಾಮರ್ಶೆ ಈಗ ಅತ್ಯಗತ್ಯವಾಗಿ ನಡೆಯಲೇಬೇಕು.

○

ಯಾವುದು ಹಿತ?

ಗಂಡ ಸತ್ತಾಗ,
ಚಿತೆಯೇರಿದರೆ
ಸತಿಯಾಗುತ್ತಾಳೆ
ದೇವತೆಯಾಗುತ್ತಾಳೆ
ಗಂಡ ಇದ್ದಾಗ
ಜೊತೆಗೂಡಿ ನಡೆದರೆ
ಗಯ್ಯಾಳಿಯಾಗುತ್ತಾಳೆ
ನೀತಿಗೆಟ್ಟವಳಾಗುತ್ತಾಳೆ
ಹೇಗಿದೆ ನೋಡಿ
ಪುರುಷ ಪ್ರಧಾನ
ವ್ಯವಸ್ಥೆಯ
ಮಹಿಳಾ ಸ್ವಾತಂತ್ರ್ಯದ
ಶೋಷಣೆ
ಚಳುವಳಿ ದಮನದ
ಸೂಕ್ಷ್ಮ ಯೋಜನೆ

- ಎನ್.ವ್ಹಿ.ಸೌಮ್ಯರಾಣಿ
ಬಳ್ಳಾರಿ

ರಾಜಸ್ತಾನ

ರೈತ ಚಳುವಳಿಯ ಅಮೋಘ ಜಯ

ರಾಜಸ್ಥಾನದ ಕೊಲೆಗಡುಕ, ರೈತದ್ರೋಹಿ, ಬಿಜೆಪಿ ಸರ್ಕಾರದ ವಿದ್ಯುತ್‌ದರ ಏರಿಕೆ ನೀತಿ ಹಾಗೂ ಮತ್ತಿತರ ಸಮಸ್ಯೆಗಳ ವಿರುದ್ಧ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ನೇತೃತ್ವದಲ್ಲಿ ನಡೆದ ಚಾರಿತ್ರಿಕ ಮುಷ್ಕರ ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ನಡೆದ ಹೋರಾಟಗಳಲ್ಲೇ ಒಂದು ಗಮನಾರ್ಹ ಹೋರಾಟವಾಗಿದೆ. ರಾಜಧಾನಿ ಜೈಪುರದಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ರೈತರು ಜಮಾಯಿಸಿ ಪಟ್ಟು ಬಿಡದೇ, ಕುಳಿತದಲ್ಲಿಂದ ಕದಲದೆ ನೆಲಕಚ್ಚಿ ಹಗಲು ರಾತ್ರಿ ದಿನಗಟ್ಟಲೆ ಜಂಡಾವೂರಿ 'ಮಹಾಪಡಾವ್'(ಮಹಾರಿಕಾಣೆ) ನಡೆಸಿದ ರೈತಾಪಿ ಜನರ ಸಮರಶೀಲ ಚಳುವಳಿ ರಾಜ್ಯದ ಕೋಟ್ಯಾಂತರ ರೈತರ ಗಮನ ಸೆಳೆದು ಅವರ ಬೆಂಬಲಗಳಿಸಿ ಅಧಿಕಾರರೂಢ ವಸುಂಧರರಾಜೇ ಸಿಂಧ್ಯ ನೇತೃತ್ವದ ಸರ್ಕಾರವನ್ನು ಮಣಿಸಿ ತನ್ನ ಬೇಡಿಕೆಗಳನ್ನು ಗೆಲ್ಲುವಲ್ಲಿ ಯಶಸ್ವಿಯಾಗಿದೆ.

ಮೊನ್ನೆ ಮೊನ್ನೆ ತಾನೆ ರಾಜಸ್ಥಾನದ ಶ್ರೀಗಂಗಾನಗರ ಪ್ರದೇಶದಲ್ಲಿ ಅಖಿಲ ಭಾರತ ಕಿಸಾನ್ ಸಭಾ ನೇತೃತ್ವದ 'ಕಿಸಾನ್-ಮಜ್ದೂರ್-ವ್ಯಾಪಾರಿ ಸಂಘರ್ಷ ಸಮಿತಿ' (ರೈತ- ಕಾರ್ಮಿಕ-ವರ್ತಕ ಸಂ.ಸಮಿತಿ)ಯಿಂದ ನೀರಿಗಾಗಿ ನಡೆದ ಬೃಹತ್ ಚಳುವಳಿಯು ತನ್ನ ಐತಿಹಾಸಿಕ ವಿಜಯವನ್ನು ದಾಖಲಿಸಿದ್ದು ರಾಜಸ್ಥಾನದ ಜನಮನದಲ್ಲಿ ಇನ್ನೂ ಹಸಿರಾಗಿದೆ.

ನೀರಾವರಿ ಕಾಲುವೆಗಳ ಕಳಪೆ ಕಾಮಗಾರಿ ಹಾಗೂ ಅದನ್ನು ಸರಿಪಡಿಸಲಾರದ ತನ್ನ ದಯನೀಯ ವೈಫಲ್ಯವನ್ನು ಮರೆಮಾಚಿಕೊಳ್ಳಲು ನೀರಿನ ಕೊರತೆಯ ನೆಪವೊಡ್ಡಿ ಕಾಲುವೆಗೆ ನೀರು ಹರಿಸದೆ ಲಕ್ಷಾಂತರ ರೈತರು ಮತ್ತು ಬಾಯಾರಿಕೆಯಿಂದ ಕಂಗೆಟ್ಟ ಲಕ್ಷಾಂತರ ಜನರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದ್ದ ಬಿಜೆಪಿ ಸರ್ಕಾರದ ವಿರುದ್ಧ ತಿರುಗಿ ಬಿದ್ದ ಜನತೆ ಅಮೋಘ ಚಳುವಳಿ ಹಾಗೂ ತನ್ನ ಧೀರೋದಾತ್ತ ತ್ಯಾಗ ಬಲಿದಾನದ ಮೂಲಕ ಜನವಿರೋಧಿ ಬಿಜೆಪಿ ಸರ್ಕಾರದ ಹಠಮಾರಿತನವನ್ನು ಮಣಿಸಿ ನೀರು ಪಡೆಯುವಲ್ಲಿ ಯಶಸ್ವಿಯಾಗಿತ್ತು. ಅಕ್ಟೋಬರ್ 2004 ರಲ್ಲಿ ನಡೆದ ಚಳುವಳಿಯಲ್ಲಿ ಬಿಜೆಪಿ ಸರ್ಕಾರ ಪೊಲೀಸರ ಗುಂಡಿಗೆ ಎದೆಯೊಡ್ಡಿ ಆರು ಜನ ರೈತರು ಹುತಾತ್ಮರಾಗಿದ್ದರು.

ಇದೀಗ ಇಡೀ ರಾಜ್ಯದ ರೈತರ- ಜ್ವಲಂತ ಪ್ರಶ್ನೆಯಾದ ವಿದ್ಯುತ್ ದರ ಏರಿಕೆ, ವಿದ್ಯುತ್ ಪೂರೈಕೆ ತೊಂದರೆಗಳ ವಿರುದ್ಧ, ವಿದ್ಯುತ್ ಸಂಬಂಧಿ ಸಮಸ್ಯೆಗಳ ವಿರುದ್ಧ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ತನ್ನ ನೇತೃತ್ವದಲ್ಲಿ ಮತ್ತೊಂದು ಐತಿಹಾಸಿಕ ಹೋರಾಟವನ್ನು ರಾಜ್ಯದ ಇತಿಹಾಸದಲ್ಲಿಯೇ ಅಭೂತಪೂರ್ವ ಎನ್ನುವ ಮಹಾ ಚಳುವಳಿಯನ್ನು ನಡೆಸಿ ಮತ್ತೊಂದು ವಿಜಯವನ್ನು ದಾಖಲಿಸಿದೆ.

ಮೊದಲೇ ನೀರಿಗಾಗಿ ಹಾಹಾಕಾರವಿರುವ ರಾಜಸ್ಥಾನದಲ್ಲಿ ಆಳುವ ಸರ್ಕಾರಗಳ ಬೇಜವಾಬ್ದಾರಿತನವೂ ಸೇರಿಕೊಂಡು ಬಿಟ್ಟರೆ ಏನೇನು ಅನಾಹುತವಾಗಬಹುದೋ ಅದೆಲ್ಲವೂ ರಾಜಸ್ಥಾನದಲ್ಲಿ ಆಯಿತು. ನೂರಾರು ಅಡಿ ಆಳದಿಂದ ನೀರೆತ್ತಿ ಕೃಷಿ ಮಾಡಬೇಕೆನ್ನುವ ರೈತರಿಗೆ ವಿದ್ಯುತ್ ನೀಡಲು ಸರ್ಕಾರ ತಯಾರಿಲ್ಲ. ಕೃಷಿಗೆ ವಿದ್ಯುತ್ ಕಡಿತ, ವಿದ್ಯುತ್ ನಿಲುಗಡೆ- ವಿದ್ಯುತ್ ಸ್ಥಗಿತ- ಕೃಷಿ ವಿದ್ಯುತ್‌ಗೆ ಶೇ.40ರಷ್ಟು ದರ ಏರಿಕೆ 'ಸಾಮಾನ್ಯ ವಿಭಾಗ'ದಲ್ಲಿ ರೈತರಿಗೆ ವಿದ್ಯುತ್ ಸಂಪರ್ಕ ಇಲ್ಲ. ಇದು ವಿಶೇಷ ವಿಭಾಗ! ಅಂದರೆ ಸಂಪರ್ಕಗಳಿಗೆ ಹೆಚ್ಚು ಶುಲ್ಕ! ಹೊಸ ಸಂಪರ್ಕಗಳಿಗೆ ಅಗತ್ಯವಾದ ಹೊಸ ಕಂಬ, ತಂತಿ, ಇತ್ಯಾದಿಗಳ ವೆಚ್ಚ ಭರಿಸಬೇಕು, ಶುಲ್ಕ ಕಟ್ಟಿ ವರ್ಷಗಳುರುಳಿದರೂ ಸಂಪರ್ಕವಿಲ್ಲ, ಅರ್ಜಿ ಸಲ್ಲಿಸುವುದಕ್ಕೆ ನೂರೆಂಟು ಷರತ್ತುಗಳು, ಕೆಪಾಸಿಟರ್‌ಗಳನ್ನು ಅಳವಡಿಸಿಕೊಂಡರೆ ದಂಡ, ಲೋಡಿಂಗ್‌ನಲ್ಲಿ ಏರುಪೇರಾದರೆ ರೈತರಿಗೆ ದಂಡ. ರೈತರ ಮೇಲಿನ ದಬ್ಬಾಳಿಕೆಗೆ ಕೊನೆಯೇ ಇಲ್ಲ.

ತಮ್ಮ ಮೇಲೆ ಹೇರಿರುವ ಸಂಕಟಗಳ ಸರಮಾಲೆಯನ್ನು ಕಿತ್ತು ಎಸೆಯಲು ಐಐಕೆಎಸ್ ನೇತೃತ್ವದಲ್ಲಿ ಎದ್ದು ಬಂದಿತೋ ರೈತರ ದಂಡು. ಸೆಪ್ಟೆಂಬರ್ 1,2005ರಂದು ರಾಜಸ್ಥಾನದ ರಾಜಧಾನಿ ಜೈಪುರಕ್ಕೆ ದಂಡುದಂಡಾಗಿ ಬಂದಿಳಿದ ರೈತಾಪಿ ಜನತೆಯ ಮನಸ್ಸಿನೊಳಗೆ ತೀರ್ಮಾನ ದೃಢವಾಗಿತ್ತು. ಬೇಡಿಕೆ ಈಡೇರುವವರೆಗೆ ಕದಲಬಾರದು ಅಲ್ಲಿಂದ ಎಂಬುದೇ ಆ ದೃಢತೆ. ಅಲ್ಲೆ ಅಡಿಗೆ, ಅಲ್ಲೇ ಊಟ, ಅಲ್ಲೇ ನಿದ್ರೆ.

ಅಷ್ಟು ಸುಲಭಕ್ಕೆ ಜಗ್ಗುವುದೇ ಸರ್ಕಾರ. ಆ ಸರ್ಕಾರದ ಜುಟ್ಟನ್ನು ಹಿಡಿದಿರುವುದು ಮತಾಂಧ ಆರೆಸ್ಸೆಸ್ ಮತ್ತು ಸಂಘಪರಿವಾರ. ರೈತರ ಸಂಕಟಗಳನ್ನು ಕಟ್ಟಿಕೊಂಡು ಅವರಿಗೇನಾಗಬೇಕಿದೆ? ಆಳುವ ವರ್ಗದ ಹಿತಗಳಿಗೆ ಮಾತ್ರ ಧಕ್ಕೆಯಾಗಬಾರದು ಅಷ್ಟೆ. ಚಳುವಳಿಕಾರರೊಂದಿಗೆ ಅತ್ಯಂತ ಕಠಿಣವಾಗಿ ವರ್ತಿಸಬೇಕೆಂದು ಸರ್ಕಾರಕ್ಕೆ ಸೂಚಿಸಿತ್ತಂತೆ ಆರೆಸ್ಸೆಸ್ಸು. 'ರಾಜಕುಮಾರಿ' ವಸುಂಧರ ರಾಜೇ ಸಿಂಧ್ಯರವರಿಗೂ ರೈತರ ದಮನ ಅಪ್ಯಾಯಮಾನವಾದ ವಿಷಯವೇ. ಆದರೆ ಹೋರಾಟವನ್ನು ಹತ್ತಿಕ್ಕುವ ಸರ್ಕಾರದ ಯತ್ನಗಳು ಫಲಿಸಲಿಲ್ಲ.

ಹಿಂದೆ ನೀರಿಗಾಗಿ ನಡೆದ ಚಳುವಳಿಯಲ್ಲಿ ಚಳುವಳಿ ಮುಖಂಡರನ್ನು ಹಿಡಿದು ಹಿಗ್ಗಾಮುಗ್ಗಾ ಬಡಿದರು. 600 ಚಳುವಳಿಕಾರರ ಮೇಲೆ ಮೊಕದ್ದಮೆ ಹೂಡಿದರು. ಸಾವಿರಾರು



ಜನರ ಮೇಲೆ ಲಾಠಿ ಚಾರ್ಜ್ ನಡೆಯಿತು. ಕೊನೆಗೆ ಗೋಲಿಬಾರ್ ನಡೆಸಿ ಆರು ಜನರನ್ನು ಕೊಂದರು. ಇಷ್ಟೆಲ್ಲಾ ದಮನಕಾಂಡವನ್ನು ಎದುರಿಸಿಯೂ ಚಳುವಳಿ ಗಟ್ಟಿಯಾಗಿ ನಿಂತಿತು.

ಅದೇ ದೃಢತೆ ಈ ಚಳುವಳಿಯಲ್ಲಿಯೂ ಮುಂದುವರಿಯಿತು. ಹೋರಾಟದ ಸುದ್ದಿ ರಾಜ್ಯದಲ್ಲೆಲ್ಲಾ ಹರಡಿ ಸಂಘಟನೆ ಇಲ್ಲದ ಹೊಸ ಹೊಸ ಪ್ರದೇಶಗಳಿಂದ ಸಹ ಜನ ರಾಜಧಾನಿಯತ್ತ ನುಗ್ಗತೊಡಗಿದರು. 15 ಜಿಲ್ಲೆಗಳಿಂದ ಸುಮಾರು 1 ಲಕ್ಷಕ್ಕೂ ಹೆಚ್ಚು ಜನರು ಜೈಪುರದಲ್ಲಿ ಜಮಾಯಿಸಿದರು.

ರಾಜಧಾನಿಯಲ್ಲಿ ಸೇರಿದ ರೈತರ ಬೆಂಬಲಕ್ಕೆ ನಗರದ ಕಾರ್ಮಿಕರು ಬೀದಿಗಿಳಿದರು. ರೈತರ ಶಿಸ್ತುಬದ್ಧ ಹೋರಾಟ ನಗರವಾಸಿಗಳ ಮನ ಗೆದ್ದಿತು. ರೈತರಪರ ಸಹಾನುಭೂತಿ, ಕ್ವಿಂಟಾಲ್‌ಗಟ್ಟಲೆ ಆಹಾರಧಾನ್ಯ ರೈತರ ಕ್ಯಾಂಪಿಗೆ ಬಂದಿತು. ರೈತರೂ, ಕಾರ್ಮಿಕರೂ ಸೇರಿ 'ಏಕತಾ ರ್‍ಯಾಲಿ' ಗಳು ನಡೆದವು.

ಸೆಪ್ಟೆಂಬರ್ 8, 2005 ರಂದು ಮುಖ್ಯಮಂತ್ರಿಗಳ ಬಂಗಲೆಗೆ ಮುತ್ತಿಗೆ ಹಾಕಲು ಕರೆ ನೀಡಲಾಯಿತು. ಅದೇ ಸಮಯದಲ್ಲಿ ಈ ಚಳುವಳಿಯನ್ನು ಬೆಂಬಲಿಸಿ ರಾಜ್ಯವ್ಯಾಪಿ ಪ್ರತಿಭಟನೆಗೆ, ರಸ್ತೆ ತಡೆಗಳಿಗೆ ಕರೆ ನೀಡಲಾಯಿತು. ಇಡೀ ರಾಜ್ಯದಲ್ಲಿ ಪ್ರತಿಭಟನೆಯ ಕಾವೆದ್ದಿತು.

ರಾಜ್ಯದ ನೂರಾರು ಕಡೆಗಳಲ್ಲಿ-ನೂರಾರು ರಸ್ತೆಗಳಲ್ಲಿ ರಸ್ತಾರೋಕೋ ನಡೆಯಿತು. ಮಹಿಳೆಯರು ಈ ಪ್ರತಿಭಟನೆಗಳ ಮುಂಚೂಣಿಯಲ್ಲಿ ನಿಂತು ಅಮೋಘ ಪಾತ್ರ ವಹಿಸಿದರು. ಹಲವಾರು ಜಿಲ್ಲೆಗಳಲ್ಲಿ ರಸ್ತೆಯಲ್ಲಿ ತಡೆಯಲು ವಾಹನಗಳು ಮತ್ತು ಜನಗಳೇ ಇರಲಿಲ್ಲ! ಊರೂರುಗಳು ಬಂದ್‌ನಿಂದ ಸ್ತಬ್ಧವಾದಂತಹ ಪರಿಸ್ಥಿತಿ ನಿರ್ಮಾಣವಾಯಿತು.

ತನ್ನ ಎಂದಿನ ದಮನ ಕಾಂಡವನ್ನೇ ಮುಂದು ವರಿಸಬೇಕೋ ಇಲ್ಲ ಸೋಲೊಪ್ಪಿ ಕೊಳ್ಳಬೇಕೋ ಎಂದು ಸರ್ಕಾರ ಗೊಂದಲಕ್ಕೊಳಗಾಯಿತು. ಈ ಬಗ್ಗೆ ಸರ್ಕಾರದಲ್ಲೇ ಭಿನ್ನಾಭಿಪ್ರಾಯ ಇರುವುದೂ ಬಯಲಾಯಿತು. ಇಡೀ ರಾಜ್ಯದ ಜನತೆ ಚಳುವಳಿಗೆ ಸ್ಪಂಧಿಸಿದ ರೀತಿ ಕಂಡು ಬೆದರಿದ ಸರ್ಕಾರ ಕೊನೆಗೆ ಚಳುವಳಿಗೆ ಮಣಿಯಬೇಕಾಯಿತು.

ಇಡೀ ದಿನ ನಡೆದ ಮಾತುಕತೆಯ ಫಲವಾಗಿ ಶೇ.40ರಷ್ಟು ವಿದ್ಯುತ್‌ದರ ಏರಿಕೆ ವಾಪಸ್ಸಾಯಿತು. ರೈತರು ಕಟ್ಟಬೇಕಿದ್ದ 'ಕನಿಷ್ಟ ಶುಲ್ಕ' ರದ್ದಾದವು. ಕೃಷಿಗೆ ಪೂರಕವಾಗಿ ಗ್ರಾಮೀಣ ಪ್ರದೇಶಗಳಿಗೆ ನಿತ್ಯ 8 ಗಂಟೆಗೆ ವಿದ್ಯುತ್ ನೀಡಲು ತೀರ್ಮಾನಿಸ ಲಾಯಿತು. ರೈತರಿಗೆ ಹಾಕಲಾಗುವ ಹಲವು ದಂಡನಾ ಕ್ರಮಗಳು ರದ್ದಾದವು. ಹೊಸ ಸಂಪರ್ಕಕ್ಕಾಗಿ ಕಾದಿರುವವರಿಗೆ ಸಂಪರ್ಕ ನೀಡಲು ಹಾಗೂ ಆ ಸಂಬಂಧದ ಷರತ್ತುಗಳನ್ನು ಸರಳಗೊಳಿಸಲು- ಹೀಗೆ ಚಳುವಳಿಯ ಬೇಡಿಕೆಗಳನ್ನು ಸರ್ಕಾರ ಒಪ್ಪಬೇಕಾಯಿತು.

ವಿದ್ಯುತ್ ಕೊರತೆಯಿಂದ ಹಾನಿ ಅನುಭವಿಸಿದಂತಹ ರೈತರಿಗೆ ಪರಿಹಾರ ನೀಡುವಂತಹ ಕ್ರಮಗಳೂ ಈ ಒಪ್ಪಂದದಲ್ಲಿ ಸೇರಿವೆ.

ಈ ಹಿಂದೆ ನೀರಿಗಾಗಿ ನಡೆದ ಚಳುವಳಿಯ ಸಂದರ್ಭದಲ್ಲಿ ಬಂಧಿಸಲಾಗಿದ್ದ ಹೇತ್ರಾಮ್ ಬೆನಿವಾಲ್ ಸೇರಿದಂತೆ ಇತರ ರೈತ ಮುಖಂಡರನ್ನು ಬಿಡುಗಡೆ ಮಾಡಲು, ಹಿಂದಿನ ಹೋರಾಟದಲ್ಲಿ ಆಗಿರುವ ಒಪ್ಪಂದವನ್ನು ಸಮರ್ಪಕವಾಗಿ ಜಾರಿ ಮಾಡಲು ನಿರ್ಧರಿಸಲಾಯಿತು.

ಈ ಐತಿಹಾಸಿಕ ಹೋರಾಟದಿಂದ ರಾಜ್ಯದಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಖ್ಯಾತಿ, ಪ್ರತಿಷ್ಠೆ ಮತ್ತಷ್ಟು ಮೇಲೇರಿದೆ. ಗ್ರಾಮ ಮಟ್ಟದ ಹೋರಾಟ ಸಮಿತಿಗಳ ರಚನೆಯ ಮೂಲಕ ಜನರನ್ನು ಸಂಘಟಿಸಿ ರಾಜ್ಯವ್ಯಾಪಿ ವಿವಿಧ ಭಾಗಗಳಲ್ಲಿ 50ಕ್ಕೂ ಹೆಚ್ಚು ಸಾಮೂಹಿಕ ಸಭೆಗಳ ಮೂಲಕ ವ್ಯವಸ್ಥಿತ ಯೋಜನೆ ಸಿದ್ಧತೆಯೊಂದಿಗೆ ರೈತ ಕಾರ್ಮಿಕರು, ನೌಕರರ ಇತರ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯೊಂದಿಗೆ ನಡೆಸಲಾದ ಈ ಹೋರಾಟ ಇಡೀ ದೇಶದ ರೈತ ಚಳುವಳಿಗೆ ಹೊಸ ಸ್ಫೂರ್ತಿ ನೀಡಿದೆ. ○

ಆಹಾರ-ಭೂಮಿ-ಉದ್ಯೋಗ ಪ್ರಶ್ನೆಗಳ ಆಧಾರದಲ್ಲಿ ಪಕ್ಷದ ರಾಜ್ಯವ್ಯಾಪಿ ಪ್ರಚಾರ ಜಾಥಾಗಳು

ಜನರ ಬದುಕಿನ ಮೂಲಭೂತ ಪ್ರಶ್ನೆಗಳಾದ ಆಹಾರ ಭೂಮಿ ಉದ್ಯೋಗಗಳ ಪ್ರಶ್ನೆಗಳ ಆಧಾರದಲ್ಲಿ ರಾಜ್ಯವ್ಯಾಪಿ ನಡೆಯುತ್ತಿರುವ ಪ್ರಚಾರಾಂದೋಲನ ಮತ್ತು ಚಳುವಳಿಯ ಭಾಗವಾಗಿ ಪಕ್ಷದ ರಾಜ್ಯ ಮುಖಂಡರ ನೇತೃತ್ವದ ನಾಲ್ಕು ಜಾಥಾಗಳು ನಡೆದಿವೆ.

ಒಂದನೆಯ ಜಾಥಾವನ್ನು ಸಿಪಿಐ(ಎಂ)ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಕಾಂ.ಕೆ.ನೀಲಾ ಅವರು ಉದ್ಘಾಟನೆ ಮಾಡಿದರು. ಈ ಜಾಥಾ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಸಂಚರಿಸಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಸೆಪ್ಟೆಂಬರ್ 15ರ ರಾತ್ರಿ ಮುಕ್ತಾಯಗೊಂಡಿತು. ಈ ಜಾಥಾದಲ್ಲಿ ನೀಲಾ ಅವರಲ್ಲದೆ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ರಾಜ್ಯಸಮಿತಿ ಸದಸ್ಯರಾದ ಕಾಂ.ಯು.ಬಸವರಾಜ್, ಮಲ್ಲಯ್ಯ ಜಾಲಳ್ಳಿ ಮುಂತಾದವರು ಭಾಗವಹಿಸಿದ್ದರು.

ಎರಡನೆಯ ಜಾಥಾ ಸೆಪ್ಟೆಂಬರ್ 10ರಂದು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಐತಿಹಾಸಿಕ ಹುತಾತ್ಮ ಕೇಂದ್ರ ವಿಧುರಾಶ್ವಥದಲ್ಲಿ ಉದ್ಘಾಟನೆಗೊಂಡಿತು. ಪಕ್ಷದ ರಾಜ್ಯದ ಕಾರ್ಯದರ್ಶಿ ಮಂಡಳಿ ಸದಸ್ಯರು, ಬಾಗೇಪಲ್ಲಿ ಕ್ಷೇತ್ರದ ಶಾಸಕರೂ ಆದ ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರು ಈ ಜಾಥಾವನ್ನು ಉದ್ಘಾಟಿಸಿದರು. ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ನಗರ, ತುಮಕೂರು ಜಿಲ್ಲೆಗಳಲ್ಲಿ ಸಂಚರಿಸಿರುವ ಈ ಜಾಥಾ, ಮುಂದೆ ಮಂಡ್ಯದಲ್ಲಿ ಸಂಚರಿಸಿ ನಂತರ ಸೆ.27ರಂದು ಮೈಸೂರಿನಲ್ಲಿ ಮುಕ್ತಾಯಗೊಳ್ಳಲಿದೆ. ಕಾಂ.ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಜಿ.ಸಿ.ಬಯ್ಯಾರೆಡ್ಡಿ, ರಾಜ್ಯ ಸಮಿತಿ ಸದಸ್ಯರಾದ ಕಾಂ.ಕೆ.ಪ್ರಕಾಶ್, ಕಾಂ.ಮೀನಾಕ್ಷಿ ಸುಂದರಂ, ಕಾಂ.ಮುಜೀಬ್ ಮುಂತಾದವರು ಈ ಜಾಥಾದ ಮಾರ್ಗದಲ್ಲಿ ನಡೆದ ವಿವಿಧ ಸಭೆಗಳಲ್ಲಿ ಪಾಲ್ಗೊಂಡು ಮಾತನಾಡಿದ್ದಾರೆ.

ಕರಾವಳಿ ಜಿಲ್ಲೆಗಳ ಜಾಥಾ ಸೆಪ್ಟೆಂಬರ್ 17ರಂದು ಉತ್ತರಕನ್ನಡ ಜಿಲ್ಲೆಯ ಕಾರವಾರದಲ್ಲಿ ಉದ್ಘಾಟನೆಗೊಂಡಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ನಿತ್ಯಾನಂದ ಸ್ವಾಮಿ ಜಾಥಾ ಉದ್ಘಾಟಿಸಿದರು. ಈ ಜಾಥಾ ಉತ್ತರಕನ್ನಡ, ಉಡುಪಿ, ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಸಂಚರಿಸಿ ಮುಕ್ತಾಯಗೊಂಡಿದೆ. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್, ಬಿ.ಮಾಧವ, ಕೆ.ಶಂಕರ್, ರಾಜ್ಯಸಮಿತಿ ಸದಸ್ಯರಾದ ಕಾಂ.ಶಾಂತಾರಾಮ ನಾಯಕ್, ಜೆ.ಬಾಲಕೃಷ್ಣಶೆಟ್ಟಿ, ರಾಮಚಂದ್ರ ಉಚ್ಚಿಲ್ ವಿವಿಧ ಹಂತಗಳಲ್ಲಿ ಭಾಗವಹಿಸಿದ್ದರು.

ನಾಲ್ಕನೆಯ ಜಾಥಾವು ಸೆಪ್ಟೆಂಬರ್ 20ರಂದು ಬಿಜಾಪುರದಲ್ಲಿ ಉದ್ಘಾಟನೆಗೊಂಡಿದೆ. ಕಾಂ.ನಿತ್ಯಾನಂದಸ್ವಾಮಿ ಜಾಥಾ ಉದ್ಘಾಟಿಸಿದ್ದಾರೆ. ಈ ಜಾಥಾ ಬಾಗಲಕೋಟೆ, ಗದಗ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ ಸಂಚರಿಸಿ ಬೆಳಗಾಂನ ರಾಮದುರ್ಗದಲ್ಲಿ ಕೊನೆಗೊಂಡಿದೆ. ರಾಜ್ಯಸಮಿತಿ ಸದಸ್ಯರಾದ ಕಾಂ.ಭೀಮಸಿ ಕಲಾದಗಿ, ಅಣ್ಣಾರಾಯ ಈಳಗೇರ, ವಿ.ಪಿ.ಕುಲಕರ್ಣಿ ಮುಂತಾದವರು ಜಾಥಾದಲ್ಲಿ ಪಾಲ್ಗೊಂಡಿದ್ದಾರೆ.

ಆಹಾರ-ಭೂಮಿ -ಉದ್ಯೋಗಗಳ ಸಂಬಂಧಿತವಾದ ವಿವಿಧ ಪ್ರಶ್ನೆಗಳ ಬಗೆಗೆ ಪಕ್ಷದ ಬೇಡಿಕೆಗಳನ್ನು ಜನರ ಮುಂದಿಡುತ್ತಾ, ಜನರ ಅಭಿಪ್ರಾಯ, ಜನರ ನಿರ್ದಿಷ್ಟ ಸಮಸ್ಯೆಗಳ ಮಾಹಿತಿ ಪಡೆಯುತ್ತಾ, ಸೆಪ್ಟೆಂಬರ್ 29 ಸಾರ್ವತ್ರಿಕ ಮುಷ್ಕರದ ಬಗೆಗೂ ತಿಳಿಸುತ್ತಾ ನಡೆದಿರುವ ಈ ಜಾಥಾಕ್ಕೆ ರಾಜ್ಯದ ಜನತೆ ಹೋದಲ್ಲೆಲ್ಲಾ ಉತ್ತಮವಾಗಿ ಪ್ರತಿಕ್ರಿಯಿಸಿ ಸ್ವಾಗತಿಸಿದ್ದಾರೆ. ಪಕ್ಷದಿಂದ ಮುಂದೆ ನಡೆಯಲಿರುವ ನಿರ್ದಿಷ್ಟ ಚಳುವಳಿಗೂ ಜಾಥಾ ಸ್ಫೂರ್ತಿ ನೀಡಿದೆ.

ಜಾನಪದ ತಜ್ಞ ಹಿರಿಯ ಚೇತನ ಡಾ : ಎಚ್.ಎಲ್.ನಾಗೇಗೌಡರ ನಿಧನಕ್ಕೆ ಸಂತಾಪ

ನಾಡಿನ ಜಾನಪದ ವಿದ್ವಾಂಸರೂ, ಹಿರಿಯ ಚೇತನ ಡಾ: ಎಚ್.ಎಲ್.ನಾಗೇಗೌಡರ ನಿಧನಕ್ಕೆ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಅತೀವ ಸಂತಾಪ ವ್ಯಕ್ತಪಡಿಸಿದೆ.

ಡಾ: ಎಚ್.ಎಲ್.ನಾಗೇಗೌಡರು ನಾಡು ಕಂಡ ಅಪರೂಪದ ವಿಶಿಷ್ಟ ಜಾನಪದ ತಜ್ಞರು.



ಜಾನಪದ ಉಳಿವಿಗಾಗಿ ಅವರು ಪಟ್ಟ ಪರಿಶ್ರಮ, ಅಹೋರಾತ್ರ ಪ್ರಯತ್ನಗಳು ಅತ್ಯಂತ ಗಣನೀಯ, ಈ ಕೆಲಸಕ್ಕಾಗಿ ಅವರು ಇಡೀ ಜೀವನವನ್ನೇ ಮುಡುಪಾಗಿಟ್ಟರು, ಅಪಾರ ಕೆಲಸವನ್ನು ಮಾಡಿದರು. ಅವರ ಕೊಡುಗೆ ಕರ್ನಾಟಕದಲ್ಲಿಯೇ ಎಣೆ ಇಲ್ಲದ್ದು ಎಂದು ಸಿಪಿಐ(ಎಂ) ಸ್ಮರಿಸಿದೆ. ಅವರು ಸ್ಥಾಪಿಸಿದ 'ಜಾನಪದ ಲೋಕ' ಈ ಕೊಡುಗೆಗಳಲ್ಲಿ ಒಂದು ಮೈಲುಗಲ್ಲು ಎಂದಿದೆ.

ಹಾಗೆಯೇ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಕಂಡ ಅದ್ಭುತ ಅನುಭವಗಳನ್ನು ಅದರ ಒಳ ನೋಟಗಳನ್ನು ಸರ್ಕಾರದ ಅಧಿಕಾರಿಯಾಗಿರುವಾಗಲೇ ಕನ್ನಡ ಸಾಹಿತ್ಯದ ಲೋಕಕ್ಕೆ ಅನಾವರಣ ಮಾಡಿದ್ದು ಸಹ ಅತ್ಯುತಮ ಕೆಲಸವಾಗಿದೆ. ಇದು ಭಾರತದ ಯಾವುದೇ ಭಾಷೆಗಳಲ್ಲಿಯೂ ಆಗದ ಮಹತ್ವದ ಕಾರ್ಯವಾಗಿದೆ ಎಂದು ಸಿಪಿಐ(ಎಂ) ಸ್ಮರಿಸಿದೆ.

ಅವರ ನಿಧನದಿಂದ ಸಾಹಿತ್ಯಲೋಕ - ಮುಖ್ಯವಾಗಿ ಜಾನಪದ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಎಂದು ಸಿಪಿಐ(ಎಂ) ಶೋಕಿಸಿದೆ.

ಅವರ ಅಂತ್ಯಕ್ರಿಯೆಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿಗಳೂ ಆದ, ಕೇಂದ್ರ ಸಮಿತಿ ಸದಸ್ಯ ಜಿ.ಎನ್.ನಾಗರಾಜ್ ರವರು ಭಾಗವಹಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಕರಾವಳಿ ಜಾಥಾ ದ.ಕ. ಜಿಲ್ಲೆಯಲ್ಲಿ ಹಾದು ಹೋದಾಗ....

'ಆಹಾರ, ಭೂಮಿ ಮತ್ತು ಉದ್ಯೋಗ' ಈ ಪ್ರಶ್ನೆಗಳನ್ನು ಕೇಂದ್ರೀಕರಿಸಿ ಪಕ್ಷದ ರಾಜ್ಯ ಸಮಿತಿ ಸಂಘಟಿಸಿರುವ ಜಾಥಾಗಳಲ್ಲಿ ಒಂದಾದ ಕರಾವಳಿ ಜಾಥಾ ದಿನಾಂಕ 17 ರಂದು ಕಾರವಾರದಲ್ಲಿ ಉದ್ಘಾಟನೆಗೊಂಡು ದಿನಾಂಕ 20 ರಂದು ದ.ಕ. ಜಿಲ್ಲೆಯಲ್ಲಿ ಪ್ರವೇಶಗೈದು ಜಿಲ್ಲೆಯ ವಿವಿಧೆಡೆಗಳಲ್ಲಿ ಜನಜಾಗೃತಿ ರೂಪಿಸಿತು.

ಪಶ್ಚಿಮ ಕರಾವಳಿಯ ಉದ್ದಗಲಕ್ಕೂ ಸಂಚರಿಸಿದ ಈ ಜಾಥಾ ಮಂಗಳೂರಿಗೆ ಪ್ರವೇಶಿಸಬೇಕಾದ ದಿನ ಪೂರ್ವ ಕರಾವಳಿಯಲ್ಲಿ ಕಂಡುಬಂದ ವಾಯುಭಾರ ಕುಸಿತ ಮತ್ತು ಚಂಡಮಾರುತದಿಂದ ವ್ಯಾಪಕ ಮಳೆಯಿಂದ ಮತ್ತು ರಭಸದ ಗಾಳಿಯಿಂದ ಅಲ್ಪಪ್ರಮಾಣದಲ್ಲಿ ಜನ ತೊಂದರೆಗೆ ಒಳಗಾಗಿದ್ದರು. ಪರಿಣಾಮವೆಂಬಂತೆ ಬೆಳಿಗ್ಗೆ 10 ಗಂಟೆಗೆ ಕುಳೂರಿನ ಜಂಕ್ಷನ್‌ನಲ್ಲಿ ಜಾಥಾ ಜಿಲ್ಲೆಗೆ ಆಗಮಿಸಿ ಅಧಿಕೃತ ಕಾರ್ಯಕ್ರಮಗಳನ್ನು ನಡೆಸಬೇಕಾಗಿತ್ತು. ಮಳೆಯಿಂದಾಗಿ ಒಂದು ತಾಸು ತಡವಾಗಿ ಬಂದಾಗ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ನಗರ ಸಮಿತಿ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಯಾದವ ಶೆಟ್ಟಿ, ಕೃಷ್ಣಪ್ಪ ಕೊಂಚಾಡಿ, ಸುನೀಲ್ ಕುಮಾರ್ ಬಜಾಲ್‌ರವರನ್ನು ಒಳಗೊಂಡಂತೆ ವಿವಿಧ ಸಾಮೂಹಿಕ ಸಂಘಟನೆಗಳ ನಾಯಕರು, ಕಾರ್ಯಕರ್ತರು ಸ್ವಾಗತಿಸಿದರು. ಜಾಥಾ ತಂಡದ ನಾಯಕರಾದ ಪಕ್ಷದ ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್‌ರವರು ಜಾಥಾದ ಉದ್ದೇಶಗಳನ್ನು ವಿವರಿಸಿದರು. ಕೆ.ಆರ್.ಶ್ರೀಯಾನ್‌ರವರು ಪ್ರಮುಖ ಭಾಷಣ ಮಾಡಿದರು. ಅನಂತರ ಪಕ್ಷದ ಸದಸ್ಯರು ಹತ್ತಾರು ಬೈಕ್, ಕಾರು ಮತ್ತು ಇತರ ವಾಹನಗಳ ಮೂಲಕ ಮೆರವಣಿಗೆಯ ರೂಪದಲ್ಲಿ



ಜಾಥಾ ತಂಡವನ್ನು ನಗರ ಪ್ರಮುಖ ಬೀದಿಗಳನ್ನು ಹಾದುಬರುವಂತೆ ಬಂದು ಸೆಂಟ್ರಲ್ ಮಾರ್ಕೆಟ್ ಆವರಣದಲ್ಲಿ ಬಹಿರಂಗ ಸಭೆ ನಡೆಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವರವರು ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು.

ಜಾಥಾತಂಡವು ಉಳ್ಳಾಲ ವಿಧಾನಸಭಾ ಕ್ಷೇತ್ರದ ತೊಕ್ಕೊಟುವಿನಲ್ಲಿ ರಾಮಚಂದ್ರ ಉಚ್ಚಿಲ್ ನೇತೃತ್ವದಲ್ಲಿ ಹಾರ್ದಿಕವಾಗಿ ಸ್ವಾಗತಿಸಲಾಯಿತು. ಇಲ್ಲಿ ಜಾಥಾ ತಂಡದ ನಾಯಕರಾದ ಕೆ.ಶಂಕರ್ ಮತ್ತು ಇನ್ನೊರ್ವ ಸದಸ್ಯರಾದ ಡೇವಿಡ್ ಕರ್ಕಡರವರು ಭಾಷಣ ಮಾಡಿದರು.

ಜಾಥಾ ತಂಡವನ್ನು ಕುತ್ತಾರುವಿನಲ್ಲಿ ಸ್ಥಳೀಯ ಸಿಪಿಐ(ಎಂ) ಶಾಖಾ ವತಿಯಿಂದ ಸ್ವಾಗತಿಸಿ ಸಾರ್ವಜನಿಕ ಸಭೆ ನಡೆಸಲಾಯಿತು. ಜಾಥಾ ತಂಡ ಎಲ್ಲಾ ಸದಸ್ಯರನ್ನು ಪರಿಚಯಿಸಿ ಹೂಗುಚ್ಛ ನೀಡಲಾಯಿತು.

ಶೈಕ್ಷಣಿಕ ಕೇಂದ್ರವಾಗಿ ಬೆಳೆಯುತ್ತಿ ರುವ ದೇರಳಕಟ್ಟೆಯಲ್ಲೂ ಸ್ಥಳೀಯ ಸಿಪಿಐ(ಎಂ) ಶಾಖೆಯ ವತಿಯಿಂದ ಜಾಥಾ ಭಾಷಣ ಕಾರ್ಯಕ್ರಮ ನಡೆಯಿತು. ಡೇವಿಡ್ ಕರ್ಕಡ, ಕೆ.ಯಾದವಶೆಟ್ಟಿ ಮಾತನಾಡಿದರು.

ಜಾಥಾ ತಂಡದ ಮುಂದಿನ ಕಾರ್ಯಕ್ರಮ ಬಂಟ್ವಾಳದ ಬಿ.ಸಿ. ರೋಡ್ ಜಂಕ್ಷನ್‌ನಲ್ಲಿ ನಡೆಯಿತು. ಜಾಥಾವನ್ನು ಬಂಟ್ವಾಳ ತಾಲ್ಲೂಕು ಸಿಪಿಐ(ಎಂ) ಕಾರ್ಯದರ್ಶಿ ಬಿ.ವಾಸುಗಟ್ಟಿ, ಸಂಜೀವ ಬಂಗೇರ, ವಿ.ರಾಮಣ್ಣ ವಿಟ್ಲ, ಉದಯಕುಮಾರ್ ಜಿ., ಮಾರಪ್ಪ ರೈ ಮೊದಲಾದವರು ಸ್ವಾಗತಿಸಿದರು. ಬಹಿರಂಗಸಭೆಯಲ್ಲಿ ಕೆ.ಶಂಕರ, ಡೇವಿಡ್ ಕರ್ಕಡ ಮತ್ತು ಕೆ.ಯಾದವಶೆಟ್ಟಿ ಭಾಷಣ ಮಾಡಿದರು.

- ಕೃಷ್ಣಪ್ಪ ಕೊಂಚಾಡಿ

...... ಸಂಚಾರ-ವ್ಯಾಪಾರ-ಕೆಲಸಗಳ ನಿಲುಗಡೆಗೆ

ಪುಟ 3 ರಿಂದ

ನಾಯಕರು ಕರೆ ನೀಡಿದ್ದಾರೆ.

ಹಕ್ಕೊತ್ತಾಯಗಳು

- ಪೆಟ್ರೋಲ್, ಡೀಸೆಲ್ ಹಾಗೂ ಬಸ್ ದರ ಏರಿಕೆ ವಿರುದ್ಧವಾಗಿ ; ಕೇಂದ್ರದ ಅಬಕಾರಿ ಶುಲ್ಕ ಕಡಿತಕ್ಕಾಗಿ, ಚಿಲ್ಲರೆ ವ್ಯಾಪಾರದಲ್ಲಿ, ಕೃಷಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ವಿರುದ್ಧವಾಗಿ, ಬಸ್‌ದರ ಏರಿಕೆ ವಿರುದ್ಧವಾಗಿ ಪೆಟ್ರೋಲ್ ಮೇಲೆ ರಾಜ್ಯ ಮಾರಾಟ ತೆರಿಗೆ ಕಡಿತಕ್ಕಾಗಿ, ಬೆಲೆ ಸ್ಥಿರೀಕರಣ ಸ್ಥಾಪಿಸಬೇಕು.
- **ಆಹಾರ** : ಎಲ್ಲರಿಗೂ ಪಡಿತರ ಚೀಟಿ ನೀಡುವ ಸಾರ್ವತ್ರಿಕ ಪಡಿತರ ವ್ಯವಸ್ಥೆ ಎಲ್ಲ ಬಡವರಿಗೂ ಹಳದಿ ಕಾರ್ಡ್ ನೀಡಿಕೆಗಾಗಿ, ಹಳದಿ ಕಾರ್ಡಿನಲ್ಲಿ ಸಕ್ಕರೆ, ಸೀಮೆ ಎಣ್ಣೆ ಅರ್ಧ ಬೆಲೆಗೆ ಒತ್ತಾಯಿಸಿ. ಇತರ ಜೀವನಾವಶ್ಯಕ ವಸ್ತುಗಳನ್ನು ನೀಡಬೇಕು.
- **ಭೂಮಿ** : ಅರಣ್ಯ ಭೂಮಿಯಿಂದ ಬಡವರನ್ನು ಒಕ್ಕಲೆಬ್ಬಿಸದಂತೆ; ತೀವ್ರ ಭೂಸುಧಾರಣೆ ಜಾರಿಗೆ ತರ ಬೇಕು
- **ಉದ್ಯೋಗ** : ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕದ ಎಲ್ಲೆಡೆಗೆ ಅನ್ವಯಿಸುವಂತೆ ಒತ್ತಾಯಿಸಿ. ಕೇಂದ್ರ, ರಾಜ್ಯ ಸರ್ಕಾರಗಳಲ್ಲಿ ನೇಮಕಾತಿ ನಿಷೇಧ ತೆರವು ಮಾಡಲು, ಉದ್ಯೋಗಾವಕಾಶ ಹೆಚ್ಚಿಸುವ ಕೈಗಾರಿಕಾ ಅಭಿವೃದ್ಧಿಗಾಗಿ ಒತ್ತಾಯಿಸಿ, ಅರೆಕಾಲಿಕ, ತಾತ್ಕಾಲಿಕ ಹುದ್ದೆಗಳ ಖಾಯಂಗಾಗಿ ಒತ್ತಾಯಿಸಿ,
- **ಕೃಷಿ** : ವೈಜ್ಞಾನಿಕ ಕೃಷಿ ಬೆಲೆ ನಿಗದಿಗಾಗಿ, ರೈತ ಪರ ಕೃಷಿ ನೀತಿಗಾಗಿ, ಕೃಷಿ ಸಾಲದ ಬಡ್ಡಿ ಮನ್ನಾ ಅವಧಿ ವಿಸ್ತರಣೆಗಾಗಿ, ಪಶುಸಂಗೋಪನೆ, ರೇಷ್ಮೆ ಸಾಲಗಳಿಗೂ ಬಡ್ಡಿ ಮನ್ನಾಕ್ಕಾಗಿ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿಯೂ ಬಡ್ಡಿ ಮನ್ನಾ ಮಾಡಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಹಾಗೂ ಈಗಾಗಲೇ ಸಾಲ ಪಾವತಿಸಿದವರಿಗೆ ಬಡ್ಡಿಯನ್ನು ಮರಳಿ ನೀಡಬೇಕೆಂದು ಒತ್ತಾಯಿಸಿ
- ಕಾರ್ಮಿಕರ ಮುಷ್ಕರದ ಹಕ್ಕಿಗಾಗಿ.
- **ವಿದ್ಯುತ್** : ಖಾಸಗೀಕರಣ, ವಿದ್ಯುತ್ ದರ ಏರಿಕೆ ವಿರೋಧಿಸಿ
- **ಶಿಕ್ಷಣ, ಸಿ.ಇ.ಟಿ** : ಶಿಕ್ಷಣದ ಖಾಸಗೀಕರಣ, ಶುಲ್ಕ ಹೆಚ್ಚಳ ವಿರೋಧಿಸಿ, ತಾಂತ್ರಿಕ, ವೈದ್ಯಕೀಯ ರಂಗಗಳಲ್ಲಿ ಶುಲ್ಕ, ಪ್ರವೇಶಗಳಲ್ಲಿ ಸರ್ಕಾರದ ನಿಯಂತ್ರಣ ನೀಡುವ ಕೇಂದ್ರೀಯ ಶಾಸನಕ್ಕಾಗಿ.
- **ಮೀಸಲಾತಿ** : ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಕೈಗಾರಿಕೆಗಳಲ್ಲಿ ಮೀಸಲಾತಿ ಹಾಗೂ ಸಾಮಾಜಿಕನ್ಯಾಯ ಜಾರಿಯಾಗಬೇಕೆಂದು, ಸಾರ್ವತ್ರಿಕ ಮುಷ್ಕರ ನಡೆಸುತ್ತಿರುವ ಕಾರ್ಮಿಕರ ಹಕ್ಕೊತ್ತಾಯಗಳಿಗೆ ಬೆಂಬಲಿಸಿ.

ರೈತರ, ಕೃಷಿಕೂಲಿಕಾರರ ಬೇಡಿಕೆಗಳಿಗಾಗಿ ರಸ್ತಾ ರೋಖೋ, ರೈಲ್ ರೋಖೋ ನಡೆಸುತ್ತಿರುವ ರೈತಸಂಘ, ಕೂಲಿಕಾರ ಸಂಘಗಳ ಹಕ್ಕೊತ್ತಾಯಗಳಿಗೆ ಬೆಂಬಲ ಸೂಚಿಸಿದ್ದಾರೆ.

ರಾಜ್ಯದ ಜನತೆ ಇಂತಹ ಗಂಭೀರವಾದ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಆದರೆ ಆಡಳಿತ ರೂಢ ಪಕ್ಷಗಳಾಗಲಿ, ಅಧಿಕೃತ ವಿರೋಧ ಪಕ್ಷವಾಗಲೀ, ಗುಂಪುಗಾರಿಕೆ, ವ್ಯಕ್ತಿ ಪ್ರತಿಷ್ಠೆ, ಅಧಿಕಾರದಾಹಗಳಲ್ಲಿ ಮುಳುಗಿ, ಜನರ ಮೂಲಭೂತ ಪ್ರಶ್ನೆಗಳತ್ತ ಗಮನಹರಿಸದೇ ಜನದ್ರೋಹಿ ನೀತಿಗಳ ಜಾರಿಗೆ ಪರಸ್ಪರ ಸಹಕರಿಸುತ್ತಿವೆ. ಜಾತಿ - ಕೋಮು ಭಾವನೆಗಳನ್ನು ಬಡಿದೆಬ್ಬಿಸಲು ಯತ್ನಿಸುತ್ತಿವೆ. ಈ ನೀತಿಗಳನ್ನು ಹಿಮ್ಮೆಟ್ಟಿಸಿ, ಪರ್ಯಾಯ ನೀತಿಗಳ ಅನುಷ್ಠಾನಕ್ಕಾಗಿ ಜನ ಚಳುವಳಿಯ ಮೂಲಕ ಪ್ರತಿರೋಧವನ್ನು ವ್ಯಕ್ತಪಡಿಸುತ್ತಿದ್ದೇವೆ. ಆದ್ದರಿಂದ ಇದೇ ಸೆಪ್ಟಂಬರ್ 29 ರ ಮಹಾಮುಷ್ಕರ ಹಾಗೂ ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ ಪ್ರತಿಭಟನೆಗೆ ಇಳಿಯಬೇಕೆಂದೂ ಈ ಚಳುವಳಿಯನ್ನು ಬೆಂಬಲಿಸಿ ಯಶಸ್ವಿಗೊಳಿಸಬೇಕೆಂದು ನಾಡಿನ ಜನತೆಯಲ್ಲಿ ವಿನಂತಿಸಿದ್ದಾರೆ.

ಮಾನವ ಅಭಿವೃದ್ಧಿ ವರದಿ–ಭಾರತದ ಅಧೋಗತಿ

ಮಾನವ ಅಭಿವೃದ್ಧಿ ವರದಿ-2005 ಪ್ರಕಟವಾಗಿದೆ. 'ಮಾನವ ಅಭಿವೃದ್ಧಿ'ಯಲ್ಲಿ ಭಾರತ ಅದೇ ತನ್ನ 127ನೇ ಸ್ಥಾನವನ್ನೇ 'ಕಾಪಾಡಿ'ಕೊಂಡು ಮತ್ತಷ್ಟು ಭದ್ರಪಡಿಸಿಕೊಂಡಿದೆ. ಜಗತ್ತಿನ ಮೇಲೆ ಹೇರಲಾಗಿರುವ ಸಾಮ್ರಾಜ್ಯಶಾಹಿ ಜಾಗತೀಕರಣವು, ಶ್ರೀಮಂತ ಮತ್ತು ಬಡದೇಶಗಳ ನಡುವಿನ ಅಂತರ ಹಾಗೂ ಅಸಮಾನತೆಯನ್ನು ಮತ್ತಷ್ಟು ಹಿಗ್ಗಿಸಿದೆ, ಮತ್ತು ಭಾರತ ದೇಶದಲ್ಲಿಯೂ ಜನ ಜೀವನವನ್ನು ಮತ್ತಷ್ಟು ದುರ್ಬರಗೊಳಿಸಿದೆ ಎಂಬುದಕ್ಕೆ ಬೇಕಾದ ಎಲ್ಲ ಸಾಕ್ಷಿಗಳೂ ಈ ವರದಿಯಲ್ಲಿದೆ.

ಜಾಗತೀಕರಣದ ಫಲ–ಜಾಗತಿಕ ಅಸಮಾನತೆಯ ವಿಕೃತಿ

ವಿಶ್ವದ ಮಾನವ ಅಭಿವೃದ್ಧಿ ವರದಿ-2005 ಇತ್ತೀಚೆಗೆ ಬಿಡುಗಡೆಯಾಗಿದೆ. 177 ರಾಷ್ಟ್ರಗಳ ಸಮೀಕ್ಷೆಯನ್ನು ನಡೆಸಿರುವ ಈ ವರದಿಯಲ್ಲಿ ಭಾರತ 127ನೇ ಸ್ಥಾನದಲ್ಲಿರುವುದು ಅತ್ಯಂತ ಗಮನಾರ್ಹ ವಿಷಯವಾಗಿದೆ. ಕಳೆದ ವರ್ಷ ಸಹ ಭಾರತ ಇದೇ ಸ್ಥಾನದಲ್ಲಿತ್ತು. ಬಿಜೆಪಿ ನೇತೃತ್ವದ ಎನ್‌ಡಿಎ ಆಡಳಿತಾವಧಿಯಲ್ಲಿ ಭಾರತ ಮಾನವ ಅಭಿವೃದ್ಧಿಯಲ್ಲಿ 121ನೇ ಸ್ಥಾನದಿಂದ 124ಕ್ಕೆ ದೂಡಲ್ಪಟ್ಟಿತು. ನಂತರ ಭಾರತ 127ನೇ ಸ್ಥಾನಕ್ಕೆ ಕುಸಿದಿದೆ ಎಂಬುದು ಶೋಚನೀಯ ಸಂಗತಿಯಾಗಿದೆ. ಮತ್ತೊಂದು ಗಮನಾರ್ಹ ಅಂಶವೆಂದರೆ 103 ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಾನವನ ಬಡತನದಲ್ಲಿ ಭಾರತ 58ನೇ ಸ್ಥಾನದಲ್ಲಿದೆ ಮತ್ತು ಲಿಂಗ ತಾರತಮ್ಯದಲ್ಲಿ 148 ರಾಷ್ಟ್ರಗಳ ಪೈಕಿ 98ನೇ ಸ್ಥಾನದಲ್ಲಿದೆ.

ಮಾನವ ಅಭಿವೃದ್ಧಿ ನಿರ್ವಹಣೆಯಲ್ಲಿ ಭಾರತದ ಕುಸಿತವು ಹಲವಾರು ಅಂಶಗಳ ಆಧಾರಗಳಲ್ಲಿ ಗಮನಿಸುವುದು ಪ್ರಮುಖವಾಗಿದೆ. 2004ರಲ್ಲಿ ನಡೆದ ಚುನಾವಣೆಗಳ ಫಲಿತಾಂಶವನ್ನು ರೂಪಿಸುವುದರಲ್ಲಿ ಇದು ಪ್ರಮುಖ ಪಾತ್ರ ವಹಿಸಿದೆ. ಭಾರತದ ಅಪಾರ ಸಂಖ್ಯೆಯ ಜನಸಮುದಾಯದ ಅಭಿವೃದ್ಧಿ ಮತ್ತು ಅವರ ಜೀವನ ಮಟ್ಟವನ್ನು ಉತ್ತಮ ಪಡಿಸುವ ಉದ್ದೇಶದಿಂದ ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಈ ಅಂಶವನ್ನು ಅಳವಡಿಸಲಾಗಿದೆ. ಎಡಪಕ್ಷಗಳ ಬೆಂಬಲವಿಲ್ಲದೆ ಕೇಂದ್ರ ಸರ್ಕಾರ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಿಲ್ಲದಂತಹ ರಾಜಕೀಯ ಪರಿಸ್ಥಿತಿಯನ್ನು ಇದು ಪ್ರತಿಬಿಂಬಿಸುತ್ತದೆ. ಭಾರತದ ಜನತೆ ಮತ್ತಷ್ಟು ಬಡತನದ ಪ್ರಪಾತದಲ್ಲಿ ಕುಸಿಯದೇ ಇರಬೇಕಾದಲ್ಲಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಅಳವಡಿಸಿರುವ ಜನಪರವಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಬದ್ಧವಾಗಿರಬೇಕೆಂದು ಯುಪಿಎ ಸರ್ಕಾರದ ಮೇಲೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ನಿರಂತರವಾಗಿ ಒತ್ತಡವನ್ನು ಹೇರುತ್ತಿವೆ.

ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಯೋಜನೆಯು ಪ್ರತಿ ವರ್ಷ ಜಾಗತಿಕ ಮಾನವ ಅಭಿವೃದ್ಧಿಯ ಕುರಿತು ವರದಿಯನ್ನು ತಯಾರಿಸುತ್ತದೆ. ಅದರಲ್ಲಿ ಈ ಕೆಳಕಂಡ ಕೆಲವು ಅಂಶಗಳನ್ನು ಕೂಲಂಕುಷವಾಗಿ ಗಮನಿಸಬೇಕಾಗಿದೆ. ಆರ್ಥಿಕ ಅಭಿವೃದ್ಧಿಯ ಜೊತೆ ಜೊತೆಗೆ ಮಾನವ ಅಭಿವೃದ್ಧಿ ಮುನ್ನಡೆಯುತ್ತಿಲ್ಲ ಎಂದು ವರದಿ ನಮೂದಿಸಿದೆ.

ಆರ್ಥಿಕ ಅಭಿವೃದ್ಧಿಯನ್ನು ಮಾನವ ಅಭಿವೃದ್ಧಿಗೆ ರೂಪಾಂತರಿಸಬೇಕಾದರೆ ಬೆಳವಣಿಗೆಯ ಫಲವನ್ನು ಜನತೆಗೆ ವಿತರಿಸಬೇಕು ಮತ್ತು ಈ ಪ್ರಕ್ರಿಯೆ ಜಾಗತಿಕ (ಸ್ವರೂಪದ್ದಾಗ ಬೇಕು) ಸಮಗ್ರತೆ ಹೊಂದಿರಬೇಕು, ಗ್ರಾಮೀಣ ಪ್ರದೇಶದಲ್ಲಿ ಮತ್ತು ಸಾರ್ವಜನಿಕ ಸೇವಾ ವಲಯದಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು ಇವೆಲ್ಲದಕ್ಕೂ ಮುಖ್ಯವಾಗಿ ರಾಜಕೀಯ ನಾಯಕತ್ವದ ದುರ್ಬಲ ನಿರ್ವಹಣೆಯನ್ನು ಕೊನೆಗೊಳಿಸಬೇಕು ಹಾಗೂ ಲಿಂಗ ತಾರತಮ್ಯ ತೊಡೆದು ಹಾಕಬೇಕೆಂಬುದನ್ನು ವರದಿಯಲ್ಲಿ ಒತ್ತಿಹೇಳಲಾಗಿದೆ.

ಸಾರ್ವಜನಿಕ ಮತ್ತು ಸಾಮಾಜಿಕ ಮೂಲ ಸೌಲಭ್ಯಗಳ ಅಭಿವೃದ್ಧಿಯಲ್ಲಿನ ಹೂಡಿಕೆ ಮಾತ್ರ ಧನಾತ್ಮಕ ಬೆಳವಣಿಗೆಯನ್ನು ನೀಡಬಲ್ಲದೆಂದು ಸಿಪಿಐ(ಎಂ) ಒತ್ತಿ ಹೇಳಿದೆ. ಹಲವಾರು ದಶಕಗಳಿಂದ ಭಾರತದಲ್ಲಿ 'ಮಾನವ ಅಭಿವೃದ್ಧಿ ರಹಿತ ಬೆಳವಣಿಗೆ' ಮತ್ತು 'ಲಿಂಗತಾರತಮ್ಯ'ಗಳು ಹಲವಾರು ಸವಾಲುಗಳನ್ನು ಒಡ್ಡಿವೆ. ಇವುಗಳನ್ನು ಸಮರ್ಥವಾಗಿ ನಿರ್ವಹಿಸಲು ಉನ್ನತ ಮಟ್ಟದ ರಾಜಕೀಯ ನಾಯಕತ್ವ ಬೇಕಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಇವುಗಳಲ್ಲಿನ ವಿಫಲತೆ ಮತ್ತು ಎಲ್ಲರಿಗೂ ಆರೋಗ್ಯ, ಶಿಕ್ಷಣದ ಅವಕಾಶ ದೊರಕಿಸಿಕೊಡುವಲ್ಲಿನ ವೈಫಲ್ಯವು ಜಾಗತಿಕ ಆರ್ಥಿಕತೆಯಲ್ಲಿ ಭಾರತದ ಭವಿಷ್ಯವನ್ನು ಕ್ಷೀಣಗೊಳಿಸುತ್ತದೆ ಎಂದು ವರದಿ ಹೇಳಿದೆ.

ವೇಗಗೊಂಡಿರುವ ಆದಾಯ ಬೆಳವಣಿಗೆಯು ಕ್ಷಿಪ್ರವಾಗಿ ಬಡತನವನ್ನು ಕಡಿಮೆಗೊಳಿಸುವ ದಾರಿಯತ್ತ ಭಾರತವನ್ನು ಏಕೆ ಮುಂದೊಯ್ಯುತ್ತಿಲ್ಲ ಎಂಬುದನ್ನು 2005ರ ವರದಿ ಪ್ರಶ್ನಿಸಿದೆ. 1990ರಲ್ಲಿ ಶೇ.36 ರಷ್ಟಿದ್ದ (ಆರ್ಥಿಕ) ಬಡತನ ಇಂದು ಶೇ.25-30ಕ್ಕೆ ಕುಸಿದಿದೆ ಎಂದು ವರದಿಯು ತಿಳಿಸಿದ್ದರೂ ಸಹ ಸಮೀಕ್ಷೆಯಲ್ಲಿನ ಸಮಸ್ಯೆಗಳಿಂದಾಗಿ ಈ ಅಂಕಿ ಅಂಶಗಳು ವಿವಾದಕ್ಕೆ ಸಿಲುಕಿವೆ. ಏನೇ ಆದರೂ ಒಟ್ಟಾರೆಯಾಗಿ ಬೆಳೆಯುತ್ತಿರುವ ಆರ್ಥಿಕತೆಯು ಬಡತನವನ್ನು ಕಡಿಮೆಗೊಳಿಸುವಲ್ಲಿ ವಿಫಲವಾಗಿದೆ. ಇನ್ನೂ ಹೆಚ್ಚಿನ ಆತಂಕಕಾರಿ ವಿಷಯವೆಂದರೆ ಶಿಶು ಮರಣ ನಿವಾರಿಸುವ ವಿಚಾರದಲ್ಲಿನ ಪ್ರಗತಿ ಇಳಿಮುಖ ಗೊಂಡಿರುವುದು.

ಗ್ರಾಮಾಂತರ ನಿರುದ್ಯೋಗ ಸಮಸ್ಯೆ ಅಧಿಕಗೊಂಡಿದೆ. ಕೃಷಿ ಬೆಳವಣಿಗೆ ವಾರ್ಷಿಕ ಶೇ.2ಕ್ಕಿಂತ ಕಡಿಮೆ ಇದೆ. ಕೃಷಿ ಕೂಲಿ ಸೀಮಿತ ಗೊಂಡಿದೆ, ಉದ್ಯೋಗರಹಿತ ಅಭಿವೃದ್ಧಿಯಾಗುತ್ತಿದೆ ಎಂದು ವರದಿ ಹೇಳಿದೆ. 1980 ಮತ್ತು 1990ರ ದಶಕಗಳಲ್ಲಿ ಶೇ.1ರ ರಾಷ್ಟ್ರೀಯ ಅಭಿವೃದ್ಧಿಯು ಮೂರುಪಟ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿತ್ತು. ಆದರೆ ಈಗ ಆ ಪರಿಸ್ಥಿತಿ ಇಲ್ಲ ಎಂದು ವರದಿ ತಿಳಿಸಿದೆ.

ಮಾನವ ಅಭಿವೃದ್ಧಿಯಲ್ಲಿ ಭಾರತ ಆಳವಾದ



ಸಮಸ್ಯೆಗಳನ್ನು ಎದುರಿಸುತ್ತಿದೆ. ಲಿಂಗತಾರತಮ್ಯವು ಗ್ರಾಮೀಣ ಬಡತನದೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ.ಇದು ಆರ್ಥಿಕ ಅಭಿವೃದ್ಧಿಯನ್ನು ಮಾನವ ಅಭಿವೃದ್ಧಿಗೆ ಪರಿವರ್ತಿಸುವುದಕ್ಕೆ ತೊಡಕಾಗಿದೆ. ಇದನ್ನು ಒಂದು ಉದಾಹರಣೆ ಮೂಲಕ ವಿವರಿಸುವುದಾದರೆ. 1 ರಿಂದ 5 ವರ್ಷದೊಳಗಿನ ಮಕ್ಕಳ ಸಾವಿನಲ್ಲಿ ಹೆಣ್ಣು ಮಕ್ಕಳ ಸಾವು ಶೆ. 50ರಷ್ಟು ಅಧಿಕವಾಗಿದೆ. ಪ್ರತಿ ವರ್ಷ ಭಾರತದಲ್ಲಿ ಒಂದು ಲಕ್ಷ ಮೂವತ್ತು ಸಾವಿರಕ್ಕೂ ಹೆಣ್ಣು ಮಕ್ಕಳು 'ಕಳೆದು' ಹೋಗುತ್ತಿದ್ದಾರೆ. 30 ವರ್ಷದವರೆಗಿನ ಹೆಣ್ಣು ಮಕ್ಕಳ ಸಾವು ಗಂಡು ಮಕ್ಕಳ ಸಾವಿಗಿಂತಲೂ ಅಧಿಕವಾಗಿದೆ. ಈ ಲಿಂಗತಾರತಮ್ಯವು ಗಂಡು ಮಕ್ಕಳಿಗೆ (ವಿಶೇಷವಾಗಿ ಉತ್ತರ ಭಾರತದಲ್ಲಿ) ಹೆಚ್ಚಿನ ಅವಕಾಶವನ್ನು ಕಲ್ಪಿಸಿದೆ. ಭಾರತದಲ್ಲಿ ಮೂರನೇ ಒಂದು ಭಾಗದಷ್ಟು ನವಜಾತ ಶಿಶುಗಳು ಕನಿಷ್ಠ ತೂಕಕ್ಕಿಂತಲೂ ಕಡಿಮೆ ಇರುವುದು ಗರ್ಭಿಣಿಯರ ದುರ್ಬಲ ಆರೋಗ್ಯಸ್ಥಿತಿಯನ್ನು ಬಿಂಬಿಸುತ್ತದೆ.

ಅಸಮರ್ಪಕ ಆರೋಗ್ಯ ವ್ಯವಸ್ಥೆಯು ಹಲವಾರು ಗಂಭೀರ, ಸಮಸ್ಯೆಗಳನ್ನು ಸೃಷ್ಟಿಸಿವೆ. ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ನೀಡಬೇಕೆಂಬುದನ್ನು ಜಾರಿಗೊಳಿಸಿ 15 ವರ್ಷಗಳಾದ ನಂತರವೂ ದೇಶದ ಶೇ.42 ರಷ್ಟು ಮಕ್ಕಳಿಗೆ ಮಾತ್ರ ಲಸಿಕೆ ನೀಡಲು ಸಾಧ್ಯವಾಗಿದೆ. ಅಧಿಕ ಮಕ್ಕಳು ಮರಣ ಹೊಂದುವ ರಾಜ್ಯಗಳಲ್ಲಿ ಇದನ್ನು ವಿಸ್ತರಿಸುವಲ್ಲಿ ಕೊರತೆ ಕಂಡಿದ್ದು, ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ಕೇವಲ ಶೆ.20ರಷ್ಟು ಲಸಿಕೆ ಒದಗಿಸಲಾಗಿದೆ. ಸಾಫ್ಟ್‌ವೇರ್ ಕಂಪ್ಯೂಟರ್ ತಂತ್ರಜ್ಞಾನದಲ್ಲಿ ಭಾರತ ವಿಶ್ವದ ನಾಯಕನಾಗಿದೆ. ಆದರೆ ಮಕ್ಕಳಿಗೆ ಲಸಿಕೆ ಒದಗಿಸುವುದರಲ್ಲಿ ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ.

ಈ ಸಮಸ್ಯೆಗಳನ್ನು ನಿವಾರಿಸಲು ಸಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಅತಿ ಶೀಘ್ರವಾಗಿ ಕೆಂದ್ರದ ಯುಪಿಎ ಸರ್ಕಾರ ಅನುಷ್ಠಾನಗೊಳಿಸಬೇಕು. ಉದ್ಯೋಗ ಖಾತರಿ ಯೋಜನೆ, ಆರೋಗ್ಯ ಯೋಜನೆ ಮತ್ತು ಶಿಕ್ಷಣ ಕರ ಹೆಚ್ಚಿಸಿ ಶಿಕ್ಷಣವನ್ನು ವಿಸ್ತರಿಸುವುದು, ಈ ದಿಕ್ಕಿನಲ್ಲಿ ಯುಪಿಎ ಸರ್ಕಾರ ಮುನ್ನಡೆಯುವುದನ್ನು ನಮ್ಮ ಜನತೆ ನಿರೀಕ್ಷಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಯುಪಿಎ ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳಲು ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಸರ್ಕಾರದ ಮೇಲೆ ತನ್ನ ಒತ್ತಡವನ್ನು ಹೇರುತ್ತಿವೆ.

ಸಿಪಿಐ(ಎಂ)ನ 18ನೇ ಅಖಿಲ ಭಾರತ ಸಮ್ಮೇಳನದ ವರದಿಯಲ್ಲಿ ಚರ್ಚಿಸಿದ ಹಲವಾರು ವಿಷಯಗಳನ್ನು ಜಾಗತಿಕ ಮಾನವ ಅಭಿವೃದ್ಧಿ ವರದಿ - 2005 ಒಳಗೊಂಡಿದೆ. ವಿಶ್ವದಲ್ಲಿನ ಬಡತನ ಮತ್ತು ಆರ್ಥಿಕ ಅಸಮಾನತೆ ಅಧಿಕಗೊಳ್ಳುತ್ತಿದೆ. ಸಾಮ್ರಾಜ್ಯಶಾಹಿಗಳ ಜಾಗತೀಕರಣ ಅಸ್ಥಿರತೆಯಿಂದ ಕೂಡಿದೆ. ಇದು ಜಾಗತಿಕ ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿದೆ, ಅಪಾರ ಜನಸಂಖ್ಯೆಯ ಜನತೆಯ ಕೊಳ್ಳುವ ಶಕ್ತಿಯನ್ನು ಕ್ಷೀಣಿಸಿದೆ. ಇದು ಸ್ವತಃ ಬಂಡವಾಳಶಾಹಿ ಬೆಳವಣಿಗೆಗೆ ಹೊಡೆತ ನೀಡಿದೆ ಎಂಬುದನ್ನು 2005ರ ವರದಿ ಹೊರಗೆಡಹಿದೆ. ಅಂಕಿ ಅಂಶಗಳು ಲಭಿಸಿರುವ 73 ದೇಶಗಳಲ್ಲಿ 53 ದೇಶಗಳು ಈ ಅಸಮಾನತೆಯಿಂದ ಬಳಲುತ್ತಿವೆ. 1 ಶತಕೋಟಿ ಜನತೆ ಕುಡಿಯುವ ನೀರಿನ ಕೊರತೆ ಅನುಭವಿಸುತ್ತಿದ್ದಾರೆ. 1 ಶತಕೋಟಿ ಜನತೆ ದಿನಕ್ಕೆ ಕೇವಲ ಸು 50. ರೂ. ಆದಾಯದಲ್ಲಿ ಬದುಕುತ್ತಿದ್ದಾರೆ. 2.6 ಶತಕೋಟಿ ಜನತೆ ಉತ್ತಮ ಶೌಚಾಲಯ ಮುಂತಾದ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. 460 ದಶಲಕ್ಷ ಜನಸಂಖ್ಯೆಯನ್ನು ಹೊಂದಿರುವ 18ದೇಶಗಳು 2003ರಲ್ಲಿ ಮಾನವ ಅಭಿವೃದ್ಧಿಯಲ್ಲಿ ಕೆಳಗಿದ್ದು ಇದು 1990ಕ್ಕಿಂತಲೂ ಅಧಿಕವಾಗಿದೆ. 900 ದಶಲಕ್ಷ ಜನಸಂಖ್ಯೆ ಹೊಂದಿರುವ 50ಕ್ಕಿಂತಲೂ ಅಧಿಕ ದೇಶಗಳು ಸಹಸ್ರಮಾನದ ಗುರಿಯಿಂದ ಹಿಂದೆ ಬಿದ್ದಿವೆ. ವಿಶ್ವದ 20 ಶ್ರೀಮಂತ ದೇಶಗಳು ಜಗತ್ತಿನ ಶೇ.75 ಆದಾಯವನ್ನು ಅನುಭವಿಸುತ್ತಿವೆ. ಅತ್ಯಂತ ಬಡತನದಿಂದ ಕೂಡಿರುವ ಶೇ.20ರಷ್ಟು ದೇಶಗಳು ಜಗತ್ತಿನ ಕೇವಲ ಶೇ.1.5 ಆದಾಯವನ್ನು ಮಾತ್ರ ಪಡೆಯುತ್ತಿವೆ. ವಿಶ್ವದ 500 ಮಂದಿ ಶ್ರೀಮಂತರು 416 ದಶಲಕ್ಷ ಜನತೆಗಿಂತಲೂ ಅಧಿಕ ಆದಾಯವನ್ನು ಗಳಿಸುತ್ತಿದ್ದಾರೆ. ಶ್ರೀಮಂತ ರಾಷ್ಟ್ರಗಳು ಬಡರಾಷ್ಟ್ರಗಳಿಗೆ ನೀಡುತ್ತಿರುವ ಷರತ್ತು ಬದ್ಧ ನೆರವು (ಯೋಜನೆಗಳಿಗೆ ಅಗತ್ಯವಾದ ಉಪಕರಣ-ಸಾಮಗ್ರಿ ಇತ್ಯಾದಿಗಳನ್ನು ತಮ್ಮ ದೇಶದಿಂದಲೇ ಕೊಳ್ಳಬೇಕೆಂಬ ಷರತ್ತಿನ ಆಧಾರದಲ್ಲಿ ನೀಡುವ ನೆರವು) ಬಡ ರಾಷ್ಟ್ರಗಳಿಗೆ ಶ್ರೀಮಂತ ರಾಷ್ಟ್ರಗಳು ನೀಡುವ ಒಟ್ಟು ನೆರವಿಗಿಂತಲೂ ಶೇ.8 ರಷ್ಟು ಹೆಚ್ಚು ಅಂದರೆ ಸುಮಾರು 13 ಸಾವಿರಕೋಟಿ ರೂಪಾಯಿಯಷ್ಟು ನಷ್ಟ ಉಂಟು ಮಾಡುತ್ತಿದೆ.

'ಬಡತನ ನಿರ್ಮೂಲನೆ'ಗೆ ಅಂತರರಾಷ್ಟ್ರೀಯ ನೆರವು ನೀಡುವ ಅಭಿವೃದ್ಧಿ ಹೊಂದಿದ ದೇಶಗಳ 'ಉಪಕಾರ'ವೆಂಬ ಮಿಥ್ಯೆಯನ್ನು ಈ ಕೆಳಗಿನ ಅಂಶವು ನಗ್ನಗೊಳಿಸಿದೆ.

ಶ್ರೀಮಂತ ರಾಷ್ಟ್ರಗಳ 'ಒಟ್ಟು ರಾಷ್ಟ್ರೀಯ ಆದಾಯ' (ಜಿ:ಡಿ.ಪಿ.)ಯ ಶೇ 0.7 ರಷ್ಟು ಹಣವನ್ನು ನೆರವು ನೀಡಲು ಒತ್ತಾಯಿಸಲಾಗುತ್ತಿದ್ದು ಇದರ ಮೊತ್ತ 2003 ಮತ್ತು 2004ರಲ್ಲಿ ಈ ದೇಶಗಳು ಮಿಲಿಟರಿ ಅಭಿವೃದ್ಧಿಗೆ ಏರಿಸಿದ ಸುಮಾರು 5 ಲಕ್ಷ 90 ಸಾವಿರ ಕೋಟಿ ರೂ.ಗಳಿಗಿಂತಲೂ ಕಡಿಮೆಯಾಗಿದೆ.

ಈ ಹಿಂದಿನ ಡಬ್ಲ್ಯು.ಟಿ.ಓ. ಮಾತುಕತೆಗಳು-ಒಪ್ಪಂದಗಳು ಬಡದೇಶಗಳ ಹಿತಾಸಕ್ತಿಗಳಿಗೆ ಮಾರಕವಾಗಿವೆ ಮತ್ತು ಅವು ಶ್ರೀಮಂತ ದೇಶಗಳ ಪರವಾಗಿವೆ ಎಂಬುದು ಸಾಬೀತಾಗಿದೆ. 'ತರ್ಕಹೀನ -ದುರಾಗ್ರಹದ ತೆರಿಗೆ' ಎಂದು ಈ ವರದಿಯು ಕರೆಯುವ ಶ್ರೀಮಂತ ದೇಶಗಳ ತೆರಿಗೆ ನೀತಿಯಿಂದಾಗಿ ಜಗತ್ತಿನ ಅತ್ಯಂತ ಬಡರಾಷ್ಟ್ರಗಳು ಶ್ರೀಮಂತ ರಾಷ್ಟ್ರಗಳಲ್ಲಿ ತೆರಬೇಕಾಗಿರುವ ಅತ್ಯಂತ ಹೆಚ್ಚು ತೆರಿಗೆ ದರಗಳ ಬಗೆಗೆ ವರದಿಯು ಜರೆದಿದೆ ಮತ್ತು ಮುಂದುವರಿದ ಕೈಗಾರಿಕಾ ದೇಶಗಳಲ್ಲಿ ಕೃಷಿಗೆ ನೀಡಲಾಗುವ ಸಹಾಯಧನ ಹಾಗೂ ಆ ದೇಶಗಳ 'ರಕ್ಷಣಾತ್ಮಕ' ನೀತಿಯು ಬಡವರ ಮೇಲೆ ಬೀರುವ ಪರಿಣಾಮಗಳ ಬಗೆಗೆ ಸಹ ಪರಿಶೀಲಿಸಲಾಗಿದೆ. ಈ ದಾನಿ ರಾಷ್ಟ್ರಗಳು ಒಂದು ದಿನಕ್ಕೆ ಸುಮಾರು ಐದುಸಾವಿರ ಕೋಟಿ ರೂಪಾಯಿ ಕೃಷಿ ಸಹಾಯಧನ ನೀಡುವ ಮೂಲಕ ಜಗತ್ತಿನ ಬಡ ರೈತರನ್ನು ಸದೆ ಬಡಿಯುತ್ತವೆ ಎಂದು ವರದಿ ಹೇಳಿದೆ.

ಶ್ರೀಮಂತ ರಾಷ್ಟ್ರಗಳ ಈ ಕೃಷಿ ಸಹಾಯಧನ ನೀತಿ ಮತ್ತು 'ರಕ್ಷಣಾತ್ಮಕ' ನೀತಿಯಿಂದಾಗಿ ಒಟ್ಟಾರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ವರ್ಷಕ್ಕೆ ಸುಮಾರು 3 ಲಕ್ಷ 60 ಸಾವಿರ ಕೋಟಿ ರೂಪಾಯಿಯಷ್ಟು (ಅಂದರೆ 2003ರ ವರ್ಷದಲ್ಲಿ ಈ ದೇಶಗಳು ನೀಡಿರುವ ಒಟ್ಟು ಆರ್ಥಿಕ ನೆರವಿಗೆ ಸರಿಸಮದಷ್ಟು) ಅಪಾರ ಪ್ರಮಾಣದ ಹಾನಿಯಾಗಿದೆ ಎಂದು ವರದಿ ಅಂದಾಜು ಮಾಡಿದೆ.

2005ರ ಮಾನವ ಅಭಿವೃದ್ಧಿ ವರದಿಯು ಈ ಸಮ್ರಾಜ್ಯಶಾಹಿ ಜಾಗತೀಕರಣ ಯುಗದಲ್ಲಿ ಜಗತ್ತಿನ ವಿಶಾಲ ಜನ ಸಮುದಾಯದ ಬಹುಸಂಖ್ಯಾತರ ಸ್ಥಿತಿಯು ದಾರುಣವಾಗುತ್ತಿರುವುದು ಹಾಗೂ ಬೆಳೆಯುತ್ತಿರುವ ಗಂಭೀರ ಅಸಮಾನತೆಯನ್ನು ಅನಾವರಣಗೊಳಿಸಿದೆ. ಈ ಮಾನವ ಅಭಿವೃದ್ಧಿ ವರದಿಯು ಬಡತನ ನಿವಾರಿಸಿ ಜನರ ಜೀವನ ಮಟ್ಟವನ್ನು ಸುಧಾರಿಸುವ ಆಳವಾದ ರಾಜಕೀಯ ಇಚ್ಛಾಶಕ್ತಿ ಮತ್ತು ಬದ್ಧತೆಯ ಬಗೆಗೆ ಮಾತನಾಡಿದರೂ ಸಹ ಇಂತಹ ರಾಜಕೀಯ ಇಚ್ಛಾಶಕ್ತಿಯು ಬಂಡವಾಳಶಾಹಿ ಅಭಿವೃದ್ಧಿ ದೃಷ್ಟಿಕೋನದೊಂದಿಗೆ ನೇರವಾದ ವೈರುಧ್ಯತೆ ಹೊಂದಿದೆ. ಸಿಪಿಐ(ಎಂ) ಪಕ್ಷದ ಮಹಾಧಿವೇಶನ ಘೋಷಿಸಿರುವಂತೆ ಈ ಶೋಷಣಾತ್ಮಕ ಬಂಡವಾಳಶಾಹಿ ವ್ಯವಸ್ಥೆಗೆ ಸಮಾಜವಾದವೊಂದೇ ಪರ್ಯಾಯವಾದುದಾಗಿದೆ. ಈ ಮಾನವ ಅಭಿವೃದ್ಧಿ ವರದಿಯಲ್ಲಿರುವ ಮಾಹಿತಿ ಸಂಪತ್ತು ಅಕ್ಷರಶಃ ಇಂದಿನ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಮೇಲಿನ ದೋಷಾರೋಪಣಾ ಪಟ್ಟಿಯೇ ಆಗಿದೆ.

'ಗುತ್ತಿಗೆ ಕೃಷಿ' ಎಂಬ ಬಿಸಿಲ್ಗುದುರೆ

'ಕೃಷಿ ಹುಟ್ಟುವಳಿ ಮಾರಾಟ (ನಿಯಂತ್ರಣ ಹಾಗೂ ಅಭಿವೃದ್ಧಿ) ಕಾಯ್ದೆ 2003'ಕ್ಕೆ ತಿದ್ದುಪಡಿ ತರುವ ಮೂಲಕ ದೇಶದಲ್ಲಿ 'ಒಪ್ಪಂದದ ಕೃಷಿ'ಗೆ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅವಕಾಶ ಮಾಡಲು ಹೊರಟಿತ್ತು. ಇದೇ ನೀತಿಯನ್ನು ಮುಂದುವರಿಸುತ್ತಿರುವ ಕೇಂದ್ರ ಯುಪಿಎ ಸರ್ಕಾರ, ರಾಜ್ಯ ಸರ್ಕಾರಗಳೂ ಸಹ ಕೇಂದ್ರದ ನೀತಿಗೆ ಪೂರಕವಾಗಿ ಕಾನೂನು ತಿದ್ದುಪಡಿ ಮಾಡಬೇಕೆಂದು ಒತ್ತಾಯಿಸುತ್ತಿವೆ. ತಕ್ಕ ಮಟ್ಟಿನ ಆಹಾರ ಸ್ವಾವಲಂಬನೆ ಸಾಧಿಸಿರುವ ಭಾರತ ಮತ್ತು ಭಾರತದಂತಹ ದೇಶಗಳ ಕೃಷಿ ವ್ಯವಸ್ಥೆಯ ಬೆನ್ನು ಮೂಳೆ ಮುರಿದು ಆಹಾರಕ್ಕಾಗಿ ಅವು ಅಮೇರಿಕಾ ಮುಂತಾದ ಸಾಮ್ರಾಜ್ಯಶಾಹಿ ದೇಶಗಳ ಹಂಗಿಗೆ ಒಳಗಾಗುವಂತೆ ಮಾಡಬೇಕೆಂಬ ದೂರಗಾಮಿ ಉದ್ದೇಶ ಸಾಮ್ರಾಜ್ಯಶಾಹಿಗಳಾದ್ದಾಗಿದೆ. ಈ ಬದಲಾವಣೆಯಿಂದಾಗಿ ಭಾರತದ ಕೃಷಿ ವ್ಯವಸ್ಥೆಯ ಆದ್ಯತೆಯು ನಮ್ಮ ದೇಶದ ಜನಗಳ ಅಗತ್ಯವನ್ನು ಆಧರಿಸುವ ಬದಲು ಬಹುರಾಷ್ಟ್ರೀಯ ಕಂಪನಿಗಳ ಲಾಭಕೋರ ಹವಣಿಕೆಗಳನ್ನು ಆಧರಿಸುವಂತಾಗುವುದು ಅತ್ಯಂತ ಗಂಭೀರವಾದ ಅಪಾಯವಾಗಿದೆ.

ಬಿ.ಎಸ್.ಸೊಪ್ಪಿನ

ನವ ಸಾಮ್ರಾಜ್ಯಶಾಹಿಯು ಅಭಿವೃದ್ಧಿಶೀಲ ದೇಶಗಳನ್ನು ಶೋಷಿಸಲು ಅನುಸರಿಸಿದ ತಂತ್ರಗಳ ಭಾಗವಾಗಿ ರೂಪುಗೊಂಡದ್ದೆ ಉದಾರೀಕರಣ ಮತ್ತು ಜಾಗತೀಕರಣ ನೀತಿಗಳು. ಈ ನೀತಿಗಳನ್ನು ಮೈಗೂಡಿಸಿಕೊಂಡು ಅಸ್ತಿತ್ವಕ್ಕೆ ಬಂದ ಸಂಸ್ಥೆಯೇ ಜಾಗತಿಕ ಮಾರಾಟ ಸಂಸ್ಥೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಆ ದೇಶಗಳ ಬಹುರಾಷ್ಟ್ರೀಯ ಕಂಪನಿಗಳು ಅಭಿವೃದ್ಧಿಶೀಲ ದೇಶಗಳಲ್ಲಿ ಬಂಡವಾಳ ತೊಡಗಿಸಲು ಸ್ಪರ್ಧೆಯೊಡ್ಡಿವೆ. ಇನ್ನೊಂದೆಡೆಗೆ ಅಭಿವೃದ್ಧಿಶೀಲ ದೇಶಗಳ ಬಯಕೆ - ತಮ್ಮ ದೇಶಕ್ಕೆ ವಿದೇಶಿ ಬಂಡವಾಳ ಹರಿದು ಬರಲಿ, ಸ್ಥಳೀಯರಿಗೆ ಒಂದಿಷ್ಟು ಉದ್ಯೋಗ ಲಭಿಸಲಿ ಎಂಬುದಾಗಿದೆ. ಹೀಗಾಗಿ ಈ ದೇಶಗಳು ಬಹುರಾಷ್ಟ್ರೀಯ ಕಂಪನಿಗಳನ್ನು ಸ್ವಾಗತಿಸುತ್ತಿವೆ. ಭಾರತ ಇದಕ್ಕೆ ಹೊರತಾಗಿಲ್ಲ, ಭಾರತದ ಕೈಗಾರಿಕಾ ವಲಯದಲ್ಲಷ್ಟೆ ಬಹುರಾಷ್ಟ್ರೀಯ ಕಂಪನಿಗಳು ಬಂಡವಾಳ ತೊಡಗಿಸಿವೆ. ಈಗ ಖಾಸಗೀಕರಣ ನಮ್ಮ ಆರ್ಥಿಕತೆಯ ಜೀವಾಳವಾದಂತಿದೆ. ಇದಕ್ಕಾಗಿ ನಮ್ಮ ದೇಶದ ಕಾನೂನುಗಳು ತಿದ್ದುಪಡಿಗೆ ಒಳಪಟ್ಟಿವೆ. ಈ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಈಗ ಭಾರತದ ಕೃಷಿ ಹಾಗೂ ಕೃಷಿ ಮಾರುಕಟ್ಟೆಯನ್ನು ಪ್ರವೇಶಿಸಲು ತವಕಿಸುತ್ತಿವೆ. ಈ ಕಂಪನಿಗಳಿಗೆ ಅವಕಾಶ ಕಲ್ಪಿಸುವ ದೃಷ್ಟಿಯಿಂದ ನಮ್ಮ ಎಪಿಎಂಸಿ ಕಾನೂನು ತಿದ್ದುಪಡಿಗೆ ಒಳಗಾಗಬೇಕಿದೆ!

ಎಪಿಎಂಸಿ ಕಾನೂನಿನ ತಿದ್ದುಪಡಿಯ ಅಗತ್ಯತೆ ಏನು? ಸದ್ಯದ ಕೃಷಿ ಮಾರುಕಟ್ಟೆ ವ್ಯವಸ್ಥೆಯಲ್ಲೂ ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರವೇಶವಿಲ್ಲ. ನಮ್ಮ ಎಪಿಎಂಸಿಗಳು ಸ್ವಲ್ಪ ಮಟ್ಟಿಗೆ ತೂಕ-ಅಳತೆಗಳಲ್ಲಿ ಮೋಸ ಆಗದಂತೆ ನಿಗಾ ವಹಿಸುತ್ತಿವೆ ಮತ್ತು ರೈತರ ಉತ್ಪನ್ನಗಳಿಗೆ ಒಂದಿಷ್ಟು ನ್ಯಾಯವಾದ ಬೆಲೆ ಸಿಗುವಂತೆ ನೋಡಿಕೊಳ್ಳುತ್ತವೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಪ್ರವೇಶಿಸಲು ಅವಕಾಶ ಮಾಡಿಕೊಡುವ ಉದ್ದೇಶದಿಂದ ಎಪಿಎಂಸಿ ಕಾನೂನುಗಳು ತಿದ್ದುಪಡಿಗೆ ಒಳಗಾಗುತ್ತಿವೆ. ಈಗಾಗಲೇ ಕೇಂದ್ರ ಸರಕಾರವು ಕೃಷಿ ಹುಟ್ಟುವಳಿ ಮಾರಾಟ (ನಿಯಂತ್ರಣ ಹಾಗೂ ಅಭಿವೃದ್ಧಿ) ಕಾಯ್ದೆ 2003ರ ತಿದ್ದುಪಡಿ ಶಾಸನವನ್ನು ಅಂಗೀಕರಿಸಿದೆ. ಕೇಂದ್ರದಲ್ಲಿ ಎನ್‌ಡಿಎ ಸರಕಾರವಿದ್ದಾಗ ಅಂಗೀಕರಿಸಲ್ಪಟ್ಟ ತಿದ್ದುಪಡಿ ಶಾಸನವನ್ನು ಅನುಷ್ಠಾನಗೊಳಿಸಲು ಈಗಿನ ಯುಪಿಎ ಸರಕಾರ ಕ್ರಮಕೈಗೊಳ್ಳುತ್ತಲಿದೆ. ತಮ್ಮ ಎಪಿಎಂಸಿ ಕಾನೂನುಗಳನ್ನು ತಿದ್ದುಪಡಿ ಮಾಡಲು ಕೇಂದ್ರ ಸರಕಾರ ರಾಜ್ಯ ಸರ್ಕಾರಗಳನ್ನು ಒತ್ತಾಯಿಸುತ್ತಿದೆ. ಕರ್ನಾಟಕ ಸರಕಾರವು ಇಂಥ ಒಂದು ತಿದ್ದುಪಡಿ ಶಾಸನ ಜಾರಿಗೊಳಿಸಲು ಉತ್ಸುಕವಾಗಿವೆ.


ಪ್ರಸ್ತುತ ತಿದ್ದುಪಡಿ ಶಾಸನದಲ್ಲಿ ಏನಿದೆ? ಎಪಿಎಂಸಿ ತಿದ್ದುಪಡಿ ಶಾಸನವು ಇಂದಿನ ಮಾರುಕಟ್ಟೆ ಸ್ವರೂಪವನ್ನು ವಿದೇಶಿ ಕಂಪನಿಗಳ ಆಶಯಗಳಂತೆ ಮಾರ್ಪಡಿಸಹೊರಟಿದೆ. 2003ರ ಮಾದರಿಯ ಕಾನೂನು ಖಾಸಗಿ ಮಾರುಕಟ್ಟೆ ರಚನೆ, ಎಪಿಎಂಸಿ ವ್ಯಾಪ್ತಿಯು ಹೊರಗಡೆ ರೈತರ ಉತ್ಪನ್ನಗಳ ಮಾರಾಟಕ್ಕೆ ಅವಕಾಶ, ನೇರ ಮಾರುಕಟ್ಟೆಗಳ ಸ್ಥಾಪನೆ, ವಿಶೇಷ ಪದಾರ್ಥಗಳಿಗೆ ವಿಶೇಷ ಮಾರುಕಟ್ಟೆಗಳು ಮುಂತಾದ ಸೌಲಭ್ಯಗಳನ್ನು ಕಲ್ಪಿಸಿದೆ. ಈ ಶಾಸನದಲ್ಲಿ ಇರುವ ಇನ್ನೊಂದು ಪ್ರಮುಖವಾದ ಅಂಶವೆಂದರೆ ಇದು "ಒಪ್ಪಂದದ ಬೇಸಾಯ"(ಗುತ್ತಿಗೆ ಕೃಷಿ)ಕ್ಕೆ ಅವಕಾಶ ಮಾಡಿಕೊಟ್ಟಿದೆ.

ಒಪ್ಪಂದದ ಕೃಷಿಯೆಂದರೇನು?

ಉದಾರೀಕರಣ ಹಾಗೂ ಜಾಗತೀಕರಣದ ಸಂದರ್ಭದಲ್ಲಿ ಕೃಷಿ ರಂಗದಲ್ಲಿ ಒಪ್ಪಂದದ ಕೃಷಿ ಎನ್ನುವ ಪ್ರಶ್ನೆ ತೀವ್ರಗೊಳ್ಳುತ್ತಿದೆ. ಬಹಳ ಸರಳವಾಗಿ ಹೇಳುವುದಾದರೆ ರೈತರ ಮತ್ತು ಕೃಷಿ ಕಂಪನಿ ನಡುವೆ ಒಂದು ಒಪ್ಪಂದ ಏರ್ಪಡುತ್ತದೆ. ಒಪ್ಪಂದ ಪ್ರಕಾರ ರೈತರು ಯಾವ ಹುಟ್ಟುವಳಿಯನ್ನು ಬೆಳೆದು ಕಂಪನಿಗೆ ಪೂರೈಸಬೇಕು ಎಂಬುದು ನಿರ್ಧಾರವಾಗುತ್ತದೆ. ಒಪ್ಪಂದದಲ್ಲಿ ಹುಟ್ಟುವಳಿಯ ಬೆಲೆ ಪ್ರಮಾಣ ಗುಣಮಟ್ಟ ಹಾಗು ಪೂರೈಸುವ ಸಮಯಗಳು ನಿಗದಿಯಾಗುತ್ತವೆ. ಉದಾ: ಬಟಾಟೆ(ಆಲೂಗಡ್ಡೆ) ಚಿಪ್ಸ್ ತಯಾರಿಸುವ ಕಂಪನಿಯೊಂದು ರೈತರೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತದೆ ಎಂದಿಟ್ಟುಕೊಳ್ಳೋಣ. ಆಗ ಒಪ್ಪಂದದ ರೀತ್ಯಾ ರೈತರು ಬಟಾಟೆ ಬೆಳೆದು ನಿಗದಿತ ಸಮಯದಲ್ಲಿ, ನಿಗದಿತ ಗುಣಮಟ್ಟದ ಬಟಾಟೆಯನ್ನು ಸರಬರಾಜು ಮಾಡಬೇಕಾಗುತ್ತದೆ. ಬೆಲೆಯೂ ಪೂರ್ವದಲ್ಲೆ ನಿಗದಿಯಾಗಿರುತ್ತದೆ. ಈ ಒಪ್ಪಂದದ ನಾಲ್ಕು ಷರತ್ತುಗಳಾದ, ಬೆಲೆ, ಗುಣಮಟ್ಟ, ಪ್ರಮಾಣ ಹಾಗೂ ಸಮಯ ಇವುಗಳಲ್ಲಿ ಏನೇ ಏರುಪೇರು ಗಳಾದಲ್ಲಿ ಸಮಸ್ಯೆ ಉದ್ಭವಿಸುವುದು ನಿಶ್ಚಿತ, ಒಪ್ಪಂದದ ಕೃಷಿ ಎಂದರೆ ಕೃಷಿಯು ವಾಣಿಜ್ಯೀಕರಣ ಅಥವಾ ಕೈಗಾರಿಕೀಕರಣ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದು ಆಧುನಿಕ ಮತ್ತು ವೈಜ್ಞಾನಿಕ ಕೃಷಿಯ ಎಲ್ಲ ಆಯಾಮಗಳನ್ನು ಮೈಗೂಡಿಸಿಕೊಂಡಿರುತ್ತದೆ.

ಒಪ್ಪಂದ ಕೃಷಿ ಪರಿಕಲ್ಪನೆ ಭಾರತಕ್ಕೆ ಹೊಸದಿರಬಹುದು. ಆದರೆ ಮುಂದುವರಿದ ದೇಶಗಳಲ್ಲಿ 50-60ರ ದಶಕಗಳಲ್ಲೆ ರೂಢಿಯಲ್ಲಿದೆ. 80ರ ದಶಕದ ಸುಮಾರಿಗೆ ಅಮೇರಿಕದ 1/3 ರಷ್ಟು ಕೃಷಿ ಒಪ್ಪಂದದ ಬೇಸಾಯಕ್ಕೆ ಒಳಪಟ್ಟಿತ್ತು. ಕೃಷಿ ಕಂಪನಿಗಳು ಒಂದೊಂದು ದೇಶದಲ್ಲಿ ಒಂದೊಂದು ಪದಾರ್ಥಗಳೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತವೆ. ಆ ನೆಲದಲ್ಲಿ ಯಾವ ಬೆಳೆ ಧಾರಾಳವಾಗಿ ಬೆಳೆಯುತ್ತದೆ ಎನ್ನುವುದನ್ನು ಇದು ಅವಲಂಬಿಸಿರುತ್ತದೆ. ಕೀನ್ಯಾದಲ್ಲಿ 'ಚಹ', ಥೈಲ್ಯಾಂಡಿನಲ್ಲಿ 'ತಂಬಾಕು ಹಾಗೂ ಪಶು ಸಂಗೋಪಾನೆ', ಮಲೇಶಿಯಾದಲ್ಲಿ 'ರಬ್ಬರ್' ಉತ್ಪಾದಕರೊಂದಿಗೆ ಒಪ್ಪಂದವಾಗಿವೆ. ಭಾರತದಲ್ಲಿ ಬೀಜ ಉತ್ಪಾದನೆಗೆ ಒಪ್ಪಂದಗಳಾಗಿವೆ.

ಒಪ್ಪಂದದ ಕೃಷಿಯಲ್ಲಿ ಕೆಲವು ಸಕಾರಾತ್ಮಕ ಅಂಶಗಳು ಇವೆ. ರೈತರ ಉತ್ಪಾದನೆ ಹೆಚ್ಚುತ್ತದೆ ಮತ್ತು ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಹೆಚ್ಚಿನ ಸಂಖ್ಯೆ ಜನರಿಗೆ ಅದರಲ್ಲೂ ಮಹಿಳೆಯರಿಗೆ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತವೆ. ಆದರೆ ಈ ಅನುಕೂಲತೆಗಳು ನಿರಂತರವೆ? ಎಂಬುದು ಗಂಭೀರ ಪ್ರಶ್ನೆ. ಅನುಕೂಲತೆಗಳಿಗಿಂತ ಅನಾನುಕೂಲತೆಗಳೇ ಹೆಚ್ಚು ಎಂಬುದು ಅನುಭವಿಕ ಮಾತು. ಒಪ್ಪಂದ ಯಾವಾಗಲೂ ಏಕಮುಖವಾಗಿರುತ್ತದೆ. ಅದು ಬಲಾಢ್ಯ ಕಂಪನಿಯ ಪರವಾಗಿರುತ್ತದೆ.



ಆಫ್ರಿಕಾ ರೈತರು ಅನುಭವಿಸುವ ನೋವು, ಎದುರಿಸುವ ಸಮಸ್ಯೆಗಳು ಒಪ್ಪಂದ ಕೃಷಿಯ ಇನ್ನೊಂದು ಕರಾಳ ಮುಖವನ್ನು ಪರಿಚಯಿಸುತ್ತವೆ. ಕಂಪನಿ ಅಧಿಕಾರಿಗಳು ತೋರುತ್ತಿರುವ ನಿರ್ಲಕ್ಷ್ಯ, ನಿಷ್ಕಾಳಜಿ, ಅಧಿಕಾರಿಗಳಿಂದ ಲಂಚ, ತೂಕ- ಅಳತೆಗಳಲ್ಲಿ ಮೋಸ ರೈತರನ್ನು ಕಂಗೆಡಿಸಿವೆ. ಎಷ್ಟೋ ಸಲ ರೈತರ ಹುಟ್ಟುವಳಿಗಳಲ್ಲಿ ದೋಷ ಹುಡುಕಿ, ಖರೀದಿಯನ್ನು ನಿರಾಕರಿಸಿದ ಉದಾಹರಣೆಗಳೂ ಇವೆ.

ರೈತರಿಗೆ ಖರೀದಿದಾರರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರದು: ಒಪ್ಪಂದದೊಂದಿಗೆ ಈ ಆಯ್ಕೆ ಹಕ್ಕು ನಷ್ಟವಾಗುತ್ತದೆ. ಇದರಿಂದ ರೈತರು ತಮ್ಮ ಫಸಲಿಗೆ ಒಳ್ಳೆ ಧಾರಣೆಯಿಂದ ವಂಚಿತರಾಗುವುದು ಸಹಜ.

ಈ ಪದ್ಧತಿಯ ಕೃಷಿಯಿಂದ ರೈತರು ಇನ್ನೊಂದು ಬಗೆಯ ಸಮಸ್ಯೆಯನ್ನು ಎದುರಿಸುತ್ತಾರೆ. ಒಪ್ಪಂದದ ಕೃಷಿಯೆಂದರೆ ಬಂಡವಾಳವು ಕೃಷಿ ಮತ್ತು ಗ್ರಾಮೀಣ ಉತ್ಪಾದನೆಯಲ್ಲಿ ಧಾರಾಳವಾಗಿ ಮುನ್ನುಗ್ಗುವುದು ಎಂದೆ ಅರ್ಥ. ಈ ವ್ಯವಸ್ಥೆ ಪ್ರಭುತ್ವದ ಮಧ್ಯಪ್ರವೇಶಿಸುವಿಕೆಯನ್ನು ಒಪ್ಪುವುದಿಲ್ಲ. ಕಂಪನಿಗಳು ತಾವು ಹಾಕಿದ ಬಂಡವಾಳಕ್ಕೆ ಹೆಚ್ಚು ಪಡೆಯಲು ಪ್ರಭುತ್ವವನ್ನು ತನ್ನ ಪರವಾಗಿಸಿಕೊಂಡು ರೈತರನ್ನು ಶೋಷಿಸುತ್ತವೆ. ಒಪ್ಪಂದದ ಉತ್ಪಾದನೆ ರೈತರಿಗೆ ಕೆಲವು ಪ್ರಯೋಜನಗಳನ್ನುಂಟು ಮಾಡುತ್ತದೆಯಾದರೂ, ಉತ್ಪಾದನೆಯಲ್ಲಿ ನಿಲುಗಡೆ(ಸ್ಟ್ಯಾಗ್‌ನೇಟ್)ಯಾಗಿ, ಉತ್ಪಾದನಾ ವೆಚ್ಚ ಏರಿದರೆ ಮತ್ತು ತೆರೆದ ಮಾರುಕಟ್ಟೆಯಲ್ಲಿ ಪದಾರ್ಥಗಳ ಪ್ರಮಾಣ ಹೆಚ್ಚಾದರೆ ಏನಾಗುತ್ತದೆ? ಈ ಪ್ರಶ್ನೆಗೆ ಉತ್ತರ ಸಂದಿಗ್ಧ.

ಆಹಾರ ಸ್ವಾವಲಂಬನೆಗೆ ಮಾರಕ

ಸಾಮಾನ್ಯವಾಗಿ ಒಪ್ಪಂದವು ಒಂದೆ ಬೆಳೆ ಬೆಳೆಯುವುದನ್ನು ಪ್ರೋತ್ಸಾಹಿಸುತ್ತದೆ. ಸಹಜವಾಗಿ ರೈತರು ಮತ್ತು ಕೃಷಿ ಕೂಲಿಕಾರರು ಒಂದೆ ಬೆಳೆ ಬೆಳೆಯುವದಕ್ಕೆ ಅದರಲ್ಲಿಯೂ ವಾಣಿಜ್ಯ ಬೆಳೆಗಳಿಗೆ ಸೀಮಿತಗೊಳ್ಳುವದರಿಂದ ಅವರಲ್ಲಿಯ ಕೌಶಲಗಳು ನಶಿಸುತ್ತವೆ. ಕಂಪನಿಯ ದೃಷ್ಟಿಯಿಂದ ಒಂದೆ ಬೆಳೆ ಸರಿ ಯಾಕೆಂದರೆ ಅವರ ಅಗತ್ಯತೆಗಳನ್ನು ಇದು ಪೂರೈಸುತ್ತವೆ. ಮತ್ತು ರೈತರ ಮೇಲೆ ಒಳ್ಳೆ ನಿಯಂತ್ರಣ ಸಿಗುತ್ತದೆ ಮತ್ತು ಇದು ನಿರ್ವಹಣೆಯಿಂದಾಗಿಯೂ ಸುಲಭ. ಆದರೆ ರೈತರ ದೃಷ್ಟಿಯಿಂದ ನೋಡಿದರೆ ರೈತರ ಸಾಮರ್ಥ್ಯವನ್ನು ಕಡಿತಗೊಳಿಸುತ್ತದೆ ಬಹಳ ಮುಖ್ಯವಾಗಿ ಆಹಾರದ ಕೊರತೆಯನ್ನು ಉಂಟುಮಾಡುತ್ತದೆ. ಸಾಮಾನ್ಯವಾಗಿ ರಫ್ತು ಆಧಾರಿತ ವಸ್ತುಗಳ ತಯಾರಿಕೆಗೆ ಕಂಪನಿಗಳು ಒತ್ತು ಕೊಡುವುದರಿಂದ ವಾಣಿಜ್ಯ ಬೆಳೆ ಬೆಳೆಯಲು ಒಪ್ಪಂದಗಳಾಗುತ್ತವೆ. ಕ್ರಮೇಣ ಮತ್ತು ಖಚಿತವಾಗಿ ಆಹಾರ ಪದಾರ್ಥ ಬೆಳವಣಿಗೆ ಕುಂಠಿತಗೊಂಡು ದೇಶ, ಆಹಾರ ಸಮಸ್ಯೆಯಿಂದ ಬಳಲುತ್ತದೆ. ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದ ಕೂಲಿಕಾರರು, ಬಡವರು ಇನ್ನಷ್ಟು ಆತಂಕಕ್ಕೆ ಒಳಗಾಗುವರು.

ಭಾರತದ ರೈತರು ಹೆಚ್ಚಾಗಿ ಅನಕ್ಷರಸ್ಥರು. ಮಾರುಕಟ್ಟೆ ವ್ಯವಹಾರಗಳನ್ನು ಅಷ್ಟಾಗಿ ತಿಳಿಯದವರು. ಇಂಥ ರೈತರು ಕಂಪನಿಯ ಜೊತೆಗೆ ಒಪ್ಪಂದ ಮಾಡಿಕೊಳ್ಳುವಾಗ 'ಯೋಗ್ಯ ಬೆಲೆ'(ಫೇರ್ ಪ್ರೈಸ್) ಕುರಿತು ಇತ್ಯರ್ಥ ಪಡಿಸಿಕೊಳ್ಳಲು ಅದೆಷ್ಟು ಸಮರ್ಥರು?

ಬೆಳೆಗಳು ಪ್ರಕೃತಿಯನ್ನು ಅವಲಂಬಿಸಿರುತ್ತವೆ. ಯಾವುದೆ ಬಗೆಯ ಪ್ರಕೃತಿಯ ಮುನಿಸು - ಅತಿವೃಷ್ಟಿ, ಅನಾವೃಷ್ಟಿ, ಬಿರುಗಾಳಿ, ಪ್ರವಾಹ - ಬೆಳೆಯನ್ನು ನಷ್ಟಗೊಳಿಸುವ ಸಾಧ್ಯತೆ ಇರುತ್ತದೆ. ಆಗ ಕಂಪನಿಗಳಿಂದ ಬೆಳೆ ನಷ್ಟ ಪರಿಹಾರ ನಿರೀಕ್ಷಿಸಲಾಗದು.

ರೈತರು ಬೆಳೆಗೆ ಅಗತ್ಯವಾದ ಪದಾರ್ಥ ಹಾಗೂ ಸಲಕರಣೆಗಳಿಗಾಗಿ(ಇನ್‌ಪುಟ್ಸ್) ಕಂಪನಿಗಳನ್ನೆ ಅವಲಂಬಿಸಬೇಕಾಗುತ್ತದೆ. ಒಂದು ಕೈಯಿಂದ ಕೊಟ್ಟು ಇನ್ನೊಂದು ಕೈಯಿಂದ ದುಪ್ಪಟ್ಟು ವಸೂಲಿ ಮಾಡುವುದು ಯಾವುದೆ ಕಂಪನಿಯ ಮನೋಧರ್ಮ. ಇದು ಕ್ರಮೇಣ ರೈತರನ್ನು ಕಂಪನಿಗೆ ಗುಲಾಮರನ್ನಾಗಿಸುತ್ತದೆ. ಇನ್ನು ಮುಂದುವರೆದಾಗ ರೈತರು ಭೂಮಿಯಿಂದ ವಂಚಿತರಾಗಬೇಕಾಗುತ್ತದೆ. ರೈತರು ಮತ್ತು ಉದ್ಯಮಗಳ(ಪ್ರೋಸೆಸರ್ಸ್) ನಡುವಿನ ಒಪ್ಪಂದ ಅದು ಹೇಗೆ ಸಮನಾಗಬಲ್ಲದು? ಯಾಕೆಂದರೆ ಅವರಿಬ್ಬರೂ ಎರಡು ವಿಭಿನ್ನ ಶಕ್ತಿಗಳು(ಎನ್‌ಟಿಟೀಸ್).

ಕೃಷಿ ಒಂದು ಲಾಭದಾಯಕ ವೃತ್ತಿಯಾಗಬೇಕು ಎಂಬುದಕ್ಕೆ ಎರಡಭಿಪ್ರಾಯ ಇರಬಾರದು, ಕೃಷಿಯಲ್ಲಿ ಎಲ್ಲ ಆಧುನಿಕ ಪದ್ಧತಿಗಳನ್ನು, ತಾಂತ್ರಿಕತೆಯನ್ನು ಅಳವಡಿಸಿ ಉತ್ಪಾದನೆ ದ್ವಿಗುಣಗೊಳ್ಳಬೇಕು. ಇದರಿಂದ ರೈತರಿಗೆ ಉತ್ತಮ ಆದಾಯ ಬಂದು ಅವರಿಗೆ ಆರ್ಥಿಕತೆ ಸುಧಾರಿಸಬೇಕು. ಉದ್ಯೋಗ ಅವಕಾಶಗಳು ಹೆಚ್ಚಾಗಿ ಕೃಷಿ ಕೂಲಿಕಾರರಿಗೆ ನೆಮ್ಮದಿಯ ಬದುಕು ಲಭ್ಯವಾಗಬೇಕು. ಇದು ಎಲ್ಲರ ಆಶಯ. ಆದರೆ ಒಪ್ಪಂದದ ಕೃಷಿ ಸುಂದರ ತೋಟದಂತೆ ಗೋಚರಿಸುತ್ತದೆ. ಆದರೆ ಸಮೀಪಕ್ಕೆ ಹೋದಾಗ ವಸ್ತುಸ್ಥಿತಿ ತೀರಾ ಭಿನ್ನವಾಗಿರುತ್ತದೆ. ಉದ್ಯಮಿಗಳು ಮಾತ್ರ ಇನ್ನೂ ಶ್ರೀಮಂತರಾಗಲು ಈ ಕೃಷಿ ಸಹಕಾರಿಯಾಗಿದೆ.

ಕೊನೆಯದಾಗಿ ಒಪ್ಪಂದದ ಕೃಷಿ ಉತ್ಪನ್ನಗಳ ಸ್ಥಳೀಯ ವ್ಯಾಪಾರಿಗಳೂ, ಖರೀದಿದಾರರ (ಟ್ರೇಡರ್ಸ್) ಅಸ್ತಿತ್ವವನ್ನೇ ಹೊಸಕಿ ಹಾಕುತ್ತದೆ. ಸದ್ಯದ ಮಾರಾಟ ವ್ಯವಸ್ಥೆಯಲ್ಲಿ ಇವರು ಪ್ರಧಾನ ಪಾತ್ರ ವಹಿಸುತ್ತಾರೆ. ಒಪ್ಪಂದದಲ್ಲಿ ದರ ಹಾಗೂ ಖರೀದಿಸುವ ಕಂಪನಿ ಮೊದಲೆ ನಿಗದಿಯಾಗುವುದರಿಂದ ಮೇಲಿನ ಈರ್ವರ ಅಗತ್ಯತೆ ಬೀಳದು.

ಒಟ್ಟಾರೆಯಾಗಿ ಎಪಿಎಂಸಿ ಮಾದರಿಯ ಕಾನೂನು 2003 ಇಂಥ ರೈತ ವಿರೋಧಿ ಹಾಗೂ ಜನವಿರೋಧಿ ಅಂಶಗಳನ್ನು ಒಳಗೊಂಡಿದ್ದರಿಂದ ಕರ್ನಾಟಕದಲ್ಲಿ ರೈತ ಸಂಘಟನೆಗಳು ವ್ಯಾಪಾರಸ್ಥರ ಹಾಗೂ ಹಮಾಲರ ಸಂಘಗಳು ಈ ಕಾನೂನನ್ನು ವಿರೋಧಿಸಿವೆ. ಜಾಗತಿಕ ಬ್ಯಾಂಕ್, ಐಎಂಎಫ್ ಹಾಗೂ ಜಾಗತಿಕ ಮಾರಾಟ ಸಂಸ್ಥೆಗಳ ಒತ್ತಡಕ್ಕೆ ಮಣಿಯುವ ಪ್ರಭುತ್ವದಿಂದ ಇದಕ್ಕಿಂತ ಭಿನ್ನವಾದುದನ್ನು ಜನಪರವಾದುದನ್ನು ನಿರೀಕ್ಷಿಸುವುದು ತಪ್ಪಾದೀತು.

○

'ಕತ್ರಿನಾ'-ಅಮೆರಿಕಾದ ಶ್ರೀಮಂತಿಕೆಯ ಹಿಂದೆ ಅಡಗಿರುವ ಸತ್ಯ

ಶ್ರೀಮಂತ ರಾಷ್ಟ್ರವೆಂದು ಹೇಳಿಕೊಳ್ಳುವ ಅಮೆರಿಕಾ ಚಂಡಮಾರುತವನ್ನು ಎದುರಿಸಿದ ರೀತಿ ನಾಚಿಕೆಗೇಡಿನದ್ದಾಗಿದೆ. ಸಾಕಷ್ಟು ಮುಂಚಿತವಾಗಿ ಮುನ್ಸೂಚನೆ ಪಡೆದಿದ್ದರೂ ಸಾಮಾನ್ಯ ಜನರಿಗೆ ಪರಿಹಾರಕಾರ್ಯವನ್ನು ಸಕಾಲದಲ್ಲಿ ನೀಡುವಲ್ಲಿ ವಿಫಲವಾಗಿದೆ. ಸಾಮ್ರಾಜ್ಯಶಾಹಿ ಅಮೆರಿಕಾ ಮತ್ತು ಸಮಾಜವಾದಿ ಕ್ಯೂಬಾ ಚಂಡಮಾರುತವನ್ನು ಎದುರಿಸಿದ ಎರಡು ವಿಭಿನ್ನರೀತಿಯ ಕುರಿತಾದ ಲೇಖನ.

ಜಗತ್ತಿನ ಯಾವುದೇ ಪ್ರದೇಶದಲ್ಲಿ ಜನರು ಸಂಕಷ್ಟದಲ್ಲಿದ್ದಾಗ, ಅವರ ಸಹಾಯಕ್ಕೆ ಧಾವಿಸುವುದು ಪ್ರಜ್ಞಾವಂತ ನಾಗರಿಕನ, ಪ್ರಜಾಪ್ರಭುತ್ವವಾದಿ ದೇಶದ ಕರ್ತವ್ಯ. ಅಂತೆಯೇ 'ಕತ್ರಿನಾ' ಎಂಬ ಹೆಸರಿಟ್ಟ ಬಿರುಗಾಳಿಯ ರಭಸ, ಅಮೆರಿಕಾ ಸಂಯುಕ್ತ ಸಂಸ್ಥಾನದ ಪಶ್ಚಿಮ ಕರಾವಳಿಗೆ ಬಡಿದಾಗ, ಜಗತ್ತಿನ ವಿವಿಧ ದೇಶಗಳಿಂದ, ಜನರಿಂದ ಸಹಾಯಧನದ ಮಹಾಪೂರವೇ ಹರಿದುಬಂದಿತು. ಅದೇ ಸಂದರ್ಭದಲ್ಲಿ ಅಮೆರಿಕದ ಶ್ರೀಮಂತಿಕೆಯ ಹಿಂದಿರುವ ತಾರತಮ್ಯದ ಸತ್ಯ ಬಟ್ಟಂಬಯಲಾಯಿತು. ಬಂಡವಾಳಶಾಹಿಯ ಅತ್ಯುನ್ನತ ಘಟ್ಟವಾದ ಸಾಮ್ರಾಜ್ಯಶಾಹಿ ದೇಶದಲ್ಲಿ ಶ್ರೀಮಂತಿಕೆ ಎಂಬುದು ಕೆಲವೇ ಕೆಲವು ಜನರಿಗೆ ಅಥವಾ ಪುಟ್ಟ ವರ್ಗಕ್ಕೆ ಸೀಮಿತಗೊಂಡಿದೆ ಮತ್ತು ಶ್ರೀಮಂತ ದೇಶವೆಂದು ಕರೆಸಿಕೊಳ್ಳುವ ಅಮೆರಿಕಾದಲ್ಲಿ ಬಹುದೊಡ್ಡ ಸಂಖ್ಯೆಯ ಜನ ಅದರಲ್ಲೂ ಹೆಚ್ಚಾಗಿ ಆಫ್ರಿಕಾಮೂಲದ ಅಮೆರಿಕನ್ನರು ಬಡವರಾಗಿಯೇ ಉಳಿದಿದ್ದಾರೆ ಎಂಬುದು ಜಗಜ್ಜಾಹೀರಾಗಿದೆ.

ಹಣದಲ್ಲಿ ಶ್ರೀಮಂತಿಕೆಯನ್ನು ಹೊಂದಿರುವ ಅಮೆರಿಕಾ ಮೌಲ್ಯಗಳಲ್ಲಿ ಶ್ರೀಮಂತಿಕೆಯನ್ನು ಕಳಕೊಂಡಿದೆ ಎಂಬುದು ಮೊದಲೇ ತಿಳಿದಿದ್ದರೂ, ಇದೀಗ ಇನ್ನಷ್ಟು ಬೆಳಕಿಗೆ ಬಂದಿದೆ.

ಆಗಸ್ಟ್ 29 ರಂದು ಬೆಳಿಗ್ಗೆ ಅಮೆರಿಕಾದ ಮೆಕ್ಸಿಕೊ ಕೊಲ್ಲಿ ಎಂಬ ಪ್ರದೇಶಕ್ಕೆ ಬಡಿದ ಚಂಡಮಾರುತದಿಂದ 3 ರಾಜ್ಯಗಳ ಹಲವಾರು ಪ್ರದೇಶಗಳು ನೀರಿನಿಂದ ಆವೃತವಾದವು. ಲೂಸಿಯಾನ, ಮಿಸ್ಸಿಸಿಪಿ ಮತ್ತು ಅಲಬಾಮ ರಾಜ್ಯಗಳು ತೀವ್ರ ಹಾನಿಗೊಳಗಾದವು. ಸಮುದ್ರ ಮಟ್ಟಕ್ಕಿಂತ 10 ಅಡಿ ಕೆಳಕ್ಕಿರುವ ಲೂಸಿಯಾನ ರಾಜ್ಯದ ನ್ಯೂ ಆರ್ಲಿಯನ್ಸ್ ನಗರವಂತೂ ನೀರಿನಲ್ಲೇ ತೇಲಾಡಿತು. ಬಹುಮಹಡಿಯ ಕಟ್ಟಡಗಳ 2-3 ಮಳಿಗೆಗಳವರೆಗೂ ನೀರು ತುಂಬಿತ್ತು. 5 ದಿನಗಳ ಮುನ್ಸೂಚನೆ ನೀಡಿದರೂ ಮನೆ ಬಿಟ್ಟು ಕದಲಲಾಗದ ವೃದ್ಧರು, ಖಾಯಿಲೆಗೊಳಗಾದವರು ನೀರಿನಲ್ಲಿಯೇ ಹೆಣವಾಗಿ ತೇಲಾಡಿದರು.

ಪ್ರಕೃತಿಯ ಆಕ್ರೋಶದ ನಡುವೆ ಜನರ ಆಕ್ರಂದನ ಕೇಳುವವರೇ ಇಲ್ಲವಾಯಿತು. ಅದರಲ್ಲೂ ಜನರಿಂದ ಆಯ್ಕೆಯಾದ ಸರ್ಕಾರವೇ ನಿಷ್ಕ್ರಿಯವಾದರೆ!


ಕಾರು ಇದ್ದವರು ಪಾರು

ಚಂಡಮಾರುತವು ಗಂಟೆಗೆ 250 ಕಿ.ಮಿ. ವೇಗದಲ್ಲಿ ಬರುವುದೆಂದು ಅಂದಾಜು ಮಾಡಲಾಗಿದ್ದು, ತೀವ್ರ ಕಷ್ಟನಷ್ಟಕ್ಕೆ ಒಳಗಾಗುವುದೆಂದು ನಿರೀಕ್ಷಿಸಲಾಗಿತ್ತು. ಅಂತೆಯೇ ಮುನ್ಸೂಚನೆಯನ್ನು ನೀಡಲಾಗಿತ್ತು. ಆದರೆ ಜನರನ್ನು ಅವರ ಅಗತ್ಯ ವಸ್ತುಗಳನ್ನು ಸುರಕ್ಷಿತ ಜಾಗಕ್ಕೆ ರವಾನೆ ಮಾಡುವ ಯಾವುದೇ ಕೆಲಸ ನಡೆಯಲಿಲ್ಲ. ಆದ್ದರಿಂದ ಸ್ವಂತ ಕಾರು ಹೊಂದಿರುವವರು ಮಾತ್ರ ತಮಲ್ಲಿರುವ ಅಗತ್ಯ ಸಾಮಾನು ಸರಂಜಾಮುಗಳನ್ನು ಹೊತ್ತುಕೊಂಡು, ಜೀವದಿಂದ ಪಾರಾದರು. ಅವರು ಜೋಡಿಸಿಟ್ಟ ಹಣವನ್ನು ದೇಶದ ಯಾವ ಮೂಲೆಯಿಂದಾದರೂ ತೆಗೆದುಕೊಳ್ಳ ಬಹುದಾದ್ದರಿಂದ ಅವರಿಗೆ ತೊಂದರೆಯಾಗಲಿಲ್ಲ. ಅವರ ಮನೆಗಳಿಗೂ ಕೂಡಾ ವಿಮೆ ಮಾಡಿಸಿದ್ದರಿಂದ ಮನೆ ಕಳಕೊಂಡವರು ಪರಿಹಾರವನ್ನು ಪಡೆದುಕೊಳ್ಳಬಹುದು.

ಆದರೆ ಅಮೆರಿಕಾದಲ್ಲಿರುವ ಕಪ್ಪುಜನರು, ಬಡಜನರು, ಬಸ್ಸಿಗೂ ಹಣವಿಲ್ಲದೆ, ಅಲ್ಲಿಯೇ ಉಳಿದರು. ದೊಡ್ಡ ಕಟ್ಟಡಗಳ ಚಾವಣಿಗಳ ಮೇಲೆ, ಕೆಲವೊಂದು ಸ್ಟೇಡಿಯಂಗಳಲ್ಲಿ ಕಾಲ ಕಳೆದರು. ಆದರೆ ಅಲ್ಲಿ ಆಹಾರ ಪೂರೈಕೆಯ ವ್ಯವಸ್ಥೆ ಇರಲಿಲ್ಲ. ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳಲು ಕೆಲವರು ಲೂಟಿಗೂ ಇಳಿದರು. ಸ್ವಯಂ ಸೇವಾ ಸಂಘಟನೆಗಳೂ ಸಹಾಯಕ್ಕೆ ಬರಲಿಲ್ಲ. ನಿತ್ಯವಿಧಿಗಳನ್ನು ಪೂರೈಸಲೂ ವ್ಯವಸ್ಥೆ ಇರಲಿಲ್ಲ. ಹತ್ತಿರದ ಟೆಕ್ಸಾಸ್ ರಾಜ್ಯದ ಹ್ಯೂಸ್ಟನ್‌ನ ಸೂಪರ್ ಡೋಮ್ ಸ್ಟೇಡಿಯಂಗೆ 25,000 ನಿರಾಶ್ರಿತರನ್ನು ಕಳುಹಿಸಲಾಗಿದ್ದು, ಅಲ್ಲಿರುವ ಪಾಯಿಖಾನೆಗಳು ಕೇವಲ 100. ಅಲ್ಲಿಯೂ ಕೂಡಾ ಆಹಾರ, ಕುಡಿಯುವ ನೀರಿನ ವ್ಯವಸ್ಥೆ ಇರಲಿಲ್ಲ.

ರಜೆಯ ಮಜಾ

ಇಷ್ಟೆಲ್ಲಾ ಅನಾಹುತಗಳು ಸಂಭವಿಸುತ್ತಿದ್ದರೂ



'ಸೂಪರ್ ಪವರ್' ಅಮೆರಿಕಾದ ಸೂಪರ್ ಅಧ್ಯಕ್ಷ ಬುಶ್‌ರವರು ರಜಾ ದಿನಗಳ ಮಜಾವನ್ನು ಅನುಭವಿಸುತ್ತಿದ್ದರು. ಅವರಿಗೆ ಇಷ್ಟವಾದ ಗಾಲ್ಫ್ ಆಡುತ್ತಿದ್ದರು. ಮಾಧ್ಯಮಗಳಿಂದ, ಸಾರ್ವಜನಿಕರಿಂದ ಟೀಕೆ ಬಂದ ನಂತರವಷ್ಟೇ 3 ದಿನಗಳ ನಂತರ ಟಿ.ವಿ.ಯಲ್ಲಿ ಕಾಣಿಸಿಕೊಂಡರು. ಚಂಡಮಾರುತ ಬಂದ 5 ದಿನಗಳ ನಂತರವಷ್ಟೇ ಪೀಡಿತ ಪ್ರದೇಶವಾದ ನ್ಯೂಆರ್ಲಿಯನ್ಸ್ ಗೆ ಹೆಲಿಕಾಪ್ಟರ್‌ನಲ್ಲಿ ಭೇಟಿ ಕೊಟ್ಟರು.

ಅಮೆರಿಕದ ಉಪಾಧ್ಯಕ್ಷ, ಬಹುದೊಡ್ಡ ತೈಲ ಉದ್ಯಮಿ ಡಿಕ್ ಚೆನಿ ಒಂದು ವಾರದ ಕಾಲ ವೋಮಿಂಗ್ ಎಂಬ ಪ್ರವಾಸಿ ತಾಣದಲ್ಲಿ ರಜೆಯಲ್ಲಿ ಕಾಲ ಕಳೆಯುತ್ತಿದ್ದರು. ವಿದೇಶಾಂಗ ಕಾರ್ಯದರ್ಶಿ ಕಾಂಡೊಲಿನಾ ರೈಸ್ ನ್ಯೂಯಾರ್ಕಿನ ಪ್ರತಿಷ್ಠಿತ ರಸ್ತೆಯಲ್ಲಿ 7000 ಡಾಲರ್ ಬೆಲೆಯ 'ಶೂ' ಖರೀದಿಸುತ್ತಿದ್ದರು. ಇವರು ಮಾನವೀಯ ಮುಖವಿಲ್ಲದ ಅಮೆರಿಕಾದ ಶ್ರೀಮಂತಿಕೆಯ ಕುರುಹುಗಳು!

ಪರಿಹಾರ ಕಾರ್ಯದ ಬದಲು ಯುದ್ಧಕ್ಕೆ

ಪರಿಹಾರ ಕಾರ್ಯಕ್ಕೆ ನೆರವಾಗಲು ಸೇನಾಪಡೆಗಳಾಗಲೀ, ಅರೆ ಸೇನಾಪಡೆಗಳಾಗಲಿ ಇದ್ದಲ್ಲಿ ಅನುಕೂಲವಾಗತ್ತದೆ. ಆದರೆ ಅಮೆರಿಕಾದ ದೊಡ್ಡ ಸೇನಾಪಡೆ ಇರಾಕ್‌ನಲ್ಲಿ ಜನರ ಮಾರಣಹೋಮ ನಡೆಸುತ್ತಿದೆ. ಅಮೆರಿಕದಲ್ಲಿರುವ ಜನರ ಜೀವ ಉಳಿಸುವ ಬದಲಾಗಿ, ಇರಾಕ್‌ನಲ್ಲಿರುವ ಮುಗ್ಧ ಜನತೆಯ ಜೀವವನ್ನು ತೆಗೆಯಲು ಸೇನೆಯನ್ನು ಉಪಯೋಗಿಸಲಾಗುತ್ತಿದೆ.

ಅಮೆರಿಕಾದ ನ್ಯಾಶನಲ್ ಗಾರ್ಡ್ ಬ್ಯೂರೋದ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಸ್ಟೀವನ್ ಬ್ಲಮ್ ಹೇಳುವ ಪ್ರಕಾರ "155ನೇ ಮತ್ತು 256ನೇ ಇನ್‌ಫೆಂಟ್ರಿ ತುಕಡಿಯು ಇರಾಕ್ ನಲ್ಲಿರುವುದರಿಂದ ಪರಿಹಾರ ಕಾರ್ಯಕ್ಕೆ ತೊಂದರೆಯಾಗಿದೆ. ಒಂದು ವೇಳೆ ಅವರು ಅಮೆರಿಕಾದಲ್ಲೇ ಉಳಿದಿದ್ದರೆ, ಅವರ ಸಾಮರ್ಥ್ಯ ಮತ್ತು ಅನುಭವವನ್ನು ಪರಿಹಾರ ಕಾರ್ಯಕ್ಕೆ ಬಳಸಿಕೊಳ್ಳಬಹುದಾಗಿತ್ತು."

ಅವರು ಮುಂದುವರಿಯುತ್ತಾ ಮುಂದಿನ 4 ತಿಂಗಳುಗಳಲ್ಲಿ ಪರಿಹಾರ ಕಾರ್ಯಕ್ಕಾಗಿ, ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಇತರೆ ಕಾರಣಗಳಿಗಾಗಿ ಕನಿಷ್ಟ ಪ್ರತಿ ತಿಂಗಳು 50,000 ಹೆಚ್ಚುವರಿ ಸೈನಿಕರು ಬೇಕಾಗುತ್ತಾರೆ ಎಂದು ಹೇಳಿದ್ದಾರೆ. ಆದರೆ ಅವರ ಕೂಗು ಯುದ್ಧಕೋರ ಬುಶ್ ಕಿವಿಗೆ ಖಂಡಿತ ಕೇಳಿಸುವುದಿಲ್ಲ!

ಅಮೇರಿಕಾದಂತಹ ಮುಂದುವರಿದ ದೇಶದಲ್ಲಿ ಪರಿಹಾರ ಶೀಘ್ರವಾಗಿ ತಲುಪದೆ ಇರುವುದು ಶೋಚನೀಯ.

10,000ಕ್ಕಿಂತಲೂ ಹೆಚ್ಚು ಜನರು ಸತ್ತಿದ್ದಾರೆ ಎಂದು ನಂಬಲಾದ ಚಂಡಮಾರುತದಲ್ಲಿ ಹಲವು ದಿನಗಳವರೆಗೆ ಮಾನವ ಶವಗಳೂ ನೀರಿನಲ್ಲಿ ತೇಲಾಡುತ್ತಿದ್ದವು. ಒಂದೆಡೆ ಹಸಿವಿನಿಂದ, ಕುಡಿಯುವ ನೀರಿಲ್ಲದೆ ಜನ ಕಂಗಾಲಾಗಿದ್ದರು. ಪರಿಹಾರ ಕಾರ್ಯಕ್ಕಾಗಲೀ ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕಾಗಲೀ, ಪೊಲೀಸ್ ಪಡೆ ಅಥವಾ ಮಿಲಿಟರಿ ಪಡೆ ಅಲ್ಲಿರಲಿಲ್ಲ. ಬದಲಾಗಿ ಎಂ 16 ಗನ್ನುಗಳನ್ನು ಕೈಯಲ್ಲಿ ಹಿಡಿದುಕೊಂಡಿದ್ದ ಲೂಟಿಕೋರರು ನಗರಗಳನ್ನು ತಮ್ಮ ಹತೋಟಿಗೆ ತೆಗೆದುಕೊಂಡಿದ್ದರು.

3 ತಿಂಗಳು ಜೈಲಿನಲ್ಲಿ ಕಳೆದ ಚೈಲ್ಡ್ಸ್ ಎನ್ನುವ ವ್ಯಕ್ತಿ ಹೇಳುವ ಪ್ರಕಾರ "ಪರಿಸ್ಥಿತಿ ಜೈಲಿಗಿಂತ ಕಡೆಯಾಗಿದೆ. ಅಲ್ಲಿಯಾದರೆ, ನಿತ್ಯ ವಿಧಿಗಳನ್ನು ಪೂರೈಸಲು ಸ್ನಾನಗ್ರಹ, ಪಾಯಿಖಾನೆಗಳಿವೆ. ಇಲ್ಲಿ ಯಾವುದೂ ಇಲ್ಲ."

ಲೂಸಿಯಾನದ 1 ಲಕ್ಷ ನಿರಾಶ್ರಿತರು ಹತ್ತಿರದ ಟೆಕ್ಸಾಸ್‌ಗೆ ಹೋದರೆ ಅಲ್ಲಿನ ಸರಕಾರದಲ್ಲಿರುವ ರಿಪಬ್ಲಿಕನ್ ರಾಜಕಾರಣಿಗಳು, "ಕೇಂದ್ರದಿಂದ (ವಾಷಿಂಗ್‌ಟನ್) ಸಹಾಯ ಬಾರದಿದ್ದರೆ ನಿರಾಶ್ರಿತರನ್ನು ನೊಡಿಕೊಳ್ಳ ಲಾಗುವುದಿಲ್ಲ" ಎಂದು ಹೇಳಿದ್ದಾರೆ. 2.2 ಕೋಟಿ ಜನರಿರುವ ಟೆಕ್ಸಾಸ್ ತೈಲದ ಹಣದಿಂದಾಗಿ ಸಂಪದ್ಭರಿತವಾಗಿದೆ. ಆದರೆ ನಿರಾಶ್ರಿತರಿಗೆ ಪರಿಹಾರ ನೀಡಲು ಹಣವಿಲ್ಲ. ಏಕೆಂದರೆ ಅವರೆಲ್ಲ ಬಡವರು, ಕಪ್ಪುಜನರು, ಅವರಲ್ಲಿ ಹೆಚ್ಚಿನವರಿಗೆ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲ. ಒಂದು ವೇಳೆ ಹೆಸರಿದ್ದರೂ ಅವರು ರಿಪಬ್ಲಿಕನ್ನರಿಗೆ ಮತ ಹಾಕುವುದಿಲ್ಲ. ಅದಕ್ಕಾಗಿ ಅವರಿಗೆ ಶಿಕ್ಷೆ!

ವ್ಯವಸ್ಥೆಯಲ್ಲಿನ ವ್ಯತ್ಯಾಸ

"ತಿಂಗಳುಗಳ ಹಿಂದೆಯಷ್ಟೆ ಮೆಕ್ಸಿಕೊ ಕೊಲ್ಲಿಯ ಹತ್ತಿರದಲ್ಲೇ ಇರುವ ಕ್ಯೂಬಾ ಕರಾವಳಿಗೆ ಚಂಡಮಾರುತ ಬಡಿದಿತ್ತು. ತಂತ್ರಜ್ಞಾನದಲ್ಲಿ ಅಮೇರಿಕಾದಷ್ಟು ಮುಂದುವರಿಯದ ಕ್ಯೂಬಾ



ಚಂಡಮಾರುತವನ್ನು ಎದುರಿಸಿದ ರೀತಿ ಅಮೇರಿಕಾವನ್ನು ನಾಚಿಸುವಂತಹದ್ದು. (ಬಾಕ್ಸ್ ನೋಡಿ)

ಸಮಾಜವಾದಿ ವ್ಯವಸ್ಥೆಯನ್ನು ಹೊಂದಿರುವ ಕ್ಯೂಬಾ ಇಡೀ ಸಮಾಜದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಳ್ಳುತ್ತದೆ. ಆದರೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹಣವುಳ್ಳವನಿಗೆ ಮಾತ್ರ ಅಧಿಕಾರ, ಸೌಲಭ್ಯವೆಲ್ಲವೂ. ಅಂದರೆ ಬಲಶಾಲಿಯಾಗಿರುವವನು ಮಾತ್ರ ಬದುಕಲು ಸಾಧ್ಯ (survival of the fittest)

■ ಬಾಲಕೃಷ್ಣ ಶೆಟ್ಟಿ

ಕ್ಯೂಬಾದಲ್ಲಿ ಚಂಡಮಾರುತ

ಕಳೆದ ಸೆಪ್ಟೆಂಬರ್‌ನಲ್ಲಿ ಕ್ಯೂಬಾದ ಕರಾವಳಿಗೂ ಇಷ್ಟೇ ಭೀಕರವಾದ ಚಂಡಮಾರುತ ಬಡಿದಿತ್ತು. (ಗಂಟೆಗೆ 160 ಮೈಲಿ ವೇಗ - 250 ಕಿ.ಮೀ) ಆದರೆ ಅದೊಂದು ದೊಡ್ಡ ಸುದ್ದಿಯಾಗಲಿಲ್ಲ. (ಬಡವರ ಮನೆಗೆ ಬೆಂಕಿ ಬಿದ್ದಾಗ ಸುದ್ದಿಯಾಗುವುದು ಕಡಿಮೆ ಅಥವಾ ಇಷ್ಟೊಂದು ಹಾನಿಯಾಗಿಲ್ಲ ಎಂದು ಸುದ್ದಿಯಾಗಲಿಲ್ಲವೋ ಏನೊ?) ಚಂಡಮಾರುತ ಅಪ್ಪಳಿಸುವ ಮೊದಲೇ 15 ಲಕ್ಷ ಜನರನ್ನು ಆ ಪ್ರದೇಶದಿಂದ ಸಾಗಹಾಕಲಾಗಿತ್ತು. 20,000 ಮನೆಗಳು ನಾಶವಾದರೂ ಒಬ್ಬರೂ ಸಾಯಲಿಲ್ಲ.

ನ್ಯೂ ಮೆಕ್ಸಿಕೊ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಪ್ರಾಧ್ಯಾಪಕರಾದ ಡಾ.ನೆಲ್ಸನ್ ವಾಲ್ಡ್ಸ್ ಹೇಳುತ್ತಾರೆ. "ಕ್ಯೂಬಾದಲ್ಲಿ ಇಡೀ ಸಮುದಾಯವೇ ನಾಗರಿಕ ರಕ್ಷಣೆಯ ಹೊಣೆ ಹೊರುತ್ತದೆ. ಅಪಾಯ ಉಂಟಾಗುವ ಸಾಕಷ್ಟು ಮುಂಚಿತವಾಗಿ ತಾವೆಲ್ಲಿ ಹೋಗಬೇಕೆಂಬುದು ಜನರಿಗೆ ತಿಳಿದಿರುತ್ತದೆ. ಕ್ಯೂಬಾದಲ್ಲಿ ನಿರಾಶ್ರಿತರನ್ನು ಸ್ಟೇಡಿಯಂನಲ್ಲಿರಿಸಿ, ಇನ್ನಿತರ ಮೂಲ ಸೌಲಭ್ಯಗಳನ್ನು ಒದಗಿಸದೆ ಇರುವುದನ್ನು ಯೋಚಿಸಲೂ ಸಾಧ್ಯವಿಲ್ಲ. ಕುಟುಂಬ ವೈದ್ಯಕೀಯ ವ್ಯವಸ್ಥೆ ಇರುವುದರಿಂದ ಸುರಕ್ಷಿತ ಜಾಗಗಳಿಗೆ ತೆರಳಿದ ಜನರೊಂದಿಗೆ ವೈದ್ಯರೂ ಇರುತ್ತಾರೆ. ಯಾರಿಗೆ ಯಾವ ರೀತಿಯ ಔಷಧ ಬೇಕಾಗುತ್ತದೆ ಎಂಬುದು ಅವರಿಗೆ ಮೊದಲೇ ತಿಳಿದಿರುತ್ತದೆ.

ಮಾತ್ರವಲ್ಲ ಜನರನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸುವ ಸಂದರ್ಭದಲ್ಲಿ, ಅವರಿಗೆ ಸೇರಿದ ಜಾನುವಾರು, ಪಶುವೈದ್ಯರು, ಟಿ.ವಿ.ರೆಫ್ರಿಜರೇಟರ್ ಮೊದಲಾದ ವಸ್ತುಗಳನ್ನು ಕೂಡಾ ಸಾಗಿಸುತ್ತಾರೆ. ಇದರಿಂದ ತಮ್ಮ ಆಸ್ತಿ ಕಳೆದುಕೊಳ್ಳುತ್ತೇವೆ ಎನ್ನುವ ಭಯ ಜನರಿಗಿರುವುದಿಲ್ಲ ಎಂದು ಡಾ.ನೆಲ್ಸನ್ ಹೇಳುತ್ತಾರೆ. ನೆಲ್ಸನ್ ಕಮ್ಯೂನಿಸ್ಟ್ ನಾಯಕರೇನಲ್ಲ, ಅವರೊಬ್ಬ ಇನ್ನೊಂದು ದೇಶದ ಪ್ರಾಧ್ಯಾಪಕ.

ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ವರದಿಗಾರ ಪಾಲ್ ಕ್ರುಗ್‌ಮ್ಯಾನ್ "ಅಮೇರಿಕದ ಇಂದಿನ ಮುಖಂಡರು ಯುದ್ಧವನ್ನು ಹೂಡುತ್ತಾರೆ. ಆದರೆ ಜನರಿಗೆ ಭದ್ರತೆ ಒದಗಿಸುವುದಕ್ಕಾಗಲಿ, ಮುಂಜಾಗ್ರತೆಯ ಕ್ರಮಗಳನ್ನಾಗಲಿ ಅನುಸರಿಸುವುದಿಲ್ಲ. ಸರಕಾರ ನಿರ್ವಹಿಸಬೇಕಾದ ಅಗತ್ಯಗಳೇನೆಂಬುದರ ಬಗ್ಗೆ ಅವರ ಪ್ರಾಶಸ್ತ್ಯವಿಲ್ಲ.

ಕ್ಯೂಬಾದಲ್ಲಾದರೆ, ಭದ್ರತಾ ಪಡೆಗಳು ವಿದೇಶಿಯರಿಂದ ದೇಶವನ್ನು ರಕ್ಷಿಸುವ ಕಾರ್ಯವನ್ನು ಮಾಡುವುದು ಮಾತ್ರವಲ್ಲದೆ, ಅಪಾಯಕಾರಿ ಪ್ರಕೃತಿ ವಿಕೋಪಗಳಿಂದ ಜನರನ್ನು ರಕ್ಷಿಸುವ ಕೆಲಸವನ್ನು ಮಾಡುತ್ತಾರೆ" ಎಂದು ಬರೆದಿದ್ದರು.

ದಿನನಿತ್ಯ ಒಂದಲ್ಲ ಒಂದು ವಿಧದಿಂದ ಬೆದರಿಕೆಯನ್ನು ಎದುರಿಸುತ್ತಿರುವ ಕ್ಯೂಬಾದ ಅಧ್ಯಕ್ಷ ಫಿಡಲ್ ಕ್ಯಾಸ್ಟ್ರೊ, ಅಮೇರಿಕಾದ ಚಂಡಮಾರುತದಲ್ಲಿ ನೊಂದವರಿಗೆ ಸಹಾಯ ಮಾಡುವುದಕ್ಕಾಗಿ 1100 ಡಾಕ್ಟರುಗಳನ್ನು ಹಾಗೂ 26 ಟನ್ ಔಷಧಗಳನ್ನು ಕಳುಹಿಸುವುದಾಗಿ ಘೋಷಿಸಿದ್ದಾರೆ.

ಸಮಾಜವಾದಿ ರಾಷ್ಟ್ರ ಮತ್ತು ಸಾಮ್ರಾಜ್ಯಶಾಹಿ ರಾಷ್ಟ್ರಗಳಲ್ಲಿ ಚಂಡಮಾರುತ ಎದುರಿಸುವ ಎರಡು ವಿಭಿನ್ನ ವಿಧಾನಗಳನ್ನು ನಾವಿಲ್ಲಿ ನೋಡಬಹುದು.

ಸಿನಿಮಾ

ಇತ್ತೀಚಿನ ಸಿನಿಮಾಗಳು ರಂಜನೆಯ ಹೆಸರಲ್ಲಿ ಕೇವಲ ವ್ಯಾಪಾರವೊಂದೇ ಧ್ಯೇಯ ಎಂಬ ಧೋರಣೆಗೆ ಮಣೆ ಹಾಕುತ್ತಿವೆ. ಇಂದಿನ ಕನ್ನಡ ಚಿತ್ರಗಳಂತೂ ಮಚ್ಚು-ಲಾಂಗ್‌ಗಳನ್ನು ವೈಭವೀಕರಿಸುತ್ತಿವೆ. ಹಿಂಸೆಯನ್ನು ವಿಜೃಂಬಿಸಿ ಯುವ ಜನತೆಯನ್ನು ದಾರಿ ತಪ್ಪಿಸುತ್ತಿವೆ. ಮತ್ತೊಂದೆಡೆ ಟಿ.ವಿ.ಚಾನಲ್‌ಗಳು ಗೊತ್ತು ಗುರಿ ಇಲ್ಲದ, ಯಾವುದೇ ಮೌಲ್ಯಗಳಿಲ್ಲದೆ ಕೌಟುಂಬಿಕ ಧಾರಾವಾಹಿ ಹೆಸರಲ್ಲಿ ಮಹಿಳೆಯರನ್ನು ಕುಟುಂಬದ ಚೌಕಟ್ಟಿನಲ್ಲಿ ಹಿಡಿದಿಡುವ ಯತ್ನ ನಡೆಸುತ್ತಿವೆ. ಇವುಗಳ ಮಧ್ಯೆ ಕೆಲ ದಿನಗಳ ಹಿಂದೆ ತೆರೆ ಕಂಡ ಗಿರೀಶ್ ಕಾಸರವಳ್ಳಿ ಯವರ 'ಹಸೀನಾ' ಮಹಿಳೆಯರ ಬದುಕಿನ ಭಾಗವಾಗಿ, ಅವರ ಬವಣೆಯನ್ನು ನೈಜವಾಗಿ ಬಿಂಬಿಸುವ - ಒಂದು ಉತ್ತಮ ಚಿತ್ರ.

ಅಸಹಾಯಕ ಹೆಣ್ಣಿನ ಬಂಡಾಯ 'ಹಸೀನಾ'

ಹಸೀನಾ ಅನಕ್ಷರತೆಯ ಬಡ ಮುಸ್ಲಿಂ ಕುಟುಂಬದ ಮಹಿಳೆ. ಅವಳಿಗೆ ಮೂರು ಹೆಣ್ಣು ಮಕ್ಕಳು. ಹಿರಿ ಮಗಳು ಅಂಧೆ, ಎರಡನೆಯದು ಚೂಟಿ ಹುಡುಗಿ, ಇನ್ನೊಂದು ಕೈಕೂಸು. ಹಸೀನಾ ಮತ್ತೆ ಗರ್ಭಿಣಿ. ಗಂಡ ಯಾಕೂಬ್ ಆಟೋ ಚಾಲಕ. ಸಂತೋಷವಾಗಿದ್ದ ಕುಟುಂಬವಿದು.

ಸರ್ವಧರ್ಮಗಳ ಏಕತೆ ಅಂಶವೆಂದರೆ 'ಪುರುಷ ಪ್ರಧಾನ' ವ್ಯವಸ್ಥೆ ತಾನೆ? ಯಾಕೂಬ್‌ಗೆ ಮತ್ತು ಆತನ ತಾಯಿಗೆ ಗಂಡು ಮಗು ಪಡೆದರೆ ಸಾರ್ಥಕತೆ ಎಂಬ ಭಾವನೆ. ಸರಿ ಹಸೀನಾಳ ಹೊಟ್ಟೆಯಲ್ಲಿರುವ ಭ್ರೂಣ ಪರೀಕ್ಷೆ ಮಾಡಿಸುತ್ತಾನೆ. ಅದೂ ಹೆಣ್ಣೆಂದು ತಿಳಿದ ಯಾಕೂಬ್ ಇದಕ್ಕೆಲ್ಲಾ ಹೆಂಡತಿಯೇ ಕಾರಣ, ಅವಳು ಗಂಡು ಮಗು ಹೆರಲಾರಳು ಎಂದು ತೀರ್ಮಾನಿಸಿ, ಅವಳ ಜೊತೆ ಜಗಳ ತೆಗೆದು ಹಿಂಸಿಸುತ್ತಾನೆ. ಗಂಡು ಮಗುವಿನ ತಂದೆ ಆಗಿಯೇ ತೀರಬೇಕೆಂದು ಹೆಂಡತಿ ಮಕ್ಕಳನ್ನು ತೊರೆಯುತ್ತಾನೆ. ಬೇರೆ ಮದುವೆ ತಯಾರಿ ಕೂಡ ನಡೆಸುತ್ತಾನೆ. ಮುಂದೆ ಹಸೀನಾಳ ಗೋಳಿನ ಬದುಕು ತೆರೆದುಕೊಳ್ಳುತ್ತಾ ಸಾಗುತ್ತದೆ. ಇಲ್ಲಿ ಎಲ್ಲಾ ಧರ್ಮ, ಜಾತಿ ಮತ್ತು ವರ್ಗಗಳ ಮಹಿಳೆಯರ ಸ್ಥಿತಿಯನ್ನು ಹಸೀನಾ ಪ್ರತಿನಿಧಿಸುತ್ತಾಳೆ.

ಮನೆಗೆ ಬಾರದ ಗಂಡ. ಸಂಸಾರದ ತುತ್ತಿನ ಚೀಲ ತುಂಬಿಸುವ ಹೊರೆ ಹಸೀನಾಳ ಮೇಲೆ ಬೀಳುತ್ತದೆ. ಈ ಮಧ್ಯೆ ಅಂಧ ಮಗಳಿಗೆ ದೃಷ್ಟಿ ಬರುವ ಭರವಸೆಯನ್ನು ವೈದ್ಯರು ನೀಡಿದ ಮೇಲಂತೂ, ಮಗಳ ಬಾಳಿನ ಬೆಳಕು ಮೂಡಿಸಲು ಮಕ್ಕಳು ಸೇರಿದಂತೆ ಅಗರ ಬತ್ತಿ ಹೊಸೆಯುವುದು ಮತ್ತು ಮನೆಗೆಲಸ ಮಾಡುವ ಮೂಲಕ ಖರ್ಚು ಹೊಂದಿಸುವ ಜವಾಬ್ದಾರಿಯ ನೊಗವನ್ನು ಆ ಗರ್ಭಿಣಿ ಹೊರುತ್ತಾಳೆ. ಮತ್ತೊಂದೆಡೆ ಗಂಡನಿಂದ ನ್ಯಾಯ ಪಡೆಯಲು ಏಕಾಂಗಿ ಹೋರಾಟ.

ಮೊಹಲ್ಲಾ, ಅಲ್ಲೊಂದು ಮಸೀದಿ. ಅಲ್ಲಿನ ಗಂಡಸರು ಪ್ರತಿದಿನ ಮುಂಜಾನೆ, ಬೆಳಗಿನ, ಸಂಜೆ, ಸೂರ್ಯಸ್ತ ಮತ್ತು ರಾತ್ರಿ ಐದು ಪ್ರಾರ್ಥನೆ ನಡೆಸುತ್ತಾರೆ. ಹೊರಗಡೆ ಹಸೀನಾ ಮಕ್ಕಳ ಜತೆ ನ್ಯಾಯಕ್ಕಾಗಿ ಸತ್ಯಾಗ್ರಹ ಹೂಡುತ್ತಾಳೆ. ಆದರೆ ಈಕೆ ಬಗ್ಗೆ ಮುತುವಲ್ಲಿ(ಧರ್ಮದರ್ಶಿ)ಗಾಗಲಿ, ಮೌಲ್ವಿಗಾಗಲಿ ಕರುಣೆ ಹುಟ್ಟದು. ಅಲ್ಲಿಯೂ ಕೆಡುಕ ಗಂಡ ಕುಡಿದು ಬಂದು ಹಿಂಸಿಸುತ್ತಾನೆ. ಮುತುವಲ್ಲಿ ಅವಳಿಗೆ ನ್ಯಾಯ ಕೊಡಿಸುವ ತೀರ್ಮಾನಕ್ಕೆ ಬರುವಷ್ಟರಲ್ಲಿ ಹಸೀನಾಳ ಹೆಬ್ಬಯಕೆ ಮಣ್ಣಾಗಿಬಿಡುತ್ತದೆ. ಅಷ್ಟರಲ್ಲಿ ಧರ್ಮಗ್ರಂಥಗಳಲ್ಲಿರುವ ಹೆಣ್ಣಿನ ಹಕ್ಕುಗಳ ಬಗ್ಗೆ ಮಹಿಳೆಯರ ಕಣ್ಣು ತೆರೆದಿರುತ್ತದೆ. ಜಾಗೃತರಾಗುತ್ತಾರೆ. ಧರ್ಮಗಳಲ್ಲಿನ ಮೌಢ್ಯ ಮತ್ತು ಪುರುಷ ಪ್ರಧಾನ ಮೌಲ್ಯಗಳನ್ನು ಧಿಕ್ಕರಿಸಿ ಬಂಡಾಯ ಸಾರುತ್ತಾರೆ. ಇದು ಹಸೀನಾ ಚಿತ್ರದ ಕಥಾ ಸಾರಾಂಶ.

ಈ ಚಿತ್ರ ಎಲ್ಲಾ ಧರ್ಮಗಳಲ್ಲಿರುವ ಕುರುಡು ನಂಬಿಕೆ, ಮೌಢ್ಯ ಮತ್ತು ಪುರುಷ ಪ್ರಧಾನ ವ್ಯವಸ್ಥೆಯಲ್ಲಿನ ಲೋಪಗಳನ್ನು ಸೂಕ್ಷ್ಮವಾಗಿ ತೆರೆದಿಡುತ್ತದೆ. ಮುತುವಲ್ಲಿ ಬೀದಿಯಲ್ಲಿ ಬರುತಿದ್ದರೆ ಹೆಂಗಸರು ಮಕ್ಕಳು ಅವರ ಹಾದಿಯಿಂದ ದೂರು ಸರಿಯುವುದು, ಇಲ್ಲವೆ ಮನೆ ಒಳಗೆ ಹೋಗುವುದು ಧರ್ಮದಲ್ಲಿರುವ ನಂಬಿಕೆಯನ್ನು ಬಿಂಬಿಸಿದರೆ, ಅದೇ ಜನ ಹಸೀನಾಳಿಗೆ ನ್ಯಾಯ ದೊರಕಿಸಲು ವಿಫಲವಾದ ಮುತುವಲ್ಲಿಗೆ ಯಾವ ಗೌರವವನ್ನು ನೀಡದೆ ಮೌಢ್ಯವನ್ನು ಧಿಕ್ಕರಿಸುವ ಮನೋಸ್ಥೈರ್ಯ ಮೆಚ್ಚುವಂತದ್ದು. ಹಸೀನಾ ಹತ್ತಾರು ಬಾರಿ ಮುತುವಲಿ ಮನೆಗೆ ಅರ್ಜಿ ಹೊತ್ತು ತಂದರೂ



ಅತ್ತ ಗಮನ ಹರಿಸದ ಆತ ಪುರುಷ ಪರ ವಹಿಸಿ ಯಾಕೂಬ್ ಜತೆ ಸೇರಿ ತನ್ನ ಸ್ಥಾನಕ್ಕಾಗಿ ಅರ್ಜಿಯನ್ನು 'ಕಡತ' ಸೇರಿಸುತ್ತಾನೆ. ಇಲ್ಲಿ ಧರ್ಮ-ಪುರುಷ ಪ್ರಧಾನತೆ-ವ್ಯಕ್ತಿ ಪ್ರತಿಷ್ಠೆಯಾಗಿ ಹಿಂದಿನ ಮುತುವಲ್ಲಿ ಮತ್ತು ಈಗಿನ ಮುತುವಲ್ಲಿ ನಡುವೆ ನಡೆಯುವ ಸಂಘರ್ಷ ಕಷ್ಟಕ್ಕೊಳಗಾದ ಜನತೆಯ ನೆರವಿಗೆ ಬಾರದೆ ಕೆವಲ ವ್ಯಕ್ತಿ ಪ್ರತಿಷ್ಠೆಯಾಗಿ ಮಾರ್ಪಡುವುದು ಕೂಡ ವ್ಯಕ್ತವಾಗುತ್ತದೆ.

ಇನ್ನೊಬ್ಬಾಕೆ ಸಂಪ್ರದಾಯಸ್ಥ ಕುಟುಂಬದ ವಿದ್ಯಾವಂತ ಮಹಿಳೆ. ಅವಳಿಗೆ ಧರ್ಮದಲ್ಲಿ ಮಹಿಳೆಯರ ಪಾಲಿನ ಸ್ಥಾನ ಮಾನಗಳ ಬಗ್ಗೆ ಅರಿವಿದೆ ಆದರೆ, ಪುರುಷ ಪ್ರಧಾನ ವ್ಯವಸ್ಥೆಗೆ ಅಂಜಿ ಹೊರ ಬರಲಾರದ ಸ್ಥಿತಿ. ಇಂದಿನ ಅನೇಕ ವಿದ್ಯಾವಂತ ಹಾಗೂ ಜಾಗೃತ ಮಹಿಳೆಯರನ್ನು ಬಿಂಬಿಸುತ್ತದೆ.

ಕೇವಲ ಮಕ್ಕಳನ್ನು ಹೆರುವ ಯಂತ್ರದಂತಿದ್ದ ಮುತುವಲ್ಲಿ ಮಡದಿ ಆ ಯಾತನೆಯಿಂದ ಮುಕ್ತಿ ಬಯಸಿರುತ್ತಾಳೆ. ಆದರೆ ಧರ್ಮದ ಹೆಸರಲ್ಲಿ ಅದನ್ನು ನಿರಾಕರಿಸಲಾಗುತ್ತಿರುತ್ತದೆ. ನೀವು ಹಿಂದಿನ ಬಾಗಿಲಿನಿಂದ ಓಡಾಡಿಕೊಂಡಿರಿ ಎಂದು ಹೇಳುವ ಮುತುವಲ್ಲಿ ಮಡದಿ ಟ್ರಂಕ್ ಸಮೇತ ತವರು ಮನೆಗೆ ತೆರಳುವುದು ಕೂಡ ಗೊಡ್ಡು ಧರ್ಮದಿಂದ ನ್ಯಾಯ ಸಿಗಲಾರದು, ನನಗೂ ಸಮಾನತೆ ಮತ್ತು ಸ್ವತಂತ್ರ ಇದೆ ಎಂಬುವುದನ್ನು ಸೂಚ್ಯವಾಗಿ ಹೇಳಿದಂತಿದೆ. ಅದೇ ರೀತಿ ವೈದ್ಯಕೀಯ ರಂಗದಲ್ಲಿ ಭ್ರೂಣ ಪರೀಕ್ಷೆ ಅಫರಾಧ ಎಂಬುವುದು ಗೊತ್ತಿದ್ದರೂ ಪರೀಕ್ಷಿಸುವ ವೈದ್ಯರ ಪಾತ್ರ ವಿದ್ಯಾವಂತರ ಹಣದ ಮೋಹ ತೋರಿಸಿದರೆ, ಗಂಡು ಸಂತಾನದ ಬಗೆಗಿನ ಸಮಾಜದ ಮೋಹವನ್ನು ತೆರೆದಿಡುವ ಮೂಲಕ ಆದುನಿಕ ಸಮಾಜದ ವಸ್ತು ಸ್ಥಿತಿಯನ್ನು ಚಿತ್ರ ತೆರೆದಿಡುತ್ತದೆ

ಖ್ಯಾತ ಬರಹಗಾರ್ತಿ ಬಾನು ಮುಷ್ತಾಕ್‌ರ ಕಥೆ ಆಧರಿಸಿರುವ ಈ ಚಿತ್ರ ಬದುಕಿಗೆ ಹತ್ತಿರವಾಗುವ ನಮ್ಮ ಮಧ್ಯದೊಳಗೆ ಘಟಿಸುತ್ತಿರುವ ಘಟನೆಯಂತೆ ಭಾಸವಾಗುತ್ತದೆ.

ತಾರ ಈ ಚಿತ್ರದಲ್ಲಿನ ಶ್ರೇಷ್ಟ ಅಭಿನಯಕ್ಕಾಗಿ ಈಗಾಗಲೇ ರಾಷ್ಟ್ರ ಪ್ರಶಸ್ತಿ ಪುರಸತರಾಗಿದ್ದಾರೆ. ಉಳಿದಂತೆ ರಾಮಚಂದ್ರ ಉಲ್ಲಾಳ, ಖುತು, ಚಿತ್ರಾಶೆಣೈ, ಬೇಬಿ ಸೌಂದರ್ಯ ಸಹಜ ಅಭಿನಯ ನೀಡಿದ್ದಾರೆ. ಇಸ್ರಾನ್ ನಿಸಾರ್ ಮತ್ತು ಎಂ.ಎನ್.ಸ್ವಾಮಿಯವರ ವಸ್ತ್ರಾಲಂಕಾರ ಚಿತ್ರಕ್ಕೆ ಮೆರಗು ನೀಡುತ್ತದೆ. ರಾಮಚಂದ್ರ ಐತಾಳ ಮತ್ತು ಜಿ.ಎಸ್.ಭಾಸ್ಕರರವರ ಛಾಯಾಗ್ರಹಣ ಪರಿಸರವನ್ನು ಹಿಡಿದಿಡುತ್ತದೆ. ಐಸಕ್ ಥಾಮಸ್‌ರವರ ಸಂಗೀತಾ ಚಿತ್ರಕ್ಕೆ ಪೂರಕವಾಗಿದೆ.

ಒಟ್ಟಾರೆ ಈ ಚಿತ್ರ ಸಾಮಾನ್ಯ ಚಿತ್ರಕ್ಕೆ ಹತ್ತಿರವಾದ ನಿರೂರಣಾ ಶೈಲಿ, ಕಥೆ ಮತ್ತು ಅಭಿನಯಗಳಿಂದ ನೆನಪಿನಲ್ಲಿ ಉಳಿಯುತ್ತದೆ.

■ **ಜಯರಾಮು.ಎಂ**

ಭಾರತದಲ್ಲಿ ಕ್ರಿಕೆಟ್ ಹೊರತುಪಡಿಸಿ ಇತರೆ ಕ್ರೀಡೆಗಳು ಜೀವಂತವಾಗಿವೆ!

ದೇಶದಲ್ಲಿ ಕ್ರೀಡೆ ಎಂದರೆ ಕ್ರಿಕೆಟ್ ಮಾತ್ರ ಎಂಬ ಭ್ರಾಂತಿ ಬೆಳೆದುನಿಂತಿದೆ. ಕ್ರಿಕೆಟ್‌ನಲ್ಲಿ 1983 ರ ನಂತರ ಭಾರತದ ಸಾಧನೆ ಏನೂ ಇಲ್ಲ. ಬೆರಳೆಣಿಕೆಯಷ್ಟು ಕ್ರಿಕೆಟ್ ಆಡುವ ದೇಶಗಳಲ್ಲಿ ಭಾರತದ ಸ್ಥಾನ ವಿಶ್ವಮಟ್ಟದಲ್ಲಿ ಇಂದು 7ನೇ ಸ್ಥಾನದಲ್ಲಿದೆ. ಭಾರತ ಕ್ರಿಕೆಟ್‌ನಲ್ಲಿ ಹೀನಾಯವಾಗಿ ಸೋಲುತ್ತಿದ್ದರೂ ಅದೇ ಒಂದು ಜನಪ್ರಿಯತೆ. ಕ್ರಿಕೆಟ್ ಜನಪ್ರಿಯತೆ ನಡುವೆಯೂ ಭಾರತದ ಇತರೆ ಕ್ರೀಡಾ ಪಟುಗಳು ವಿಶ್ವಮಟ್ಟದಲ್ಲಿ ಹಾಗೂ ಏಶ್ಯಾಖಂಡದಲ್ಲಿ ಸ್ಥಾನಗಳಿಸಿ ದೇಶಕ್ಕೆ ಕೀರ್ತಿ ತಂದಿರುವ ವಿಷಯ ಕ್ರಿಕೆಟ್ ಮುಂದೆ ಗಣನೀಯವಾಗುತ್ತಿಲ್ಲ.

ನಮ್ಮ ದೇಶದ ಹೈದರಾಬಾದ್‌ನ 18 ರ ವಯಸ್ಸಿನ ಸಾನಿಯ ಮಿರ್ಜಾ ಅತ್ಯಂತ ಪ್ರಬಲ ಪೈಪೋಟಿ ಇರುವ ಅಮೆರಿಕಾ ಮುಕ್ತ ಟೆನಿಸ್‌ನಲ್ಲಿ ನಾಲ್ಕನೇ ಸುತ್ತು ಪ್ರವೇಶಿಸಿದ್ದು ದೊಡ್ಡಸಾಧನೆ. ಅದೂ ವೃತ್ತಿಪರ ಟೆನ್ನಿಸ್ ಸ್ಪರ್ಧೆಯಲ್ಲಿ ಈ ಮಟ್ಟದ ಸಾಧನೆ ಕಷ್ಟಕರವಾದದ್ದು.

ದಿಟ್ಟ ಸಾಧನೆ ಮಾಡಿದ ಸಾನಿಯ ಬಗ್ಗೆ ಅಭಿಮಾನ ಪಡುವ ಬದಲು ಕೆಲವು ಮುಸ್ಲಿಂ ಮೂಲಭೂತವಾದಿಗಳು ಆಕೆ ಕ್ರೀಡೆಯಲ್ಲಿ ತೊಡಬೇಕಾಗಿರುವ ಉಡುಪಿನ ವಿರುದ್ಧ 'ಫತ್ವಾ' ಹೊರಡಿಸುವ ಮಾತನಾಡುತ್ತಿದ್ದಾರೆ. ಈ ಬಗ್ಗೆ ಎದೆಗುಂದದೆ ಮುನ್ನಡೆದಿರುವ ಸಾನಿಯ ಧೈರ್ಯ ಅಭಿನಂದನಾರ್ಹವಾಗಿದೆ.

ವಿಶ್ವಮಟ್ಟದ ಸ್ಪರ್ಧೆಯಲ್ಲಿ ಭಾರತಕ್ಕೆ ಪ್ರಥಮ ಬಾರಿಗೆ ಪದಕ ತಂದ ಕೀರ್ತಿ ಹೊತ್ತಿರುವ ಭಾರತದ ಉದ್ದ ಜಿಗಿತ ಸ್ಪರ್ಧಿ ಅಂಜು ಬಾಬಿ ಜಾರ್ಜ್



ಸಾನಿಯಾ ಮಿರ್ಜಾ



ಅಂಜು ಬಾಬ್ಬಿ ಜಾರ್ಜ್

ಮೊನಾಕೋದಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಎರಡನೇ ಬಾರಿಗೆ ಪುನಃ ಎರಡನೇ ಸ್ಥಾನ ಗಳಿಸಿ ಬೆಳ್ಳಿ ಪದಕ ಪಡೆದಿರುತ್ತಾರೆ.

ಕೊರಿಯಾದ ಇಂಚೊನ್ ನಲ್ಲಿ ನಡೆದ ಏಷ್ಯನ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಭಾರತದ ವನಿತೆಯರು ಅಪ್ರತಿಮ ಸಾಧನೆ ನಡೆಸಿದ್ದು ದೇಶದಲ್ಲಿ ಪ್ರಮುಖ ಸುದ್ದಿಯಾಗುತ್ತಿಲ್ಲ.

ಏಷ್ಯನ್ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಬಂಗಾಳದ ಬಾಲೆ ಸೋಮಾ ಬಿಸ್ವಾಸ್ ಮಹಿಳೆಯರ 6 ಕ್ರೀಡೆಗಳನ್ನೊಳ ಗೊಂಡ ಹೆಪ್ಟಾತ್ಲಾನ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸಿದ್ದಾರೆ. ಇದೇ ಸ್ಪರ್ಧೆಯಲ್ಲಿ ಬಂಗಾಳದ ಇನ್ನೊಬ್ಬ ಸ್ಪರ್ಧಿ ಸುಷ್ಮಿತಾ ಸಿಂಘರಾಯ್ ಬೆಳ್ಳಿಪದಕ ಗಳಿಸಿರುತ್ತಾರೆ. ಇದೇ ಕೂಟದಲ್ಲಿ ಮಹಿಳೆಯರ 400 ಮಿ. ಓಟದಲ್ಲಿ ಪಂಜಾಬಿನ ಮಂಜಿತ್ ಕೌರ್ ಚಿನ್ನದ ಪದಕ ಹಾಗೂ ಆಂಧ್ರದ ಬಾಲಕಿ ಸತಿ ಗೀತಾ ಬೆಳ್ಳಿ ಪದಕ ಗಳಿಸಿರುತ್ತಾರೆ. ಮಹಿಳೆಯರ 400 ಮಿ. ರಿಲೇ ಸ್ಪರ್ಧೆಯಲ್ಲಿ ಭಾರತದ ವನಿತೆಯರ ತಂಡ ಚಿನ್ನದ ಪದಕ ಗಳಿಸಿದೆ ಹಾಗೂ ಇದೇ ಕ್ರೀಡಾಕೂಟದಲ್ಲಿ ಅಂಜುಬಾಬಿ ಜಾರ್ಜ್ ಉದ್ದ ಜಿಗಿತದಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.

ಅತ್ಯಂತ ಕಠಿಣ ಪರಿಶ್ರಮವಿರಬೇಕಾದ ಅಥ್ಲೆಟಿಕ್ಸ್‌ನಲ್ಲಿ ವಿಶ್ವಮಟ್ಟದಲ್ಲಿ ಹಾಗೂ ಏಷ್ಯಾ ಮಟ್ಟದಲ್ಲಿ ಸಾಧನೆ ಮಾಡುವುದು ಇಂದಿನ ವೈಜ್ಞಾನಿಕ ಸ್ಪರ್ಧಾತ್ಮಕ ಯುಗದಲ್ಲಿ ಅತ್ಯಂತ ಕಷ್ಟಕರವಾದದ್ದು. ಸಾಮಾನ್ಯ ಬಡ ಕುಟುಂಬದಿಂದ ಬಂದ ಭಾರತದ ಮಹಿಳಾ ಕ್ರೀಡಾ ಪಟುಗಳು ವಿಶ್ವ ಹಾಗೂ ಏಷ್ಯಾ ಮಟ್ಟದಲ್ಲಿ ಕ್ರೀಡೆಯಲ್ಲಿ ಸಾಧನೆ ಗೈದಿರುವುದು ಅವಿಸ್ಮರಣೀಯ.

ಇದರ ಜೊತೆಗೆ ಇಂಡೋನೇಶ್ಯಾದ ಜಕಾರ್ತದಲ್ಲಿ ನಡೆದ ಏಷ್ಯನ್ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ಭಾರತದ ಸ್ಪರ್ಧಿಗಳು ಒಟ್ಟು 9 ಪದಕ ಗಳಿಸಿರುವುದು ಎಲ್ಲಿಯೂ ಸುದ್ದಿಯಾಗಲಿಲ್ಲ. 'ರಾಮ', 'ಅರ್ಜುನ', 'ಏಕಲವ್ಯ'ರ ನಾಡಾದ ಭಾರತದಲ್ಲಿ ಬಿಲ್ಲುಗಾರಿಕೆ ಒಂದು ಒಲಂಪಿಕ್ ಮಟ್ಟದ ಕ್ರೀಡೆ ಎಂದು ಅನೇಕರಿಗೆ ತಿಳಿದಿಲ್ಲ. ಅತ್ಯಂತ ಕಠಿಣ ಪರಿಶ್ರಮ, ಅಭ್ಯಾಸ, ಏಕಾಗ್ರತೆ ಬೇಕಾದ ಈ ಕ್ರೀಡೆಯಲ್ಲಿ ಮುಖ್ಯವಾಗಿ ಭಾರತದ ಗುಡ್ಡಗಾಡು, ಬುಡಕಟ್ಟು ಹಾಗೂ ಆದಿವಾಸಿ ಕ್ರೀಡಾಪಟುಗಳು ವಿಶ್ವಮಟ್ಟದಲ್ಲಿ ಸಾಧನೆ ಮೆರೆದಿದ್ದಾರೆ.

ಏಷ್ಯನ್ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ಭಾರತ ಎರಡು ಚಿನ್ನ, ನಾಲ್ಕು ಬೆಳ್ಳಿ ಪದಕ ಹಾಗೂ ಮೂರು ಕಂಚಿನ ಪದಕ ಗಳಿಸಿದೆ. ಈ ತಂಡದಲ್ಲಿದ್ದ ಬಿಲ್ಲುಗಾರರಲ್ಲಿ ಪುರುಷರ ವಿಭಾಗದಲ್ಲಿ ತರುಣ್ ದೀಪ್ ರೈ, ನೇಪಾಳಿ ಮೂಲದ ಗುಡ್ಡಗಾಡು ಪ್ರದೇಶದ ಯುವಕ. ಮಹಿಳೆಯರ ವಿಭಾಗದಲ್ಲಿ ಪದಕ ಗಳಿಸಿರುವ ಜಾನು ಹನ್ಸ್‌ದಾ, ಬನ್ಸಾರಾ ಲಿನ್‌ಧಾರಾ, ಸಕ್ರೊ ಬೆಸ್ರಾ ಹಾಗೂ ಮಂಜದಾ ಸೋಯ್ ಸಹಾ ಆದಿವಾಸಿಗಳು.

ಪುನಃ ಗಮನಿಸಬೇಕಾದ ಅಂಶವೆಂದರೆ ಕ್ರೀಡೆಯಲ್ಲಿ ದೇಶಕ್ಕೆ ಕೀರ್ತಿ ತರುವಲ್ಲಿ ಮಹಿಳೆಯರೇ ಮುಂದಿದ್ದಾರೆ.

■ **ಮೆಲ್ಕಿಯೋರ್ ಆರ್.ಡಿ.**

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH